ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 4 ಮಂಗಳವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 169 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠದ ಆಡಳಿತಾಧಿಕಾರಿಯಾಗಿ ನಾನು ನೇಮಕವಾಗಿದ್ದೇನೆ

ಬಿ.ಪಿ.ಭರತ್ ಅರಸ್ ಸ್ಪಷ್ಟನೆ

ಮೈಸೂರು,ಅ.3–ಚಿಕ್ಕಲ್ಲೂರು ಶ್ರೀ ಘನನೀಲಾ ಸಿದ್ದಪ್ಪಾಜಿ ಹಳೇಮಠ ದೇವಸ್ಥಾನ ಸೇರಿದಂತೆ ಶ್ರೀ ಧರೆಗೆ ದೊಡ್ಡವರ ಸಂಸ್ಥಾನ ಮಠಕ್ಕೆ ತಾನೇ ಆಡಳಿತಾಧಿಕಾರಿ ಎಂದು ಬಿ.ಪಿ.ಭರತ್ ಅರಸ್ ಅವರು ಸ್ಪಷ್ಟಪಡಿಸಿದ್ದಾರೆ. ಶ್ರೀ ಮಠಕ್ಕೆ ಯಾರೊಬ್ಬರನ್ನೂ ಆಡಳಿ ತಾಧಿಕಾರಿಯಾಗಿ ನೇಮಕ ಮಾಡಿಲ್ಲ ಎಂದು ಮಠದ ಪೀಠಾ ಧಿಪತಿ ಜ್ಞಾನಾನಂದ ಚನ್ನರಾಜೇ ಅರಸ್ ಅವರು ನೀಡಿದ್ದ ಹೇಳಿಕೆಗೆ ಸ್ಪಷ್ಟನೆ ನೀಡಿರುವ ಭರತ್ ಅರಸ್, 2020ರ ಡಿಸೆಂಬರ್ 14ರಂದು ಬಿಜಿ ಪುರ ಗ್ರಾಮದಲ್ಲಿ ನಡೆದ 13 ಕೋಮಿನ ಯಜಮಾನರು, ಸುತ್ತಮುತ್ತಲಿನ ಗ್ರಾಮಸ್ಥರು, ಬರಹಗಾರರು, ರೈತ ಹೋರಾಟಗಾರರು, ಬಿಜಿ ಪುರ ನಾಲಾ ಸಮಿತಿ ಹೋರಾಟಗಾರರು, ಮಳವಳ್ಳಿ ಮುಟ್ಟದ ಪೀಠಾಧ್ಯಕ್ಷರಾದ ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್ ಸಾನಿಧ್ಯದಲ್ಲಿ ಸಂಧಾನ ಸಭೆ ನಡೆದಿದ್ದು, ಈ ಸಭೆಯಲ್ಲಿ ದಿವಂಗತ ಬಿ.ಎಲ್. ಪ್ರಭುದೇವರಾಜೇ ಅರಸ್ ಅವರು ಮಾಡುತ್ತಿದ್ದ ಕಾರ್ಯವನ್ನು ಅವರ ಮಕ್ಕಳು ಮುಂದುವರೆಸಿಕೊಂಡು ಹೋಗಲು ತೀರ್ಮಾನಿಸಲಾಗಿತ್ತು. ಅದರ ಪ್ರಕಾರ ಅವರ ಕಿರಿಯ ಪುತ್ರನಾದ ನನ್ನನ್ನು (ಭರತ್ ಅರಸ್) ಮಂಟೇಸ್ವಾಮಿ ಸಂಸ್ಥಾನಕ್ಕೆ ಆಡಳಿತಾಧಿಕಾರಿಯಾಗಿ ಆಯ್ಕೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.



ಮೈಸೂರಿನ ಪಡುವಾರಹಳ್ಳಿಯಲ್ಲಿ ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕ ಪಡುವಾರ ಹಳ್ಳಿ ಎಂ.ರಾಮಕೃಷ್ಣ, ನಗರಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಒಕ್ಕಲಿಗರ ಸಂಘದ ನಿರ್ದೇಶಕ ದಾಸನಕೊಪ್ಪಲು ಜಯರಾಂ ಎಸ್.ಕೃಷ್ಣಕುಮಾರ್, ಬಿ.ಕುಮಾರ್, ವಿಜಿಲಿನ್ಸ್ ಕಮಿಟಿ ಸದಸ್ಯ ಎಂ.ಶಿವಪ್ರಕಾಶ್, ಜಯರಾಂ, ಕೇಬಲ್ ಕಿಟ್ಟಿ, ಸುರೇಂದ್ರ ಇದ್ದರು.

ಜಂಬೂ ಸವಾರಿ ಮಾರ್ಗದಲ್ಲಿ ಮರದ ಬ್ಯಾರಿಕ್ಯಾಡ್ ನಿರ್ಮಾಣ

ಮೈಸೂರು, ಅ.3(ಎಸ್‌ಪಿಎನ್)– ಜಂಜೂ ಸವಾರಿ ಮೆರವಣಿಗೆ ಕ್ಷಣಗಣನೆ ಆರಂಭ ವಾಗುತ್ತಿದ್ದಂತೆ ಜಂಜೂಪಡೆ ಸಾಗುವ ಮಾರ್ಗದ ಇಕ್ಕೆಲಗಳಲ್ಲಿ ಜನರು ಕುಳಿತು ಕಣ್ತುಂಬಿಕೊಳ್ಳಲು ಬ್ಯಾರಿಕ್ಯಾಡ್, ಪೆಂಡಾಲ್ ಹಾಕುವ ಕಾರ್ಯ ಅಂತಿಮ ಹಂತ ತಲುಪಿದೆ. ಬಲರಾಮ ವೃತ್ತದಿಂದ ಬನ್ನಿಮಂಟಪದವರೆಗೆ ರಸ್ತೆಯ 2 ಬದಿಯಲ್ಲಿ ಜನರು ಮರದ ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಬಲರಾಮ ವೃತ್ತದಿಂದ ಆಯುರ್ವೇದ ಕಾಲೇಜು ವೃತ್ತದವರೆಗೆ ಫುಟ್‌ಪಾತ್‌ನಲ್ಲಿ ಪೆಂಡಾಲ್ ಹಾಕಲಾಗಿದೆ. ಜಂಬೂ ಸವಾರಿಗೆ ಎರಡು ದಿನ ಬಾಕಿ ಇರುವಂತೆಯೇ ಹಲವೆಡೆ ಸಾರ್ವಜನಿಕರು ಚಾಪೆ ಹಾಗೂ ಬೆಡ್‌ಶೀಟ್‌ಗಳನ್ನು ಹಾಸಿ, ತಮ್ಮ ಜಾಗವನ್ನು ಕಾಯ್ದಿರಿಸಿಕೊಂಡಿದ್ದಾರೆ.



ಎಂ.ಆರ್.ಕೃಷ್ಣಮೂರ್ತಿ ನಿಧನ

ಮೈಸೂರು,ಅ.3–ಮೈಸೂರಿನ ಬೃಂದಾವನ ಬಡಾವಣೆ 1ನೇ ಹಂತದ ನಿವಾಸಿ ಸಂಬಾರ ಮಂಡಲಿ ನಿವೃತ್ತ ಅಧೀಕ್ಷಕರಾದ ಎಂ.ಆರ್. ಕೃಷ್ಣಮೂರ್ತಿ (67) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದು, ಅಂತ್ಯಕ್ರಿಯೆ ಗೋಕುಲಂನ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಆಯುಧ ಪೂಜೆಗೆ ಭರದ ಸಿದ್ಧತೆ;

ಪೂಜಾ ಸಾಮಗ್ರಿ ಖರೀದಿ ಬಲು ಜೋರು





ಮೈಸೂರು,ಅ.3(ಎಂಟಿವೈ)–ದಸರಾ ಮಹೋತ್ಸವದ ನಡುವೆಯೇ ಆಯುಧ ಪೂಜೆಗೆ ಮೈಸೂರಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸೋಮವಾರ ಆಯುಧ ಪೂಜೆಗೆ ಬೇಕಾದ ಪೂಜಾ ಸಾಮಗ್ರಿಗಳ ಖರೀದಿ ಭರಾಟೆ ಜೋರಾಗಿತ್ತು.

ಪ್ರತಿ ವರ್ಷದಂತೆ ಈ ವರ್ಷವೂ ಆಯುಧ ಪೂಜೆಗೆ ಜನ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಇಂದು ಬೆಳಗ್ಗೆ ಯಿಂದಲೇ ಪೂಜಾ ಸಾಮಗ್ರಿಗಳ ಖರೀದಿ ಬಲು ಜೋರಾ ಗಿತ್ತು. ಇಂದು ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆ, ಪಡುವಾರಹಳ್ಳಿ, ಅಗ್ರಹಾರ, ದೇವರಾಜ ಮಾರುಕಟ್ಟೆ, ಚಿಕ್ಕಗಡಿಯಾರ ವೃತ್ತ, ರಿಂಗ್ ರಸ್ತೆ ಜಂಕ್ಷನ್ ಸೇರಿದಂತೆ ವಿವಿಧೆಡೆಯಲ್ಲಿ ಹೂವು, ಹಣ್ಣು, ಬೂದುಗುಂಬಳ ಕಾಯಿ, ನಿಂಬೆಹಣ್ಣು, ಕಡಲೇಪುರಿ, ಸಿಹಿ ತಿನಿಸು ಸೇರಿದಂತೆ ವಿವಿಧ ಪೂಜಾ ಸಾಮಗ್ರಿಗಳ ಮಾರಾಟ ಜೋರಾಗಿತ್ತು. ದೊಡ್ಡ ದೊಡ್ಡ ಕಾರ್ಖಾನೆ, ವಿವಿಧ ಕಂಪನಿಗಳಲ್ಲಿ ಪೂಜೆಗೆ ಸಿದ್ಧತೆ, ಸಾಮಗ್ರಿಗಳ ಖರೀದಿ ಭರದಿಂದ ಸಾಗಿತ್ತು. ಇದರಿಂದ ಎಲ್ಲಾ ಮಾರುಕಟ್ಟೆಗಳಲ್ಲಿ ಆಯುಧ ಪೂಜೆಗೆ ಬೇಕಾದ ಸಾಮಗ್ರಿಗಳ ಮಾರಾಟ ಭರ್ಜರಿಯಾಗಿ ನಡೆಯಿತು. ಆಯುಧ ಪೂಜೆಯ ಹಿನ್ನೆಲೆಯಲ್ಲಿ ಪೂಜಾ ಸಾಮಗ್ರಿ ಬೆಲೆ ಗಗನಕ್ಕೇರಿತ್ತು. ಸೇವಂತಿ ಹೂವು ಒಂದು ಮಾರಿಗೆ 120ರಿಂದ 180 ರೂ.ವರೆಗೆ ದರ ನಿಗದಿ ಮಾಡಲಾಗಿತ್ತು. ಬೂದುಗುಂಬಳಕಾಯಿ 50ರಿಂದ 120 ರೂ. ವರೆಗೂ ಮಾರಾಟ ಮಾಡಲಾಗುತ್ತಿತ್ತು. 1 ನಿಂಬೆಹಣ್ಣಿನ ಬೆಲೆ 10 ರೂ. ಹಬ್ಬದ ಹಿನ್ನೆಲೆಯಲ್ಲಿ ಪೂಜಾ ಸಾಮಗ್ರಿಗಳ ಬೆಲೆ ಗಗನಕ್ಕೇರಿದ್ದರೂ ಜನರು ಮಾತ್ರ ಉತ್ಸಾಹದಿಂದ ಖರೀದಿಸುವ ಮೂಲಕ ಹಬ್ಬದ ತಯಾರಿಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ಕೆಲವು ಸಂಸ್ಥೆಗಳಲ್ಲಿ ಸೋಮವಾರ ಸಂಜೆಯೇ ಆಯುಧ ಪೂಜೆ ನೆರವೇರಿತು.




ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ರಾಜ್ಯಮಟ್ಟದ ಕಿಡ್ಸ್ ಬೈಕ್ ರೇಸ್‌ನಲ್ಲಿ ಮೈಸೂರಿನ ಮೆಕ್ಯಾನಿಕ್ ಫಸ್ಟ್ ಕಾರ್ ಕೇರ್‌ನ ಇಮ್ರಾನ್ ಅವರ ಪುತ್ರ ಅಮ್ರಾನ್ (ಬಲದಿಂದ ಮೊದಲನೆಯವನು) ಮೂರನೇ ಬಹುಮಾನ ಗಳಿಸಿದ್ದಾನೆ.



ನರಸಿಂಹರಾಜ ಕ್ಷೇತ್ರ ಶಾಸಕ ತನ್ವೀರ್ ಸೇಠ್ ಅವರ ಹುಟ್ಟುಹಬ್ಬವನ್ನು ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯ್ಯದ್ ಇಕ್ಬಾಲ್ ನೇತೃತ್ವದಲ್ಲಿ ಫೌಂಟನ್ ಸರ್ಕಲ್‌ನಲ್ಲಿ ಭಾರೀ ಗಾತ್ರದ ಕೇಕ್ ಕತ್ತರಿಸುವ ಮೂಲಕ ಆಚರಿಸಿದರು. ಈ ವೇಳೆ ಮಹಮದ್ ಇಕ್ಬಾಲ್, ಎಂ.ರಸೂಲ್, ಮಝರ್ ಪಾಷಾ, ಸಾದಿಕ್ ಪಾಷಾ, ಮೊಹಮ್ಮದ್ ಇರ್ಫಾನ್, ಫಾಲ್ಕನ್ ವಾಸಿಮ್, ಟಿಪ್ಪು, ಅಪ್ರೋಜ್ ಪಾಷಾ, ಸೈಯ್ಯದ್ ಫಾರೂಖ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿಖಾನ್, ರೆಹಮಾನ್ ಖಾನ್, ಶಹೀನ್ ಷಾ ಅಹಮದ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಸಿಎಂ ಬೊಮ್ಮಾಯಿ ಅವರಿಂದ ಮೈಸೂರು ದಿಗಂತ ನೂತನ ಕಚೇರಿ ಉದ್ಘಾಟನೆ

ಮೈಸೂರು,ಅ.3(ಆರ್‌ಕೆ)–ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್‌ನ ಚದುರಂಗ ರಸ್ತೆಯಲ್ಲಿ ನಿರ್ಮಿಸಿರುವ 'ಮೈಸೂರು ದಿಗಂತ' ಸಂಜೆ ದಿನಪತ್ರಿಕೆಯ ನೂತನ ಕಚೇರಿ ಸಮುಚ್ಚಯ 'ಇಂದ್ರ ಲೋಕ' ಸಭಾ ಭವನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಕ್ಟೋಬರ್ 5ರಂದು ಬೆಳಗ್ಗೆ 10.30 ಗಂಟೆಗೆ ಉದ್ಘಾಟಿಸುವರು.



ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪತ್ರಿಕೆ ಮುದ್ರಣಾಲಯವನ್ನು ಉದ್ಘಾಟಿಸುವರು. ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಲ್.ನಾಗೇಂದ್ರ, ಡಾ. ಯತೀಂದ್ರ ಸಿದ್ದರಾಮಯ್ಯ, ಎಸ್.ಎ. ರಾಮದಾಸ್, ತನ್ವೀರ್ ಸೇಠ್, 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಆಂದೋಲನ ಸಂಪಾದಕ ರವಿ ಕೋಟಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ವಿಧಾನ ಪರಿಷತ್ ಸದಸ್ಯರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು 'ಮೈಸೂರು ದಿಗಂತ' ಸಂಪಾದಕ ಮಳಲಿ ನಟರಾಜ್‌ಕುಮಾರ್, ಕಾರ್ಯನಿರ್ವಾಹಕ ಸಂಪಾದಕ ಘನವಂತ ಮಳಲಿ ತಿಳಿಸಿದ್ದಾರೆ.

ನಾಳೆ ಫ್ಯಾಶನ್ ಶೋ

ಮೈಸೂರು,ಅ.3–ಮೈಸೂರಿನ ಕುವೆಂಪು ನಗರದ ಸುಬ್ಬಣ್ಣ ಗೌರಮ್ಮ ಟ್ರಸ್ಟ್ ವತಿಯಿಂದ ದಸರಾ ಪ್ರಯುಕ್ತ ನಾಳೆ (ಅ.5) ಬುಧವಾರ ಬೆಳಗ್ಗೆ 10 ಗಂಟೆಗೆ ಮಹಿಳೆಯರಿಗಾಗಿ ಫ್ಯಾಶನ್ ಶೋ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. 30 ವರ್ಷದೊಳಗಿನ ಆಸಕ್ತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ.ಮಂಜುಳಾ ಉಮೇಶ್, ನಂ.1063, ಸಪ್ತಗಿರಿ ನಿಲಯ, ನ್ಯೂ ಕಾಂತರಾಜ ಅರಸು ರಸ್ತೆ, ಕುವೆಂಪು ನಗರ, ಮೊ.98450 98708 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...

ಶರನ್ನವರಾತ್ರಿ ಕಾರ್ಯಕ್ರಮ



■ **ತ್ರಯೀನ್ಯಾಸ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 5ಕ್ಕೆ ಶ್ರೀ ವಾಂಛಾಕಲ್ಪಲತಾ ಶ್ರೀವಿದ್ಯಾ ಗಣೇಶ ಪರ್ಯಾಯ ಹೋಮ, ಬೆಳಗ್ಗೆ 10ಕ್ಕೆ ಸಗ್ರಹಮಖ ನವಚಂಡಿ ಯಾಗ, ಮಧ್ಯಾಹ್ನ 1ಕ್ಕೆ ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ:** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಶ್ರೀ ನವಚಂಡಿಕಾ ಹೋಮ, ಶ್ರೀ ಚಾಮುಂಡೇಶ್ವರಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ಶ್ರೀ ಚಾಮುಂಡೇಶ್ವರಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಸಂಜೆ 6 ಗಂಟೆಯಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದ್ವಾನ್ ಎನ್. ಶ್ರೀನಾಥ್ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ಚಾಮುಂಡಿದೇವಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಕೆ.ಟಿ.ಸ್ಟ್ರೀಟ್, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ನವಾವರಣ ಪೂಜೆ, ಚಂಡಿ ಹೋಮ, ನವಾವರಣ ಪೂಜೆ, ಬೆಳಗ್ಗೆ 9ಕ್ಕೆ ವಿದುಷಿ ಎಸ್.ಐಶ್ವರ್ಯ ಮತ್ತು ವಿದುಷಿ ಎಸ್.ಸೌಂದರ್ಯ ಅವರಿಂದ ಕರ್ನಾಟಕ ಸಂಗೀತ ದ್ವಂದ್ವ ಗಾಯನ, ಮ.12ಕ್ಕೆ ಅನ್ನಾರ್ಚನೆ, ಶಕ್ತಿದುರ್ಗಿ ಪೂಜೆ, ಆಯುಧ ಪೂಜೆ, ಮ.3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ರಿಂದ ಪೂಜ್ಯ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದ ಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಬೆಳಗ್ಗೆ 9ಕ್ಕೆ ಶ್ರೀಚಂಡಿಕಾಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ದಂಪತಿ ಪೂಜೆ, ಅನ್ನಪೂರ್ಣೇಶ್ವರಿ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ



ಇಂದಿನ ಪಂಚಾಂಗ

4.10.2022 ಮಂಗಳವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ : ಉಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಆಯುಧ ಪೂಜೆ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ರಂಗಗೌರವ ಪುರಸ್ಕಾರ ಸಮಾರಂಭ, ರಂಗಗೌರವ : ಹಿರಿಯ ರಂಗಕರ್ಮಿ ಡಾ.ನ.ರತ್ನ, ಮುಖ್ಯ ಅತಿಥಿಗಳು: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್‌ಕುಮಾರ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಉಪಸ್ಥಿತರು: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಮಂಗಳೂರಿನ ಕಲಾಭಿ ಥಿಯೇಟರ್ ಅವರಿಂದ ಮಮತೆಯ ಸುಳಿ ನಾಟಕ ಪ್ರದರ್ಶನ, ನಿರ್ದೇಶನ: ಗಣೇಶ್ ಮಂದಾರ್ತಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವದ ಅಂಗವಾಗಿ ಗುಜರಾತಿ ಗರ್ಬಾ ಹಾಗೂ ದಾಂಡಿಯಾ ಜಾನಪದ ನೃತ್ಯ ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 10 ರಿಂದ ನವಚಂಡಿ ಹೋಮ, ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಶರನ್ನವರಾತ್ರಿ ಮಹೋತ್ಸವ, ಆಯುಧ ಪೂಜಾ–ಫಲಪುಷ್ಪಗಳಿಂದ ಅಲಂಕಾರ, ಶ್ರೀಮತಿ ವಿಜಯ ಸುದರ್ಶನ್ ತಂಡದವರಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.

■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ಹರಿದ್ರಾ ಕುಂಕುಮ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶರನ್ನವರಾತ್ರಿ ಪ್ರಯುಕ್ತ ವಿಸ್ತಾರ ಸಹಸ್ರ ಚಂಡೀಹೋಮ, ಶ್ರೀ ಚಕ್ರನವಾವರಣೆ, ಸಿದ್ಧಿದಾತ್ರಿ ದುರ್ಗಾಪೂಜಾ ಶ್ರೀ ಚಕ್ರನವಾವರಣ ಪೂಜೆ, ಶತಚಂಡಿಕಾ ಯಾಗ, ಪೂರ್ಣಾಹುತಿ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಮಹಾನವಮಿ, ಬೆಳಗ್ಗೆ 7 ರಿಂದ ಶ್ರೀ ದುರ್ಗಾಮಾತೆಗೆ ಪೂಜೆ, ಚಂಡೀ ಪಾರಾಯಣ, ಭಜನೆ, ಆರತಿ, ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಆಶ್ರಮದ ಆವರಣ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** 48ನೇ ಬ್ರಹ್ಮೋತ್ಸವ, ಬೆಳಗ್ಗೆ ಪ್ರಾಕಾರೋತ್ಸವ ನಿವೇದನ, ಮಂಗಳಾರತಿ, ಶಾತ್ತುಮೊರೈ, ನವಗ್ರಹ ಹೋಮ, ಮೂರ್ತಿ ಹೋಮ, ತೀರ್ಥಪ್ರಸಾದ ವಿನಿಯೋಗ, ಸಂಜೆ ಗಜ ವಾಹನೋತ್ಸವ, ಗಜೇಂದ್ರ ಮೋಕ್ಷ, ನಿವೇದನ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.


■ **ಮೈಸೂರು ಬೊಂಬೆ ರಂಗಮಂದಿರ :** ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗಮಂದಿರ, ಜೆ.ಸಿ.ನಗರ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ದಸರಾ ವಿಶೇಷ ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್.ಗೋಪಾಲ್, 6.40ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜ ಮಾರ್ಗ –ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ' ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ, ಪ್ರಸ್ತುತಿ–ಉಮೇಶ್.ಎಸ್., 9.05 'ಹರಿಕೇಶಾಂಗಿ ಮಾತಂಗಿ' ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ–ಮೈಸೂರು ಎಸ್.ರಾಜಲಕ್ಷ್ಮಿ, 10.00ಶ್ರೀ ಕಮಲಾಂಬ ಜಯಂತಿ–ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೀರ್ತನೆಗಳನ್ನಾಧರಿಸಿದ ವಿಶೇಷ ಸರಣಿ. ಮಧ್ಯಾಹ್ನ: 12.05 ವನಿತಾವಿಹಾರ, 12.30 ದೇವರ ನಾಮ–ವಿಧ್ಯಾ ಭೂಷಣ, ಡಾ.ರಾಜ್‌ಕುಮಾರ್, 12.45 ಹಿರಿಯ ನಾಗರೀಕರ ರಕ್ಷಣಾ ಕಾನೂನು–2007. ಮಾತನಾಡುವವರು ವಕೀಲರಾದ ಓ. ಶ್ಯಾಮಭಟ್, 1.20'ಜಂಬೂಸವಾರಿ–ಮೈಸೂರು ದಸರಾ ಆನೆ ಸ್ಟೋರಿ' ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ ಪ್ರಸ್ತುತಿ–ಅಬ್ದುಲ್ ರಶೀದ್ ಹಾಗೂ ಡಾ.ಮೈಸೂರು ಉಮೇಶ್, 3.00 ನಾಡಹಬ್ಬ ದಸರಾ ಸಂದರ್ಭದಲ್ಲಿ ದುರ್ಗಾ ಸಪ್ತಶತಿಯನ್ನಾಧರಿಸಿದ ಕಥಾ ಕಾಲಕ್ಷೇಪ, ಸರಣಿ 'ದೇವೀ ಮಹಾತ್ಮೆ', 4.00 ಕಥಾ ಕಾಲಕ್ಷೇಪ 'ಕಟೀಲು ಕ್ಷೇತ್ರ ಮಹಾತ್ಮೆ'–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.30 ಚಾಮುಂಡಿ ಹಬ್ಬ–ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ.ಪಿ.ಕೆ.ರಾಜಶೇಖರ್ ಪ್ರಸ್ತುತಿ–ಡಾ. ಮೈಸೂರು ಉಮೇಶ್, ಭಾಗವಹಿಸುವವರು ಜಯಲಕ್ಷ್ಮಮ್ಮ ಮತ್ತು ಸಂಗಡಿಗರು, 6.50 ಕೃಷಿರಂಗ–ಕಿಸಾನ್‌ವಾಣಿ– ಹೈನುರಾಸುಗಳಲ್ಲಿ ಆಹಾರ ನಿರ್ವಹಣೆ ಕುರಿತು ಡಾ.ಕೆ.ಎ.ದರ್ಶನ್ ಅವರೊಂದಿಗೆ ಸಂದರ್ಶನ, 10.00 ಕಾವ್ಯವಾಚನ, ವಾಚನ– ಹೆಚ್.ಯಜ್ಞೇಶ್, ವ್ಯಾಖ್ಯಾನ– ಸರ್ಪಂಗಳ ಈಶ್ವರಭಟ್

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಂದಿಧ್ವಜ ಪೂಜೆ (ಅರಮನೆ ಬಲರಾಮ ದ್ವಾರ)

ಮಧ್ಯಾಹ್ನ 2.36 ರಿಂದ 2.50 ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ

ವಿಜಯದಶಮಿ ಮೆರವಣಿಗೆ (ಅರಮನೆ ಒಳಾವರಣ)

ಸಂಜೆ 5.07ರಿಂದ 5.18 ರವರೆಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ

ಉದ್ಘಾಟನೆ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು : ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್, ಇಂಧನ ಸಚಿವ ವಿ. ಸುನೀಲ್ ಕುಮಾರ್, ಅಧ್ಯಕ್ಷತೆ: ಶಾಸಕ ಎಸ್.ಎ.ರಾಮದಾಸ್

ಪಂಜಿನ ಕವಾಯತು (ಟಾರ್ಚ್‌ಲೈಟ್ ಪೆರೇಡ್)


ಸಂಜೆ 7.30 ಗಂಟೆಗೆ ಸ್ಥಳ: ಬನ್ನಿಮಂಟಪ ಮೈದಾನ

ಗೌರವ ವಂದನೆ ಸ್ವೀಕರಿಸುವವರು: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಉಪಸ್ಥಿತರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಕೇಂದ್ರ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಹ್ಲಾದ್ ಜೋಶಿ, ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ಕೃಷಿ ಹಾಗೂ ಕಲ್ಯಾಣ ಖಾತೆ ಸಚಿವೆ ಶೋಭಾ ಕರಂದ್ಲಾಜೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ, ಕೇಂದ್ರ ರಸಾಯನಿಕ, ರಸಗೊಬ್ಬರ ಹಾಗೂ ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಇಂಧನ ಸಚಿವ ವಿ.ಸುನೀಲ್ ಕುಮಾರ್, ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್.

ಶರನ್ನವರಾತ್ರಿ ಕಾರ್ಯಕ್ರಮ



■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಶ್ರೀ ಧನ್ವಂತರೀ ಹೋಮ, ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ, ಶ್ರೀ ಗಜಲಕ್ಷ್ಮಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.



ನಾಳಿನ ಪಂಚಾಂಗ

5.10.2022 ಬುಧವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ : ಶ್ರವಣ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ಶ್ರೀಗಜಲಕ್ಷ್ಮಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಸಂಜೆ 6ರಿಂದ.

■ **ಶ್ರೀ ಕಾಲ ಭೈರವೇಶ್ವರಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ವಿಜಯಲಕ್ಷ್ಮೀ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಕೆ.ಟಿ.ಸ್ಟ್ರೀಟ್, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ವಿಜಯದಶಮಿ ಆಚರಣೆ, ಮ. 12ಕ್ಕೆ ಪೂರ್ಣಕಲಾ ರಾಜರಾಜೇಶ್ವರಿ ಪೂಜೆ, ಹೋಮ ಪೂರ್ಣಾಹುತಿ, ಅನ್ನಾರ್ಚನೆ, ಕಲಶ ಉದ್ವಾಸನೆ, ಶಮೀಪೂಜೆ, ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ದೇವಿ ರಥೋತ್ಸವ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ, ಬೆಳಗ್ಗೆ 9ಕ್ಕೆ ಲಕ್ಷಾರ್ಚನೆ ಹೋಮ, ಸಂಜೆ 6ಕ್ಕೆ ಶಮೀ ಪೂಜೆ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ವಿಜಯದಶಮಿ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10ರಿಂದ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಶರನ್ನವರಾತ್ರಿ ಮಹೋತ್ಸವ, ಸರ್ವಾಭರಣ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.

■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ವಿಜಯದಶಮಿ, ಶ್ರವಣ ನಕ್ಷತ್ರ, ವಜ್ರ, ವೈಡೂರ್ಯ ಸಕಲ ಆಭರಣಗಳ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ವಿಜಯದಶಮಿ, ಶ್ರೀ ಮಧ್ವಜಯಂತಿ ಪ್ರಯುಕ್ತ ಶ್ರೀ ದುರ್ಗಾಮಾತೆಗೆ ಮತ್ತು ಶ್ರೀ ಮಧ್ವಾಚಾರ್ಯರಿಗೆ ಆರತಿ, ಭಜನೆ ಸ್ಥಳ: ಆಶ್ರಮದ ಆವರಣ.


■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** 48ನೇ ಬ್ರಹ್ಮೋತ್ಸವ, ರಥಾಂಗಹೋಮ, ರಥಸ್ನಪನ, ಬಲಿಪ್ರದಾನ, ಯಾತ್ರಾದಾನ, ಮಂಟಪೋತ್ಸವ ನಿವೇದನ, ರಥಾರೋಹಣ, ಆಗಮಿಕರಿಗೆ ಆಚಾರ್ಯ ಪೂಜೆ, ನಿವೇದನ, ಶಾತ್ತುಮೊರೈ, ಮಂಗಳಾರತಿ, ಸಂಜೆ ಶಾಂತ್ಯುತ್ಸವ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಮೈಸೂರು ಬೊಂಬೆ ರಂಗಮಂದಿರ :** ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗಮಂದಿರ, ಜೆ.ಸಿ.ನಗರ, ಸಂಜೆ 5 ರಿಂದ.

■ **ಮೈಸೂರು ದಿಗಂತ ಮತ್ತು ಇಂದ್ರಲೋಕ ಸಭಾಭವನ:** ನೂತನ ಕಚೇರಿ ಸಮುಚ್ಚಯದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮುದ್ರಣಾಲಯ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಉಪಸ್ಥಿತರು: ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಸಾ.ರಾ.ಮಹೇಶ್, ತನ್ವೀರ್ ಸೇಠ್, ಡಾ.ಯತೀಂದ್ರ ಸಿದ್ದರಾಮಯ್ಯ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಪಾದಕ ಕೆ.ಬಿ.ಗಣಪತಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ, ಕರ್ನಾಟಕ ವೃತ್ತಿನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಆಂದೋಲನ ಪತ್ರಿಕೆ ಸಂಪಾದಕ ರವಿಕೋಟಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸ್ಥಳ: ಇಂದ್ರಲೋಕ, ಚದುರಂಗ ರಸ್ತೆ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ದಸರಾ ವಿಶೇಷ ಗೀತಾರಾಧನ, 6.35 ನಖ ಶಿಖಾಂತ–ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ–ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ' ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.15'ಹರಿಕೇಶಾಂಗಿ ಮಾತಂಗಿ' ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ–ಮೈಸೂರು ಎಸ್.ರಾಜಲಕ್ಷ್ಮಿ, 10.00 ಶ್ರೀ ಕಮಲಾಂಬಾ ಜಯಂತಿ, ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೀರ್ತನೆಗಳನ್ನಾಧರಿಸಿದ ವಿಶೇಷ ಸರಣಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರ ನಾಮ–ಬಿ.ಆರ್.ಛಾಯಾ, ಡಾ.ರಾಜ್‌ಕುಮಾರ್, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಸುಚಿಯ ಮೇಷ್ಟ್ರು', ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, 1.20'ಜಂಬೂಸವಾರಿ–ಮೈಸೂರು ದಸರಾ ಆನೆ ಸ್ಟೋರಿ' ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ, ಪ್ರಸ್ತುತಿ– ಅಬ್ದುಲ್ ರಶೀದ್ ಹಾಗೂ ಡಾ.ಮೈಸೂರು ಉಮೇಶ್, 2.30 ಮೈಸೂರು ಅರಮನೆಯ ಆವರಣದಲ್ಲಿ ನಡೆಯಲಿರುವ ಜಂಬೂಸವಾರಿ ನೇರ ವೀಕ್ಷಕ ವಿವರಣೆ. ವೀಕ್ಷಕ ವಿವರಣೆಗಾರರು ದಿವಾಕರ ಹೆಗಡೆ, ಎಸ್.ಸುಬ್ರಹ್ಮಣ್ಯ, ಪ್ರಭುಸ್ವಾಮಿ ಮಳೀಮಠ್ ಮತ್ತು ಡಾ.ಮೈಸೂರು ಉಮೇಶ್, 5.30 ಚಾಮುಂಡಿ ಹಬ್ಬ–ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ– ಪಿ.ಕೆ.ರಾಜಶೇಖರ್, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.50 ಕಿಸಾನ್‌ವಾಣಿ–ದೇಸೀ ತಳಿ ಬೀಜಗಳ ಸಂರಕ್ಷಣೆ ಹಾಗೂ ಉತ್ಪಾದನೆಯಲ್ಲಿನ ಅನುಭವ ಕುರಿತು ಡಾ.ಎಂ. ರೇಚಣ್ಣ ಅವರೊಡನೆ ಮಾತುಕತೆ, 10.00 ಹಳ್ಳಿಹಾಡು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 4 ಮಂಗಳವಾರ 2022


ಸಂಪುಟ: 43 | ಸಂಚಿಕೆ: 169 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,


ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ನಾಳೆ ಜಂಬೂ ಸವಾರಿ



ಬುಧವಾರ ಮಧ್ಯಾಹ್ನ 2.36ರಿಂದ 2.50ರೊಳಗೆ ಮುಖ್ಯಮಂತ್ರಿಗಳಿಂದ ನಂದಿಧ್ವಜ ಪೂಜೆ



ಮೈಸೂರು, ಅ. 3(ಆರ್‌ಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ವಿಜಯದಶಮಿ ಮೆರವಣಿಗೆ (ಜಂಬೂಸವಾರಿ)ಯು ಅಕ್ಟೋಬರ್ ಐದರ ಬುಧವಾರ ವೈಭವದಿಂದ ನಡೆಯಲಿದೆ.

ಲಕ್ಷಾಂತರ ಮಂದಿ ಕಣ್ತುಂಬಿಕೊಳ್ಳಲಿರುವ ಗತವೈಭವ ಬಿಂಬಿಸುವ ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಜಿಲ್ಲಾಡಳಿತವು ಸರ್ವ ರೀತಿಯಲ್ಲಿ ಸಜ್ಜುಗೊಂಡಿದ್ದು, ಆ ಮೂಲಕ 9 ದಿನಗಳ ನವರಾತ್ರಿ ಉತ್ಸವಕ್ಕೆ ತೆರೆ ಬೀಳಲಿದೆ.

ನಾಳೆ (ಅ. 4)ಯೇ ಮೈಸೂರಿಗೆ ಆಗಮಿಸಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬುಧವಾರ ಮಧ್ಯಾಹ್ನ 2.36ರಿಂದ 2.50 ಗಂಟೆವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಅರಮನೆ ಬಲರಾಮ ದ್ವಾರ (ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ)ದ ಬಳಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಸಂಪುಟದ ಸದಸ್ಯರೊಂದಿಗೆ ನಂದಿಧ್ವಜಕ್ಕೆ ಪೂಜೆ ನೆರವೇರಿಸುವರು. ಅಂದು ಸಂಜೆ 5.07ರಿಂದ 5.18 ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಅರಮನೆ ಆವರಣದಲ್ಲಿ ಅಲಂಕೃತ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸುವ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮುಖ್ಯಮಂತ್ರಿಗಳು ವಿಜಯದಶಮಿ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡುವರು.

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮೇಯರ್ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ▸ 9ನೇ ಪುಟಕ್ಕೆ



ಸಂಜೆ 5.07 ರಿಂದ 5.18 ಗಂಟೆಯೊಳಗೆ ವಿಜಯದಶಮಿ ಮೆರವಣಿಗೆಗೆ ಚಾಲನೆ

ಇಂದು ಮೈಸೂರಿಗೆ ಮುಖ್ಯಮಂತ್ರಿ

ಮೈಸೂರು, ಅ. 3(ಆರ್‌ಕೆ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ (ಅ. 4) ಸಂಜೆ 5.35 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸುವರು. ರಾತ್ರಿ ವಾಸ್ತವ್ಯ ಹೂಡಲಿರುವ ಅವರು, ಅಕ್ಟೋಬರ್ 5ರಂದು ಬೆಳಗ್ಗೆ 9 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡುವರು. ನಂತರ ಬೆಳಗ್ಗೆ 10.30 ಗಂಟೆಗೆ ರಾಮಕೃಷ್ಣನಗರ 'ಐ' ಬ್ಲಾಕ್‌ನ ಚದುರಂಗ ರಸ್ತೆಯಲ್ಲಿ 'ಮೈಸೂರು ದಿಗಂತ' ಪತ್ರಿಕೆಯ ನೂತನ ಕಚೇರಿ ಇಂದ್ರಲೋಕ ಸಭಾಭವನವನ್ನು ಉದ್ಘಾಟಿಸುವರು.

ಮಧ್ಯಾಹ್ನ 2.36 ಗಂಟೆಗೆ ಅರಮನೆ ಬಲರಾಮ ದ್ವಾರದ ಬಳಿ ನಂದಿಧ್ವಜ ಪೂಜೆ ನೆರವೇರಿಸುವ ಮುಖ್ಯಮಂತ್ರಿಗಳು, ಸಂಜೆ 5.07 ಗಂಟೆಗೆ ವಿಜಯದಶಮಿ ಮೆರವಣಿಗೆ ಉದ್ಘಾಟಿಸಿದ ಬಳಿಕ ರಾತ್ರಿ 7.30 ಗಂಟೆಗೆ ಪಂಜಿನ ಕವಾಯತು ಪ್ರದರ್ಶನದಲ್ಲಿ ಪಾಲ್ಗೊಂಡು ರಾತ್ರಿ 10 ಗಂಟೆಗೆ ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗುವರು.

ವೈಭವದ ವಿಜಯದಶಮಿ ಮೆರವಣಿಗೆ ಕಣ್ತುಂಬಿಕೊಳ್ಳಲು ಅರಮನೆ ಆವರಣದಲ್ಲಿ ಪ್ರವಾಸಿಗರು, ಗಣ್ಯರು, ಆಹ್ವಾನಿತರು, ಸಾರ್ವಜನಿಕರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಉಳಿದಂತೆ ಜಂಬೂಸವಾರಿ ಸಾಗುವ ಚಾಮರಾಜ ಸರ್ಕಲ್, ಕೆಆರ್ ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಬಂಬೂಬಜಾರ್, ಹೈವೇ ಸರ್ಕಲ್ ಹಾಗೂ ಬನ್ನಿಮಂಟಪ ಬಳಿ ರಸ್ತೆಯ ಇಕ್ಕೆಲಗಳಲ್ಲಿ ಮರದ ಬ್ಯಾರಿಕೇಡ್ ಅಳವಡಿಸಿ ವ್ಯವಸ್ಥೆ ಕಲ್ಪಿಸಲಾಗಿದೆ.

ಶುಭಾಶಯಗಳು

ನಾಡಿನ ಸಮಸ್ತ ಜನತೆಗೆ ಆಯುಧಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು.



ಬಿಡುವು

ಆಯುಧಪೂಜೆ ಪ್ರಯುಕ್ತ

ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 5.10.2022ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಮೊಳಗಿದ 'ಜೋಡೋ... ಜೋಡೋ... ಭಾರತ್ ಜೋಡೋ...' ಘೋಷಣೆ

ಮೈಸೂರಲ್ಲಿ ರಾಹುಲ್ ಪಾದಯಾತ್ರೆ

ನೆಚ್ಚಿನ ನಾಯಕನೊಂದಿಗೆ ಉತ್ಸಾಹದಿಂದ ಹೆಜ್ಜೆ ಹಾಕಿದ ಸಾವಿರಾರು ಮುಖಂಡರು, ಕಾರ್ಯಕರ್ತರು



ಮೈಸೂರು, ಅ.3(ಆರ್‌ಕೆಬಿ)– ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿಯವರ 'ಭಾರತ್ ಜೋಡೋ' ಯಾತ್ರೆಯಿಂದಾಗಿ ಮೈಸೂರು ಜಿಲ್ಲೆಯಲ್ಲಿ ಸೋಮವಾರ ಕಾಂಗ್ರೆಸ್ ಹವಾ ಜೋರಾಗಿತ್ತು 'ಜೋಡೋ ಜೋಡೋ ಭಾರತ್ ಜೋಡೋ..' ಘೋಷಣೆಗಳು ಮೊಳಗಿದವು.

ರಾಹುಲ್ ಗಾಂಧಿಯವರು ಹಮ್ಮಿಕೊಂಡಿರುವ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ 'ಭಾರತ್ ಜೋಡೋ' ಯಾತ್ರೆ ಸೋಮವಾರ ಮೈಸೂರಿನ ಜಯಚಾಮರಾಜೇಂದ್ರ ವೃತ್ತ (ಹಾರ್ಡಿಂಜ್ ವೃತ್ತ)ದಿಂದ ಮುಂದುವರಿಯಿತು. ರಾಹುಲ್‌ಗಾಂಧಿಯವರು ನಿರಂತರವಾಗಿ ನಗುಮೊಗದಲ್ಲಿಯೇ ಜನರತ್ತ ಕೈಬೀಸುತ್ತಿದ್ದರು. ಬೆಳಗ್ಗೆ 6.30ರ ಸುಮಾರಿಗೆ ಆರಂಭವಾದ ಪಾದಯಾತ್ರೆ ವೇಳೆ ರಾಹುಲ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಇತರೆ ಕಾಂಗ್ರೆಸ್ ನಾಯಕರು ಸಾಥ್ ನೀಡಿದರು. ▸ 6ನೇ ಪುಟಕ್ಕೆ

ಬಿಜೆಪಿ ಮುಖಂಡ ಅಪ್ಪಣ್ಣ ವಿರುದ್ಧ ಮಹಿಳಾ ಪಿಎಸ್‌ಐ ಕೇಸ್ ದಾಖಲು



ಮೈಸೂರು, ಅ.3– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಯುವ ದಸರಾ ಕಾರ್ಯಕ್ರಮದಲ್ಲಿ ಕರ್ತವ್ಯನಿರತ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಕೈ ಹಿಡಿದು ಎಳೆದಾಡಿ, ಅವಾಚ್ಯ ಪದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ ಆರೋಪದಡಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಅಪ್ಪಣ್ಣ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ. [ಪೂರ್ಣ ವರದಿ ಪುಟ 9]

REMEMBRANCE



Dr. K.B. SUBBAIAH
M.B.B.S., M.R.C.P. (Lond.)
Died on 4.10.1988

To live in hearts we leave behind is not to die

Wife - Swajie Subbaiah
Son - Dr. Gautham Subbaiah
Brother - K.B. Ganapathy
& members of the family

ಕಬಿನಿ ಹಿನ್ನೀರಿನ ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ಸೋನಿಯಾ ಗಾಂಧಿ ವಾಸ್ತವ್ಯ

- ಹವಾಮಾನ ವೈಪರೀತ್ಯ ಹಿನ್ನೆಲೆಯಲ್ಲಿ ಕೊಡಗು ಭೇಟಿ ರದ್ದು
- ಮೈಸೂರಿನ ವಿಂಡ್ ಫ್ಲವರ್ ರೆಸಾರ್ಟ್‌ನಲ್ಲಿ ಅಲ್ಪ ವಿಶ್ರಾಂತಿ ನಂತರ ಆರೆಂಜ್ ಕೌಂಟಿ ರೆಸಾರ್ಟ್‌ಗೆ ಪ್ರಯಾಣ; ಪುತ್ರ ರಾಹುಲ್ ಗಾಂಧಿ ಅವರೊಂದಿಗೆ 2 ದಿನ ತಂಗಲಿದ್ದಾರೆ
- ಅ.6ರಂದು ಪುತ್ರನೊಂದಿಗೆ ಮಂಡ್ಯ ಜಿಲ್ಲೆಯಲ್ಲಿ ಭಾರತ ಐಕ್ಯತಾ ಯಾತ್ರೆಯಲ್ಲಿ ಭಾಗಿ



ಮೈಸೂರು, ಅ.3(ಆರ್‌ಕೆ, ಮಂಜು)– ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇಂದು ಮಧ್ಯಾಹ್ನ 12.45 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಇನ್ನಿತರ ಮುಖಂಡರು ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ▸ 6ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ಗಂಡ : ಎರಡು ಕಣ್ಣುಗಳಿವೆ ನಿನಗೆ, ಜೊತೆಗೆ ಎರಡು ಗಾಜುಗಳು, ಅಕ್ಕಿಂಯುಲ್ಲಿ ಕಲ್ಲು ತೆಗೆಯೋಕೆ ಬರೋಲ್ವಾ?

ಹೆಂಡತಿ : ನಿಮಗೆ 30 ಹಲ್ಲುಗಳಿವೆ. ಜೊತೆಗೆ ಎರಡು ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದೀರಿ. ಕಲ್ಲುಗಳನ್ನು ಅಗಿಂಯೋಕೆ ಆಗಲ್ವಾ!?

ಮೈಸೂರು ಮಿತ್ರ
ಮಂಗಳವಾರ, 4 ಅಕ್ಟೋಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕೇಳಿದರೂ, ನೋಡಿದರೂ, ನೆನಪು ಮಾಡಿಕೊಂಡರೂ, ಹೇಳಿದರೂ, ಅನುಮೋದಿಸಿದರೂ ಧರ್ಮವು ಯಾವಾಗಲೂ ಮನುಷ್ಯನನ್ನು ಕಾಪಾಡುತ್ತದೆ.

– ಸುಭಾಷಿತ ಸುಧಾನಿಧಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಯಾರೂ ಇಲ್ಲದ ಊರಿಗೆ ಹೋಗಿ ನೀರು ಮಜ್ಜಿಗೆ ಬಯಸಿದಂತೆ

ನಿಮ್ಮ ಪತ್ರಗಳು

ಮೈಸೂರು ರಾತ್ರಿ ಸ್ವರ್ಗ, ಹಗಲು ನರಕ

ಮಾನ್ಯರೆ,

ಮೈಸೂರಿನ ಪ್ರಸಕ್ತ ಸನ್ನಿವೇಶವನ್ನು ಗಮನಿಸಿದರೆ 'ಸ್ವರ್ಗ ನರಕವೆಲ್ಲ ಮೇಲೆಲ್ಲೂ ಇಲ್ಲ ಮನುಜ' ಎಂಬ ಅರ್ಥಪೂರ್ಣ ಸಾಲುಗಳು ನೆನಪಿಸುತ್ತವೆ. ರಾತ್ರಿ ಸ್ವರ್ಗದಂತೆ ಕಂಗೊಳಿಸುವ ಮೈಸೂರಿನ ದೀಪಾಲಂಕಾರ. ಬೆಳಗ್ಗೆಯಾದೊಡನೆ ಮೈಸೂರಿನ ಹೃದಯ ಭಾಗದಿಂದ ಹಿಡಿದು ರಾಜ ಮಾರ್ಗದುದ್ದಕ್ಕೂ ಹೊಂದಿಕೊಂಡಿರುವ ರಸ್ತೆಗಳ ಗುಂಡಿಗಳು ನರಕ ದರ್ಶನ ಮಾಡಿಸುತ್ತವೆ.

ಕಳೆದ ಎರಡು ವರ್ಷಗಳಿಂದ 'ಕೋವಿಡ್ ಮಹಾಮಾರಿ' ರೌದ್ರ ನರ್ತನಕ್ಕೆ ನಲುಗಿದ್ದ ಜನಸಾಮಾನ್ಯರಿಗೆ ದಸರಾ ಮೆರವಣಿಗೆ ನೋಡುವ ಭಾಗ್ಯದಿಂದ ವಂಚಿತರಾಗಿದ್ದರು. ಆದರೆ ಈ ಬಾರಿ ಘನ ಸರ್ಕಾರ ಅದ್ಧೂರಿ ದಸರಾ ಆಚರಣೆ ಮಾಡುತ್ತಿದ್ದು, ಇದಕ್ಕೆ ಪೂರಕವಾಗುವಂತೆ ಜಿಲ್ಲಾಡಳಿತ ಹಾಗೂ ಸ್ಥಳೀಯ ಆಡಳಿತ ಪೂರ್ಣ ಪ್ರಮಾಣದಲ್ಲಿ ಸಿದ್ಧತೆ ಮಾಡಿಕೊಳ್ಳದಿರುವುದು ಅಧಿಕಾರಿ ವಲಯ ಹಾಗೂ ಜನಪ್ರತಿನಿಧಿಗಳ ಬೇಜವಾಬ್ದಾರಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ನಿಮ್ಮ ಬೇಜವಾಬ್ದಾರಿತನಕ್ಕೆ ಸಾಂಸ್ಕೃತಿಕ ನಗರಿಗೆ ಕನಸೊತ್ತು ದಸರಾ ಕಣ್ತುಂಬಿಕೊಳ್ಳಲು ಹೊರ ಜಿಲ್ಲೆ, ರಾಜ್ಯ, ದೇಶಗಳಿಂದ ಬರುವ ಪ್ರವಾಸಿಗರಿಗೆ ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ, ರಾಜರುಗಳ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಮ್ಮ ಮೈಸೂರು, ಬೇಜವಾಬ್ದಾರಿತನದ ಆಡಳಿತದಿಂದ ನರಕದರ್ಶನ ಮಾಡಿಸುವುದು ನಿಜ. ಅಕ್ಕಪಕ್ಕದ ತಾಲೂಕು ಜಿಲ್ಲೆಗಳಿಂದ ಬರುವ ಜನಸಾಮಾನ್ಯರು ರಾಜಮಾರ್ಗದ ಬದಿಗಳಲ್ಲಿ ಮೆರವಣಿಗೆ ವೀಕ್ಷಿಸಲು ಜಮಾಯಿಸುತ್ತಾರೆ. ಅವರ ಹಿಡಿಶಾಪಕ್ಕೆ ಗುರಿಯಾಗಬೇಡಿ. ನಗರದ ಹೃದಯ ಭಾಗದಿಂದ ರಾಜಮಾರ್ಗಕ್ಕೆ ಅಂಟಿಕೊಂಡಿರುವ ರಸ್ತೆಗಳ ಗುಂಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವ ಪ್ರಯತ್ನ ಮಾಡಲಿ ಎಂದು ಆಶಿಸೋಣ.

–ಎಂ.ಎನ್ ತುಕಾರಾಮ್ ರಾವ್, ವಿ.ವಿ ಮೊಹಲ್ಲಾ, ಮೈಸೂರು.

ಪಾಲಿಕೆಯ ಗಮನಕ್ಕೆ!

ಮಾನ್ಯರೆ,



ಸರಕಾರಿ ಶಾಲೆಗಳೆಂದರೆ ನಮ್ಮ ಜಿಲ್ಲಾಡಳಿತಕ್ಕೆ ಅಸಡ್ಡೆ! ಬಹುತೇಕ ಸರಕಾರಿ ಶಾಲೆಗಳ ಪ್ರವೇಶ ದ್ವಾರದಲ್ಲಿ ಕಸದ ತಿಪ್ಪೆ ನಿರ್ಮಾಣವಾಗಿರುತ್ತದೆ. ಜೊತೆಗೆ 'ಧೂಮಕೇತು'ಗಳ ಕಾಟ ಬೇರೆ. ಮೈಸೂರಿನ ಅಶೋಕಪುರದ ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಯಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡಿಗೆ ಹೊಂದಿಕೊಂಡಂತೆ ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಲಾಗಿದೆ. ಈ ಶೌಚಾಲಯದ ದುಸ್ಥಿತಿ ಹೇಗಿದೆಯೆಂದರೆ ಇದರ ಒಳಗೆ ಪ್ರವೇಶಿಸಿದವರು ಜೀವನದಲ್ಲಿ ಜಿಗುಪ್ಸೆ ಹೊಂದಿ ಆತ್ಮಹತ್ಯೆಗೆ ಶರಣಾಗುವುದು ಖಂಡಿತಾ!

ಅಷ್ಟೇ ಅಲ್ಲ. ಈ ಶೌಚಾಲಯದ ಎದುರು ಸಂಚರಿಸಿದವರು ಮತ್ತೆಂದೂ ಈ ಭಾಗದ ಕಡೆ ತಲೆ ಹಾಕಿಯೂ ಮಲಗರಾರರು! ನಮ್ಮ ಮೈಸೂರು ಮಹಾನಗರ ಪಾಲಿಕೆಯು ಸಾರ್ವಜನಿಕ ಶೌಚಾಲಯ ಮತ್ತು ಸರಕಾರಿ ಶಾಲೆಗಳಿಗೆ ನೀಡುವ ಅಗೌರವಕ್ಕೆ ಇದೇ ಸಾಕ್ಷಿ! ನಂ 1 ಸ್ವಚ್ಛ ನಗರಿ ಎಂಬ ಬಿರುದು ಪಡೆಯಲು ಹಾತೊರೆಯುವ ನಮ್ಮ ನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ಸಾರ್ವಜನಿಕ ಶೌಚಾಲಯಕ್ಕೆ ಭೇಟಿ ನೀಡಿದರೆ ನಂಬರ್ 2 ಮಾಡಿಕೊಳ್ಳುವುದಂತೂ ಖಚಿತ! ಈ ಕೂಡಲೇ ಪಾಲಿಕೆಯು ಎಚ್ಚೆತ್ತು ಈ ಶೌಚಾಲಯವನ್ನು ನಂ 1 ಮಾದರಿ ಶೌಚಾಲಯವನ್ನಾಗಿ ಪರಿವರ್ತಿಸಿ ಈ ಭಾಗದಲ್ಲಿ ಸಂಚರಿಸುವ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ವಾಹನ ಗುಜರಿ ನೀತಿ ಸ್ವಾಗತಾರ್ಹ

ಮಾನ್ಯರೆ,

ಪ್ರಸ್ತುತ ಪರಿಸರ ಮಾಲಿನ್ಯ ಉತ್ತುಂಗದಲ್ಲಿದ್ದು, ಮಾನವನ ಪ್ರತಿಯೊಂದು ಚಟುವಟಿಕೆಗಳಿಂದ ಪರಿಸರಕ್ಕೆ ಹಾನಿಯುಂಟಾಗಿದೆ. ಇದಕ್ಕೆ ಪೂರಕವಾಗಿ ಹಳೆಯ ವಾಹನಗಳು ಅತೀ ಹೆಚ್ಚು ಹೊಗೆಯುಗುಳುವ ಕಾರಣ 15 ವರ್ಷಕ್ಕಿಂತ ಹಳೆಯ ವಾಹನಗಳನ್ನು ರಾಜ್ಯ ಸರ್ಕಾರ ಸಂಚಾರಕ್ಕೆ ಅನರ್ಹಗೊಳಿಸಲು ಮುಂದಾಗಿರುವುದು ಉತ್ತಮ ಬೆಳವಣಿಗೆಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ನೋಂದಾಯಿತ ವಾಹನಗಳ ಸಂಖ್ಯೆ 2.8 ಕೋಟಿಯಷ್ಟಿದ್ದು, ಇದರಲ್ಲಿ 80 ಲಕ್ಷ ವಾಹನಗಳು 15 ವರ್ಷಕ್ಕಿಂತ ಹಳೆಯದಾಗಿದ್ದು, ಹೆಚ್ಚು ಮಾಲಿನ್ಯ ಉಂಟುಮಾಡುತ್ತಿವೆ. ಬೆಂಗಳೂರು ನಗರದಲ್ಲೇ 1 ಕೋಟಿ ವಾಹನಗಳಿವೆ. ಕೇಂದ್ರ ಸರ್ಕಾರದ ಗುಜರಿ ನೀತಿಯ ಭಾಗವಾದ ಹಳೆಯದಾದ ಹಾಗೂ ಸಂಚಾರಕ್ಕೆ ಯೋಗ್ಯವಲ್ಲದ ವಾಹನಗಳನ್ನು ಸಂಚಾರಕ್ಕೆ ಅನರ್ಹಗೊಳಿಸುವ ಭಾಗವಾಗಿ ಕರ್ನಾಟಕ ಸರ್ಕಾರ "ವಾಹನ ಗುಜರಿ ನೀತಿ –2021" ಜಾರಿಗೊಳಿಸುತ್ತಿದೆ.

ಪ್ರಸ್ತುತ ಗುಜರಿ ನೀತಿ ಅಸ್ಸಾಂ, ಗುಜರಾತ್, ಬಿಹಾರದಲ್ಲಿ ಜಾರಿಯಲ್ಲಿದೆ. ಕೇಂದ್ರ ಗುಜರಿ ನೀತಿಯ ಪ್ರಕಾರ 20 ವರ್ಷಕ್ಕಿಂತ ಹಳೆಯದಾದ ಖಾಸಗಿ ವಾಹನ ಮತ್ತು 15 ವರ್ಷಕ್ಕಿಂತ ಹಳೆಯದಾದ ವಾಣಿಜ್ಯ ವಾಹನಗಳ ಬಳಕೆಯ ನೋಂದಣಿಯನ್ನು ರದ್ದುಪಡಿಸಬೇಕೆಂದು ತಿಳಿಸುತ್ತದೆ ಮತ್ತು ಪ್ರತಿ 8 ವರ್ಷಕ್ಕೊಮ್ಮೆ ವಾಹನ ಫಿಟ್‌ನೆಸ್ ಪ್ರಮಾಣ ಪತ್ರ ಹೊಂದುವುದು ಕಡ್ಡಾಯವಾಗಿದೆ.

ಈ ನೀತಿಯ ಪ್ರಕಾರ 8 ವರ್ಷ ಅವಧಿ ಮುಗಿದ ವಾಹನಗಳನ್ನು ಪ್ರತಿ ವರ್ಷ ಫಿಟ್ನೆಸ್ ಪರೀಕ್ಷೆ ನಡೆಸಿ ಪ್ರಮಾಣ ಪತ್ರ ಹೊಂದುವುದು ಕಡ್ಡಾಯವಾಗಿದ್ದು, ಇಲ್ಲವಾದರೆ ಅಂತಹ ವಾಹನಗಳನ್ನು ಸಂಚಾರಕ್ಕೆ ಅನರ್ಹಗೊಳಿಸಬಹುದಾಗಿದೆ.

ರಾಜ್ಯಾದ್ಯಂತ ವಾಹನ ಸ್ಕ್ರಾಪಿಂಗ್ ಕೇಂದ್ರಗಳ ಸ್ಥಾಪಿಸಲು ಇಲಾಖೆಯು ಭೂಮಿಯನ್ನು ಗುರುತಿಸಲು ಮುಂದಾಗಿದೆ. ಕರ್ನಾಟಕ ಸರ್ಕಾರದ ಈ ಗುಜರಿ ನೀತಿಯ ಅಳವಡಿಕೆಯಿಂದ ಯೋಗ್ಯವಲ್ಲದ ಹಾಗೂ ಮಾಲಿನ್ಯ ಉಂಟುಮಾಡುವ ವಾಹನಗಳನ್ನು ನಿರ್ಬಂಧಿಸಿ, ಪರಿಸರ ಮಾಲಿನ್ಯವನ್ನು ಕಡಿಮೆ ಮಾಡಲು ಅನುವು ಮಾಡಿಕೊಡುತ್ತದೆ.

ಈ ಗುಜರಿ ನೀತಿಯ ಫಲವಾಗಿ ನಷ್ಟದಲ್ಲಿರುವ ಆಟೋಮೊಬೈಲ್ ಕ್ಷೇತ್ರದಲ್ಲಿ ಚೇತರಿಕೆ ಕಂಡು ಬರುವುದರ ಜೊತೆಗೆ ಅಧಿಕ ಉದ್ಯೋಗ ಸೃಷ್ಟಿಯಾಗಲಿದ್ದು, ನಷ್ಟದಲ್ಲಿರುವ ಆಟೋಮೊಬೈಲ್ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗುತ್ತದೆ. ಕರ್ನಾಟಕ ಸರ್ಕಾರದ "ಗುಜರಿ ನೀತಿ 2021" ಉತ್ತಮ ಬೆಳವಣಿಗೆಯಾಗಿದ್ದು, ರಾಜ್ಯದ ಪ್ರತಿಯೊಬ್ಬರು ಈ ನೀತಿಯನ್ನು ಸ್ವಾಗತಿಸಬೇಕಿದೆ.

–ರಾಸುಮ ಭಟ್, ಚಿಕ್ಕಮಗಳೂರು.

ಅತ್ಯದ್ಭುತ ಜಂಬೂಸವಾರಿ



ಈ ಸಂಭ್ರಮದ ಉತ್ಸವವನ್ನು ವೀಕ್ಷಿಸಲು ದೇಶ-ವಿದೇಶಗಳ ಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ಉಲ್ಲೇಖಗಳಿವೆ. 11ನೇ ಶತಮಾನದಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಲ್ಬೆರೋನಿ, 15-16ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸಿನ ಡೊಮಿಂಗೋಪಾಯಸ್ ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ, ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ಮೈಸೂರು ದಸರಾ, ಎಷ್ಟೊಂದು ಸುಂದರ ಚೆಲ್ಲಿರಿ ನಗೆಯಾ ಪನ್ನೀರಾ...... ಯಾರಿಗೆ ತಾನೇ ತಿಳಿದಿಲ್ಲ ಈ ಹಾಡು...! ಬರೀ ಹಾಡಷ್ಟೇ ಅಲ್ಲ ನಮ್ಮ ನಾಡಿನ ಹೆಮ್ಮೆಯ ಮೈಸೂರು ದಸರಾವು ಅಷ್ಟೇ ಸುಂದರ. ಕನ್ನಡ ನಾಡಿನ ಕಲೆ–ಸಂಸ್ಕೃತಿ ಬಿಂಬಿಸುವ, ದೇಶ–ವಿದೇಶದ ಜನರನ್ನು ಆಕರ್ಷಿಸುವ ನವರಾತ್ರಿ, ವಿಜಯದಶಮಿ, ದಸರಾ ಹಬ್ಬ, ಜಂಬೂಸವಾರಿ ಎಂದೆಲ್ಲ ಕರೆಯಲ್ಪಡುವ "ನಾಡಹಬ್ಬ" ದಸರಾದಲ್ಲಿ ನವ (ಒಂಭತ್ತು) ದಿನವೂ ಹೊಸ–ಹೊಸ ಸಂಭ್ರಮ. ಸಾಮಾನ್ಯವಾಗಿ ಸೆಪ್ಟೆಂಬರ್–ಅಕ್ಟೋಬರ್ ಮಾಸದಲ್ಲಿ ಬರುವ ಈ ಹಬ್ಬವು ನಾಡಿನ ಒಂದು ವಿಶೇಷ.

ಮಹಿಷಾಸುರನ ಊರು ಮೈಸೂರು

ಮೈಸೂರು ಎಂಬುದು "ಮಹಿಷಾಸುರ" ಎಂಬ ಅಸುರನ ಹೆಸರಿನಿಂದ ಮೂಲವಾಗಿ ಬಂದಿದೆ. ಇದನ್ನು ಹಿಂದೆ "ಮಹಿಷಾಸುರನ ಊರು ಮಹಿಷೂರು", ಮೌರ್ಯ ಸಾಮ್ರಾಜ್ಯದ ಖ್ಯಾತ ದೊರೆ ಅಶೋಕನ ಕಾಲದಲ್ಲಿ ಮಹಿಷಮಂಡಳ ಎಂದೂ ಕರೆಯಲಾಗುತ್ತಿತ್ತು. ಕೊನೆಯದಾಗಿ ಮೈಸೂರು ಎಂದು ಮರು ನಾಮಕರಣ ಮಾಡಿದರು.

ದೇವೀ ಭಾಗವತದಲ್ಲಿ ಬರುವ ಪೌರಾಣಿಕ ಕಥನಕ್ಕೆ ಮೈಸೂರು ಸಂಬಂಧ ಹೊಂದಿದೆ. ದೇವಿ ಪುರಾಣದಲ್ಲಿ ಇರುವ ಕಥೆಯ ಪ್ರಕಾರ, ಅಸುರರ ದೊರೆ, ಕೋಣನ ತಲೆಯುಳ್ಳ ಮಹಿಷಾಸುರ ಎಂಬಾತನು ಮೈಸೂರು ಪಟ್ಟಣವನ್ನು ಆಳುತ್ತಿದ್ದನು. ಮಹಿಷಾಸುರನ ಉಪಟಳ ತಾಳಲಾರದೆ ದೇವಾನುದೇವತೆಗಳು ತಮ್ಮನ್ನು ರಕ್ಷಿಸುವಂತೆ ಪಾರ್ವತೀ ದೇವಿಯ ಮೊರೆ ಹೋದರು. ಕೋರಿಕೆಯನ್ನು ಆಲಿಸಿದ ಪಾರ್ವತಿಯು ಚಾಮುಂಡೇಶ್ವರಿಯಾಗಿ ಅವತಾರವೆತ್ತಿ ಮೈಸೂರು ಸಮೀಪದ ಚಾಮುಂಡಿ ಬೆಟ್ಟದ ತುತ್ತ ತುದಿಯಲ್ಲಿ ಅಸುರನನ್ನು ಸಂಹರಿಸಿದಳು. ಇದೇ ಕಾರಣದಿಂದಾಗಿ ಬೆಟ್ಟಕ್ಕೆ ಚಾಮುಂಡಿ ಬೆಟ್ಟವೆಂದೂ, ನಗರಕ್ಕೆ ಮೈಸೂರು ಎಂದೂ ಹೆಸರು ಬಂತು. ರಕ್ಕಸನನ್ನು ಸಂಹರಿಸಿದ ಬಳಿಕ ದೇವಿಯು ಬೆಟ್ಟದ ತುದಿಯಲ್ಲಿ ನೆಲೆ ನಿಂತಳು. ಅಂದಿನಿಂದ ಇಂದಿನವರೆಗೂ ದೇವಿಯನ್ನು ಅಲ್ಲಿ ಭಕ್ತಿ ಭಾವಗಳಿಂದ ಪೂಜಿಸಿಕೊಂಡು ಬರಲಾಗುತ್ತಿದೆ.

ಚಾಮುಂಡೇಶ್ವರಿಯು ಮಹಿಷಾಸುರನನ್ನು ವಧಿಸಿದ ಸತ್ಕಾರ್ಯದ ಸ್ಮರಣಾರ್ಥವಾಗಿ, ದುಷ್ಟ ಶಕ್ತಿಯ ಮೇಲೆ ಶಿಷ್ಟ ಶಕ್ತಿಯ ವಿಜಯದ ಸಂಕೇತವಾಗಿ ಪ್ರತಿವರ್ಷ 10 ದಿನಗಳ ಪ್ರಖ್ಯಾತ ದಸರಾ ಉತ್ಸವವನ್ನು ಮೈಸೂರಿನಲ್ಲಿ ಆಚರಿಸಲಾಗುತ್ತದೆ.

ಸಿಂಹಾಸನದ ಇತಿಹಾಸ

ಈ ಸಿಂಹಾಸನವು ಪುರಾತನವಾದುದೆಂದು ಹೇಳಲಾಗಿದೆ. ಇದಕ್ಕೊಂದು ಚರಿತ್ರೆಯೂ ಇದೆ. ಪಾಂಡವರ ಕಾಲದೆನ್ನಲಾಗಿದ್ದು, ಆ ಕಾಲದಲ್ಲಿ ಕಂಪಿಲ ರಾಜನು ಇದನ್ನು ತಂದು ಪೆನಗೊಂಡದಲ್ಲಿ ಹೂತಿಟ್ಟಿದ್ದನು ಎನ್ನಲಾಗಿದೆ. 1338ರಲ್ಲಿ ಮಹರ್ಷಿ ವಿದ್ಯಾರಣ್ಯರು ಧ್ಯಾನದೃಷ್ಟಿಯಿಂದ ಇದನ್ನು ಅರಿತು ವಿಜಯನಗರದ ಚಕ್ರಾಧಿಪತಿ ಹರಿಹರನಿಗೆ ತಿಳಿಸಿದರೆಂದು ಅದರಂತೆ ಹೊರತೆಗೆದು 150 ವರ್ಷಗಳ ಕಾಲ ಆನೆಗೊಂದಿಯಲ್ಲಿ ಅಲಂಕರಿಸಿದರೆಂದೂ, ಬಳಿಕ ವಿಜಯನಗರದ ಅವನತಿಯ ವೇಳೆಗೆ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ರಾಯ ಭಾರಿಯ ಅರಮನೆಗೆ ಸಾಗಿಸಲಾಯಿತೆಂದು ಹೇಳಲಾಗಿದೆ.

ಆ ಬಳಿಕ 1609ರಲ್ಲಿ ಆಗಿನ ಮೈಸೂರು ಅರಸರಾದ ರಾಜಒಡೆಯರ್ ಶ್ರೀರಂಗರಾಜುಲುರನ್ನು ತಲಕಾಡಿಗೆ ಓಡಿಸಿ ಶ್ರೀರಂಗಪಟ್ಟಣವನ್ನು ವಶ ಪಡಿಸಿಕೊಂಡರು. 1610ರಲ್ಲಿ ತಮ್ಮ ರಾಜಧಾನಿಯನ್ನು ಶ್ರೀರಂಗಪಟ್ಟಣ ದಿಂದ ಮೈಸೂರಿಗೆ ಬದಲಾಯಿಸಿದಾಗ ಸಿಂಹಾಸನವನ್ನು ಮೈಸೂರಿನ ಅರಮನೆಗೆ ಸಾಗಿಸಲಾಯಿತು ಎಂದು ಸಿಂಹಾಸನದ ಮೇಲಿರುವ ಬೆಳ್ಳಿ ಹಲಗೆಯ ಮೇಲಿರುವ ಬೆಳ್ಳಿ ಶಾಸನದಲ್ಲಿ ಇರುವುದನ್ನು ಕಾಣಬಹುದು.

1800ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಸಿಂಹಾಸನವನ್ನು ವಜ್ರವೈಡೂರ್ಯ, ರತ್ನ ಖಚಿತ ಆಭರಣಗಳಿಂದ ಸಿಂಗಾರ ಮಾಡಿಸಿದರು. ನಂತರ ಅದನ್ನು ನಾಲ್ವಡಿ ಕೃಷ್ಣರಾಜ ಒಡೆಯರು ಇನ್ನಷ್ಟು ಸುಂದರೀಕರಣ ಮಾಡಿದರು.

ಸಂಪ್ರದಾಯ ಆಚರಣೆಗಳು





ಸರಸ್ವತಿ ಪೂಜೆ: ಬಳಿಕ, ಅಲ ಪೀಠ ಪೂಜೆ, ದ್ವಾರಪಾಲಕ ಪೂಜೆ, ಮಂಟಪ ಪೂಜೆಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ಈ ವೇಳೆ ರಾಜಪುರೋಹಿತರು, ಅರಮನೆ ಪಂಡಿತರು ವೇದ, ಮಂತ್ರಘೋಷಗಳನ್ನು ಹೇಳುವ ಮೂಲಕ ಶಾರದಾಂಬೆಯ ಸುತ್ತ ಪ್ರದಕ್ಷಿಣೆ ಹಾಕುತ್ತಾರೆ.

ವಜ್ರಮುಷ್ಠಿ ಕಾಳಗ: ದಸರಾ ಮಹೋತ್ಸವದ ಅಂಗವಾಗಿ ಸಂಪ್ರದಾಯದಂತೆ ಅಂಬಾ ವಿಲಾಸ ಅರಮನೆ ಅಂಗಳದಲ್ಲಿ ಪ್ರತಿ ವರ್ಷ ವಿಜಯದಶಮಿ ದಿನದಂದು ಯದುವಂಶದ ಅರಸರು ಬನ್ನಿಮರಕ್ಕೆ ಪೂಜೆ ಸಲ್ಲಿಸುವ ಮುನ್ನ ಈ ಕಾಳಗ ನಡೆಯುತ್ತದೆ. ಅರಮನೆಯ



ಕರಿಕಲ್ಲು ತೊಟ್ಟಿ ಅಂಗಳದಲ್ಲಿ ನಡೆಯಲಿರುವ ವಜ್ರಮುಷ್ಟಿ ಕಾಳಗದಲ್ಲಿ ನಾಲ್ವರು ಜಟ್ಟಿಗಳು ವಜ್ರನಖ ಎಂಬ ಹರಿತವಾದ ಆಯುಧಗಳೊಂದಿಗೆ ಕಾದಾಡಲಿದ್ದಾರೆ. ಕಾಳಗಕ್ಕೆ ನಿಗದಿ ಮಾಡಲಾಗಿರುವ ಸಮಯದಲ್ಲಿ ಜಟ್ಟಿಗಳ ಕುಲದೇವತೆ ನಿಮಿಷಾಂಬಾ ದೇವಿಗೆ ಪೂಜೆ ಸಲ್ಲಿಸಿ ಕೇಶ ಮುಂಡನ ಮಾಡಿಸಿಕೊಂಡ ಜಟ್ಟಿಗಳು ಮೈ ತುಂಬಾ ಕೆಂಪು ಮಣ್ಣು ಬಳಸಿಕೊಂಡು ಅಖಾಡದಲ್ಲಿ ರಕ್ತ ಚಿಮ್ಮಿಸುತ್ತಾರೆ. ಬಳಿಕ ರಾಜ ವಂಶಸ್ಥರು ಬನ್ನಿಮರ ಪೂಜೆಗೆ ತೆರಳುವುದು ಸಂಪ್ರದಾಯ.

ಸಾವಿರಾರು ವರ್ಷಗಳ ಇತಿಹಾಸ

ಪ್ರಾಚೀನ ಸಮರ ಕಲೆಗಳಲ್ಲಿ ಒಂದಾದ ವಜ್ರಮುಷ್ಠಿ ಕಾಳಗಕ್ಕೆ ಸುಮಾರು 5 ಸಾವಿರ ವರ್ಷಗಳ ಇತಿಹಾಸವಿದೆ. ಗುಜರಾತ್‌ನ ಪಠಾಣ್ ಜಿಲ್ಲೆ ಇದರ ತವರು. ಈ ಸಮರ ಕಲೆಯನ್ನು ಶ್ರೀಕೃಷ್ಣ ಬಲರಾಮರು ಜಟ್ಟಿ ಸಮುದಾಯಕ್ಕೆ ಧಾರೆ ಎರೆದು ಕೊಟ್ಟರೆಂದು ಮಲ್ಲ ಪುರಾಣದಲ್ಲಿ ಉಲ್ಲೇಖ ಇದೆ. ಹಿಂದೆ ಮೈಸೂರಿನ ರಾಜರು ದಸರಾ ಮಹೋತ್ಸವಕ್ಕೆ ಸಾಮಂತ ರಾಜರು ಸ್ನೇಹಿತರು, ಆಪ್ತರನ್ನು ಆಹ್ವಾನಿಸಿ ವಜ್ರಮುಷ್ಟಿ ಕಾಳಗ ಏರ್ಪಡಿಸುತ್ತಿದ್ದರು. ಸೈನಿಕರು ರಾಜನಿಗಾಗಿ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧ ಎಂಬುದನ್ನು ಪರೋಕ್ಷವಾಗಿ ತಿಳಿಸುವುದು ಹಾಗೂ ಸೈನಿಕರ ರಾಜನಿಷ್ಠೆ ಎಷ್ಟಿದೆಯೆಂಬುದನ್ನು ತೋರ್ಪಡಿಸುವುದು ಇದರ ಉದ್ದೇಶವಾಗಿತ್ತು.

ಬನ್ನಿ ಹಾಗೂ ಆಯುಧ ಪೂಜೆ



ನವರಾತ್ರಿಯ ಒಂಬತ್ತನೇ ದಿನ ಮಹಾನವಮಿ ಅಥವಾ ಆಯುಧ ಪೂಜೆಯನ್ನು ಆಚರಿಸಲಾಗುತ್ತದೆ. ಈ ವರ್ಷ ಅಕ್ಟೋಬರ್ 4 ಆಶ್ವಯುಜ ಮಾಸದ ಶುಕ್ಲ ಪಕ್ಷದ ನವಮಿ/ಆಯುಧ ಪೂಜಾ ನಡೆಯಲಿದೆ. ಹೆಸರೇ ಸೂಚಿಸುವಂತೆ ಇದು ಆಯುಧಗಳಿಗೆ ಪೂಜೆ ಮಾಡುವ ದಿನ. ಮನೆ, ಕಾರ್ಖಾನೆ, ಕಚೇರಿ ಎಲ್ಲೆಡೆ ಆಯುಧಗಳನ್ನು ಸ್ವಚ್ಛಗೊಳಿಸಿ ಪೂಜಿಸಲಾಗುತ್ತದೆ. ಹಿಂದೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರಾಜ ವಂಶಸ್ಥರು ಆಯುಧ ಪೂಜೆ ದಿನದಂದು ತಮ್ಮ ಪಟ್ಟದ ಕತ್ತಿಯನ್ನೂ ಕೂಡ ಈ ದಿನ ಪೂಜಿಸುತ್ತಿದ್ದರು. ಇಂದಿಗೂ ಕೂಡ ಪ್ರತಿ ವರ್ಷ ಮೈಸೂರು ರಾಜ ವಂಶಸ್ಥರು ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ನವರಾತ್ರಿಯಲ್ಲಿ 'ಆಯುಧ ಪೂಜೆ'ಗೆ ಮಹತ್ವದ ಸ್ಥಾನ

ಪುರಾಣದ ಪ್ರಕಾರ, ವನವಾಸದಲ್ಲಿದ್ದ ಪಾಂಡವರು ತಮ್ಮ ಅಜ್ಞಾತ ವಾಸವನ್ನು ಮುಗಿಸಿ ಮಹಾ ನವಮಿಯ ದಿನದಂದು ತಮ್ಮ ಆಯುಧಗಳಿಗೆ ಪೂಜೆ ಮಾಡಿರುವುದಾಗಿ ಹೇಳಲಾಗುತ್ತದೆ. ಅದರಲ್ಲೂ ಬೃಹನ್ನಳೆ ವೇಷದಲ್ಲಿದ್ದ ಅರ್ಜುನ ಶಮೀ ವೃಕ್ಷದ ಕೆಳಗೆ ಇಟ್ಟಿದ್ದ ತನ್ನ ಆಯುಧಕ್ಕೆ ಪೂಜೆ ಸಲ್ಲಿಸಿ, ಆಯುಧಗಳನ್ನು ಮರಳಿ ತಂದು ಪೂಜಿಸಿ, ನಂತರ ವಿರಾಟರಾಜನ ಶತ್ರುಗಳಾದ ಕೌರವರ ಮೇಲೆ ವಿಜಯ ಸಾಧಿಸಿದ್ದರು. ಇದರ ದಿನದ ನೆನಪಿಗಾಗಿ ನವರಾತ್ರಿಯಲ್ಲಿ ಶಮೀ ವೃಕ್ಷಕ್ಕೆ ಪೂಜೆ ಸಲ್ಲಿಸುವ ಪದ್ಧತಿಯೂ ಇದೆ. ಮೈಸೂರಿನ ರಾಜವಂಶಸ್ಥರು ಪೂರ್ವಜರು ಯುದ್ಧ ಕಾಲದಲ್ಲಿ ಬಳಸುತ್ತಿದ್ದ ಕತ್ತಿ, ಫಿರಂಗಿ, ಈಟಿ ಮುಂತಾದವುಗಳ ಜೊತೆಗೆ ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ಬಳಸುತ್ತಿದ್ದ ವಿಜಯನರಸಿಂಹ ಬಾಕುವನ್ನೂ ಸಹ ಪೂಜೆ ಮಾಡುತ್ತಾರೆ.



ಜಂಬೂಸವಾರಿ



ವಿಜಯದಶಮಿಯಂದು ನಡೆಯುವ ಜಂಬೂಸವಾರಿ ಮಾತ್ರ ಅತ್ಯದ್ಭುತ. ಇಂತಹವೊಂದು ಭವ್ಯ ಮೆರವಣಿಗೆಯನ್ನು ನಾವು ಬೇರೆಲ್ಲೂ ಕಾಣಲಾರೆವು. ಜಂಬೂ ಸವಾರಿಯ ಪ್ರಮುಖ ಆಕರ್ಷಣೆಯೇ ಚಿನ್ನದ ಅಂಬಾರಿ. ಮೊದಲು ಮಹಾರಾಜರು ಇದರಲ್ಲಿ ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿದ್ದರೆ ಈಗ ಚಾಮುಂಡೇಶ್ವರಿಯ ವಿಗ್ರಹವನ್ನಿಟ್ಟು ಮೆರವಣಿಗೆ ನಡೆಯುತ್ತದೆ. ಈ ಅಂಬಾರಿಯ ಬಗ್ಗೆ ಹೇಳಬೇಕೆಂದರೆ ಇದರ ತೂಕ ಸುಮಾರು 750 ಕೆ.ಜಿ. ಈ ಸುಂದರ ಮಂಟಪಕ್ಕೆ ಕರಕುಶಲ ಕಲೆಗಾರರು ಚಿನ್ನದ ತಗಡನ್ನು ಹೊದಿಸಿದ್ದು ಇದರ ನಿರ್ಮಾಣಕ್ಕೆ ಬಳಕೆಯಾಗಿರುವ ಚಿನ್ನ ಸುಮಾರು 80 ಕೆ.ಜಿ.ಯಂತೆ. ಅಂಬಾರಿ ಮೇಲೆ 5 ಕಳಶಗಳಿದ್ದು, ಅಂಬಾರಿಯಲ್ಲಿ ಎಲೆ, ಹೂ, ಬಳ್ಳಿಗಳ ಚಿತ್ತಾರಗಳನ್ನು ಮೈಸೂರು ಶೈಲಿಯಲ್ಲಿ ಕೆತ್ತಲಾಗಿದೆ.

ದಸರಾ ದಿನದಂದು ನಿಗದಿತ ಮುಹೂರ್ತದಲ್ಲಿ ವಿಧಿ ವಿಧಾನದಂತೆ ಅಂಬಾರಿಯನ್ನು ಬಲರಾಮನಿಗೆ ಹೊರಿಸಲಾಗುತ್ತದೆ. ಇದರೊಂದಿಗೆ ಇತರ ಸಿಂಗಾರಗೊಂಡ ಇತರ 12 ಆನೆಗಳು ಹೆಜ್ಜೆ ಹಾಕುತ್ತವೆ. ಈ ಸಂದರ್ಭ ನಡೆಯುವ ಜಂಬೂ ಸವಾರಿಯಲ್ಲಿ ರಕ್ಷಣಾ ಪಡೆಗಳ ಕವಾಯತ್, ವಿವಿಧ ಜಾನಪದ ಕಲಾತಂಡಗಳು, ವಿವಿಧ ಇಲಾಖೆಗಳಲ್ಲದೆ, ವಿವಿಧ ಜಿಲ್ಲೆಯ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಮನಸ್ಸೆಳೆಯುತ್ತವೆ. ಅರಮನೆಯ ಆವರಣದಿಂದ ಆರಂಭವಾಗುವ ಜಂಬೂಸವಾರಿ ಸಯ್ಯಾಜಿರಾವ್ ರಸ್ತೆ ಮೂಲಕ ಸಾಗಿ ಬನ್ನಿಮಂಟಪದಲ್ಲಿ ಬನ್ನಿ ಕಡಿಯುವುದರೊಂದಿಗೆ ಜಂಬೂಸವಾರಿ ಅಂತ್ಯಗೊಳ್ಳುತ್ತದೆ.

ಪಂಜಿನ ಕವಾಯತು



ಪ್ರತಿಷ್ಠಿತ ನಾಡಹಬ್ಬ ದಸರಾ ಎಂದರೆ, ಜಂಬೂಸವಾರಿ ಹಾಗೂ ಪಂಜಿನ ಕವಾಯತು. ದಸರೆಯ ಕಡೆಯದಿನ ವಿಜಯದಶಮಿಯಂದು ಮೈಸೂರಿನ ಬನ್ನಿಮಂಟಪದಲ್ಲಿ ನಡೆಯುವ ಎಲ್ಲರನ್ನೂ ನಿಬ್ಬೆರಗಾಗಿಸುವ ಒಂದು ಛಲ ಕಲೆಯಂತೆ ಭಾಸವಾಗುತ್ತದೆ. ಅವುಗಳಲ್ಲೂ ಪಂಜಿನ ಕವಾಯತು ನಿರ್ವಹಿಸುವ ಸಿಬ್ಬಂದಿ, ಅವರು ಮೂಡಿಸುವ ಚಿತ್ತಾರಗಳು ಮನದಲ್ಲಿ ಅಚ್ಚಳಿಯದೆ ಉಳಿಯದೆ ಇರಲಾರದು, ಮೈಸೂರು ಒಡೆಯರ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಕ್ರಿ.ಶ.1610ರಿಂದ ದಸರಾ ಆರಂಭವಾಯಿತು. ಆ ಕಾಲದಲ್ಲಿ ಎಲ್ಲಾ ಕಾರ್ಯಕ್ರಮಗಳಿಗೆ ಬೆಳಕು ನೀಡಲು ವಿದ್ಯುತ್ ದೀಪಗಳ ಬಳಕೆ ಅಸ್ತಿತ್ವಕ್ಕೆ ಬಂದಿರಲಿಲ್ಲ.

ನಂತರ ಕ್ರಿ.ಶ.1805ರಲ್ಲಿ ಮೈಸೂರಿನಲ್ಲಿ ಆರಂಭವಾದ ದಸರೆಗೆ ಕೂಡ ಹೊಸ ಮೆರಗು ನೀಡಲು ವಿದ್ಯುತ್ ದೀಪಗಳು ಇರ ಲಿಲ್ಲ. ಅರಮನೆಯಿಂದ ಆರಂಭವಾದ ಜಂಬೂ ಸವಾರಿ ಬನ್ನಿಮಂಟಪ ತಲುಪಿ ಮರಳುವಾಗ ಸಂಪೂರ್ಣ ಕತ್ತಲಾಗುತ್ತಿತ್ತು. ಆಗ ಸೈನಿಕರು ಪಂಜುಗಳನ್ನು ಕೈಯಲ್ಲಿ ಹಿಡಿದು ನಡೆಯುತ್ತಾ ಇತರ ರನ್ನೂ ಕರೆತರುತ್ತಿದ್ದರು. ಆಗ ಆರಂಭವಾದ ಈ ಮೆರವಣಿಗೆಗೆ ಪಂಜಿನ ಮೆರ ವಣಿಗೆ ಎಂಬ ಹೆಸರು ಬಂದಿದೆಯಂತೆ. ಇದಾದ ಬಳಿಕ ಅತಿ ಹೆಚ್ಚು ಬ್ರಿಟಿಷರ ಪ್ರಭಾವದಿಂದ ಮೈಸೂರು ಸೈನ್ಯದಲ್ಲಿ ಪಾಶ್ಚಾತ್ಯ ಶಿಸ್ತು, ಶಿಷ್ಟಾಚಾರ ಗಳನ್ನು ಅನುಸರಿಸಲಾಯಿತು. ದಸರಾದಲ್ಲೂ ಇದು ಮುಂದುವರೆದು ಪಂಜಿನ ಮೆರವಣಿಗೆ ಪಂಜಿನ ಕವಾಯತಾಗಿ ಮರುನಾಮಕರಣಗೊಂಡಿತು.

ಅಂದಿನಿಂದ ಇಂದಿನವರೆಗೂ ಇದು ಪರಂಪರೆಯಾಗಿ ನಡೆದುಕೊಂಡು ಬರುತ್ತಿದೆ. ಆಗ ರಾಜಾಡಳಿತದ ಸೈನಿಕರು ಈ ಜವಾಬ್ದಾರಿ ನಿರ್ವಹಿಸುತ್ತಿದ್ದರು, ಬಳಿಕ ಕೇಂದ್ರ ಸರ್ಕಾರದ ಅಧೀನದಲ್ಲಿ ರೈಲ್ವೆ ಸುರಕ್ಷತಾ ದಳದ ಸಿಬ್ಬಂದಿ ಈ ಕಾರ್ಯನಿರ್ವಹಿಸುತ್ತಿದ್ದರು. ಈಗ ರಾಜ್ಯ ಪೊಲೀಸ್ ಇಲಾಖೆಯು ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಪ್ರತಿ ವರ್ಷದ ಪಂಜಿನ ಕವಾಯತು ಪ್ರದರ್ಶನದಲ್ಲಿ 500ಕ್ಕೂ ಹೆಚ್ಚು ಜನರು ನುರಿತ ತಂಡ ಮೈ ರೋಮಾಂಚನಗೊಳಿಸುವ ಕಲಾ ಪ್ರದರ್ಶನ ನೀಡುತ್ತಿದೆ, ದಸರೆಯ ಮುನ್ನ ಪ್ರತಿದಿನ ಬೆಳಗ್ಗೆಯಿಂದ ಸಂಜೆವರೆಗೂ ಕಠಿಣ ತರಬೇತಿ ಪಡೆಯುತ್ತಿರುವ ಅವರು ಅ.5 ರಂದು ನಡೆಯುವ ಕಾರ್ಯಕ್ರಮದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ನಗರ ಸಶಸ್ತ್ರ ಪೊಲೀಸ್ ಪಡೆಯ ಡಿಸಿಪಿ ಮಾರ್ಗದರ್ಶನದಲ್ಲಿ ಸಶಸ್ತ್ರ ತರಬೇತಿ ನಡೆಯುತ್ತಿದೆ. ಈ ತಾಲೀಮು ವಿಜಯದಶಮಿಯ ಮುನ್ನಾದಿನ ಸಂಜೆ ನಡೆಯುವ ಗ್ರಾಂಡ್ ರಿಹರ್ಸಲ್‌ವರೆಗೂ ನಡೆಯುತ್ತದೆ. ಕೊನೆಯ ದಿನ ಸಂಪನ್ನಗೊಳ್ಳುತ್ತದೆ. ● ಮಣಿಕಂಠ ತ್ರಿಶಂಕರ್, ಮೈಸೂರು.

ಸುನಿಧಿ ಚೌಹಾಣ್ ಗಾಯನದೊಂದಿಗೆ ಯುವದಸರಾ ತೆರೆ

ಮೈಸೂರು, ಅ.3(ಎಂಕೆ)– ಲೇಡಿ ರಾಕ್‌ಸ್ಟಾರ್ ಸುನಿಧಿ ಚೌಹಾಣ್ ಮಿಂಚಿನ ಗಾಯನಕ್ಕೆ ಶಿಳ್ಳೆ, ಚಪ್ಪಾಳೆ ಸಹಿತ ಕುಣಿದು ಕುಪ್ಪಳಿಸುವುದರೊಂದಿಗೆ 'ಯುವ ದಸರಾ'ಗೆ ವೈಭವದ ತೆರೆ ಬಿದ್ದಿತು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ 6 ದಿನಗಳ ಕಾಲ ನಡೆದ ದಸರಾ ಮೆಗಾ ಇವೆಂಟ್ 'ಯುವ ದಸರಾ' ಭರಪೂರ ಮಸ್ತ್ ಮನರಂಜನೆಯೊಂದಿಗೆ ಸಂಪನ್ನಗೊಂಡಿತು. ಕಡೆಯ ದಿನವಂತೂ ಮಿಂಚು ಹರಿಸಿದ ಲೇಡಿ ರಾಕ್‌ಸ್ಟಾರ್ ಸುನಿಧಿ ಚೌಹಾಣ್, ಪ್ರತಿಯೊಬ್ಬರು ಮನಬಿಚ್ಚಿ ಹಾಡಿ, ಕುಣಿದು ಕುಪ್ಪಳಿಸಿ, ಸಂಭ್ರಮಿಸುವಂತೆ ಮಾಡಿದರು.

ವೇದಿಕೆಗೆ ಆಗಮಿಸಿದಾಗಿನಿಂದಲೂ ಅಭಿಮಾನಿಗಳ ಕುಣಿತಕ್ಕೆ ಒಂದೇ ಒಂದು ಕ್ಷಣವೂ ರಿಲ್ಯಾಕ್ಸ್ ನೀಡದ ಬಾಲಿವುಡ್ ಹಿನ್ನೆಲೆ ಗಾಯಕಿ ಸುನಿಧಿಯ ರಾಕಿಂಗ್ ರಿದಂಗೆ ಪರಿಮಿತಿಯೇ ಇರಲಿಲ್ಲ. ಒಂದಾದ ಮೇಲೊಂದು ಸೂಪರ್ ಹಿಟ್ ಹಿಂದಿ ಹಾಡುಗಳನ್ನು ಪ್ರಸ್ತುತಪಡಿಸಿದ ಸುನಿಧಿ, ಮನಮೋಹಕ ನೃತ್ಯದೊಂದಿಗೆ ಎಲ್ಲರ ಮನಸೆಳೆದರು.

ಹಿಂದಿ ಹಾಗೂ ಕನ್ನಡ ಹಾಡುಗಳ ರಸದೌತಣವನ್ನೇ ನೀಡಿದ ಸುನಿಧಿ, 'ಕ್ರೇಜಿ ಕಿಯಾ ರೇ... ಹಾಡುವ ಮೂಲಕ ಕ್ರೇಜ್ ಹೆಚ್ಚಿಸಿದರು. ಕೇಳುಗರಿಗೆ ಸಂಗೀತದ ಹಬ್ಬವನ್ನೇ ಏರ್ಪಡಿಸಿದ ಅವರು, ಅಭಿಮಾನಿಗಳಿಂದ ಶಿಳ್ಳೆ, ಚಪ್ಪಾಳೆ ಪ್ರೇರೆಪಿಸಿದರು. 'ದೇಸಿ ಗರ್ಲ್' ಹಾಡಿಗೆ ಯುವತಿಯರು ನಿಂತಲ್ಲೇ ಸ್ಟೆಪ್ ಹಾಕಿದರು. ಕಡೆಯಲ್ಲಿ 'ಮುಂಗಾರು ಮಳೆ' ಚಿತ್ರದ 'ಕುಣಿದು ಕುಣಿದು ಬಾರೆ' 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೇ ರಾಜಕುಮಾರ' ಹಾಡಿನೊಂದಿಗೆ 'ಯುವ ದಸರಾ'ಗೆ ಭವ್ಯ ತೆರೆ ಎಳೆದರು.

ಪಡ್ಡೆ ಹೈಕಳ ಮನಗೆದ್ದ ಫ್ಯಾಶನ್ ಶೋ: ಸುನಿಧಿ ಚೌಹಾಣ್ ಸಂಗೀತ ರಸಮಂಜರಿಗೂ ಮೊದಲು ನಡೆದ ಫ್ಯಾಶನ್ ಶೋ ಪಡ್ಡೆ ಹುಡುಗ–ಹುಡುಗಿಯರ ಮನ ಗೆದ್ದಿತು. ಸುಪ್ರಸಿದ್ಧ ಮೈಸೂರು ಸಿಲ್ಕ್ ಸೀರೆಯುಟ್ಟು ಕ್ಯಾಟ್ ವಾಕ್ ಮಾಡಿದ ಆರ್‌ಆರ್ ಗ್ರೂಪ್ ಹಾಗೂ ಟೀಂ ಎಲೈಟ್‌ನ ಬೆಡಗಿಯರು, ಕಣ್ ಸನ್ನೆಯಲ್ಲೇ ನೋಡುಗರ ಹೃದಯ ಗೆದ್ದರು. ಕಿವಿಗೆ ಇಂಪು ನೀಡುವ ಸಂಗೀತದೊಂದಿಗೆ ಕಣ್ಮನ ಸೆಳೆಯುವ ವಸ್ತ್ರ ವಿನ್ಯಾಸದೊಂದಿಗೆ ವೈಯ್ಯಾರದಿಂದ ಬೆಕ್ಕಿನ ನಡಿಗೆ ಹಾಕಿದ ಸುಂದರಿಯರು ಹಾಗೂ ಸುಂದರರು ಸೌಂದರ್ಯ ಲೋಕವನ್ನೇ ಸೃಷ್ಟಿಸಿದರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು 44ನೇ ವಾರ್ಡ್‌ನಲ್ಲಿ ಯಶಸ್ವಿ ಮನೆ ಮನೆ ದಸರಾ



ಮೈಸೂರು, ಅ.3(ಎಂಕೆ)– ನಗರ ಪಾಲಿಕೆ 44ನೇ ವಾರ್ಡ್‌ನಲ್ಲಿ ಮನೆ ಮನೆ ದಸರಾ ಅದ್ದೂರಿಯಾಗಿ ನೆರವೇರಿತು.

ಪಾಲಿಕೆ ಸದಸ್ಯೆ ಸವಿತಾ ಸುರೇಶ್ ನೇತೃತ್ವದಲ್ಲಿ ಬೋಗಾದಿ 2ನೇ ಹಂತದಲ್ಲಿ ನಡೆದ ಮನೆ ಮನೆ ದಸರಾ ಆಚರಣೆ ಚಾಮುಂಡೇಶ್ವರಿ ಶಾಸಕ ಜಿ.ಟಿ. ದೇವೇಗೌಡ ಚಾಲನೆ ನೀಡಿದರು.

ಇದೇ ವೇಳೆ ಮನೆ ಮನೆ ದಸರಾ ಕ್ರೀಡಾ ಕೂಟದಲ್ಲಿ 500ಕ್ಕೂ ಹೆಚ್ಚು ನಿವಾಸಿಗಳು ಭಾಗವಹಿಸಿ ಗಮನ ಸೆಳೆದರು. ವಿಜೇತ 99 ಮಂದಿಗೆ ಬಹುಮಾನ ವಿತರಣೆ ಮಾಡಲಾಯಿತು. ಬಳಿಕ ವಾರ್ಡಿನ ಮುಖಂಡರನ್ನು ಸನ್ಮಾನಿಸಿ ಗೌರವಿಸಲಾಯಿತು.

ನಂತರ ಪಾಲಿಕೆ ಸದಸ್ಯೆ ಸವಿತಾ ಸುರೇಶ್ ಮಾತನಾಡಿ, ಜಗತ್ ಪ್ರಸಿದ್ಧ ಮೈಸೂರು ದಸರಾ ಈ ವರ್ಷ ವಿಜೃಂಭಣೆಯಿಂದ ನಡೆಯುತ್ತಿದೆ. ಕೊರೊನಾದಿಂದಾಗಿ ಕಳೆದ 2 ವರ್ಷಗಳಲ್ಲಿ ಮನೆ ಮನೆ ದಸರಾ ಆಚರಣೆ ಸಾಧ್ಯವಾಗಿರಲಿಲ್ಲ. ಈ ವರ್ಷ ತುಂಬಾ ವಿಜೃಂಭಣೆಯಿಂದ ವಾರ್ಡಿನ ಎಲ್ಲಾ ನಾಗರಿಕರು ಒಟ್ಟುಗೂಡಿ ಆಚರಣೆ ಮಾಡಿರುವುದು ಸಂತಸ ತಂದಿದೆ ಎಂದರಲ್ಲದೆ ಸಹಕರಿಸಿದ ಎಲ್ಲಾ ಮುಖಂಡರು ಹಿರಿಯರು ವಾರ್ಡ್ ಮಿತ್ರರಿಗೆ ಧನ್ಯವಾದ ತಿಳಿಸಿದರು. ಪಾಲಿಕೆ ಉಪ ಆಯುಕ್ತ ಪ್ರಕಾಶ್, ಲಿಂಗೇಗೌಡ , ಉಮಾಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಮೊದಲನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು

ಸೈಯದ್ ಇಮಾಜ್



ಶುಭಕೋರುವವರು
ತಂದೆ: ಸೈಯದ್ ಇಮ್ರಾನ್
ತಾಯಿ : ಉಮ್ಮೆಸಲ್ಮಾ
ಕುಟುಂಬದವರು ಮತ್ತು ಸ್ನೇಹಿತರು

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ, ಮೈಸೂರು ಜಿಲ್ಲೆ.
Pattana panchayathi, Rammanahalli, Mysuru District-570019
Email id : itstaff_ulb_rammanahalli@yahoo.com, www.rammanahalli.mrc.gov.in

ಸಂ:ಪಪಂರ/ಜೆ.ಇ/02/2022–23 ದಿನಾಂಕ: 03.10.2022

ಟೆಂಡರ್ ಪ್ರಕಟಣೆ

ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ, ಮುಖ್ಯಾಧಿಕಾರಿರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಕೆಡಬ್ಲ್ಯೂ–10 ನಿಯಮದನ್ವಯ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ 2022–23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು. 15ನೇ ಹಣಕಾಸು ಅನುದಾನದ ಕಾಮಗಾರಿಗಳ **WORK_INDENT 138680, 138679,138678, 138677** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ನೋಂದಾಯಿತ ಗುತ್ತಿಗೆದಾರರು ಕಾಮಗಾರಿಗಳಿಗೆ ಇ.ಎಂ.ಡಿ ಹಾಗೂ ದರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಪಾವತಿ ಹಾಗೂ ನಮೂದಿಸುವುದು. ಹೆಚ್ಚಿನ ಮಾಹಿತಿ & ವಿವರಗಳನ್ನು ಇ–ವೆಬ್‌ಸೈಟ್ **www.eproc.kamataka.gov.in** ಮತ್ತು ವೆಬ್‌ಸೈಟ್: **www.rammanahallitown.mrc.gov.in**ನಲ್ಲಿ ಟೆಂಡರ್ ಬಗ್ಗೆ ಪರಿಶೀಲಿಸಬಹುದು ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ 17–10–2022 ಸಂಜೆ 5.00 ಗಂಟೆ. ಸ್ವೀಕೃತ ವಾದ ಟೆಂಡರ್ ತೆರೆಯುವ ದಿನಾಂಕ : 18–10–2022 ಸಂಜೆ : 5.00 ಗಂಟೆಗೆ.

ಸಹಿ/–(ಶ್ರೀ ಗಿರೀಶ್ ಬಿ.ಎನ್) ಕೆ.ಎ.ಎಸ್	ಸಹಿ/–(ಶ್ರೀಮತಿ ವಿ ಪುಷ್ಪಲತಾ)
ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ	ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

ಸವಿನೆನಪು



ಲೇ. ಸುಬ್ಬೇಗೌಡು ಶಿವಣ್ಣ ಲೇ. ಶ್ರೀಮತಿ ಜಿ.ಸಿ. ನಾಗರತ್ನ
ನೀವು ನಮ್ಮನ್ನಗಲಿ ವರ್ಷಗಳೇ ಕಳೆದರೂ ಸದಾ ನಿಮ್ಮ ನೆನಪಿನಲ್ಲೇ ಇರುವ
ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು, ನಂಜನಗೂಡು

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 24.9.2022 ರಂದು ನಿಧನರಾದ ಇವರ ಆತ್ಮಕ್ಕೆ ಶಾಂತಿ ಕೋರುವ ಸ್ನೇಹಿತ
ಬಿ.ಜಿ.ಪ್ರಕಾಶ್, ಯರಗನಹಳ್ಳಿ
ಶ್ರೀ ವಿಜಯ್‌ಕುಮಾರ್ ಎಂ





ಶ್ರೀರಂಗಪಟ್ಟಣದಲ್ಲಿ ಭಾರತ್ ಜೋಡೋ ಯಾತ್ರೆಗೆ ಭರ್ಜರಿ ಸ್ವಾಗತ

- ರಾಹುಲ್ ಬರಮಾಡಿಕೊಂಡ ಮಂಡ್ಯ ಕಾಂಗ್ರೆಸ್ ಮುಖಂಡರು
- ಯಾತ್ರೆಯಲ್ಲಿ ಪೂರ್ಣಕುಂಭ ಹೊತ್ತು ಸಾಗಿದ ಮಹಿಳೆಯರು
- ಪೂಜಾಕುಣಿತ, ಡೊಳ್ಳು, ನಗಾರಿ, ವೀರಗಾಸೆ ಕಲಾವಿದರ ಮೆರುಗು

ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಅ.3– ಭಾರತ್ ಜೋಡೋ ಯಾತ್ರೆ ಸೋಮವಾರ ಬೆಳಗ್ಗೆ 9.30 ಗಂಟೆ ಸುಮಾರಿಗೆ ಸಕ್ಕರೆನಾಡು ಮಂಡ್ಯ ಜಿಲ್ಲೆಯನ್ನು ಪ್ರವೇಶಿಸಿದ್ದು, ಜಿಲ್ಲಾ ಕಾಂಗ್ರೆಸ್ ಮುಖಂಡರು ಕಾಂಗ್ರೆಸ್‌ನ ಯುವರಾಜ ರಾಹುಲ್ ಗಾಂಧಿ ಅವರಿಗೆ ಪೂರ್ಣ ಕುಂಭ ಸ್ವಾಗತ ಕೋರಿ ಬರಮಾಡಿಕೊಂಡರು.

ಮೈಸೂರಿನ ವಸ್ತು ಪ್ರದರ್ಶನ ಮೈದಾನದಿಂದ ಬೆಳಗ್ಗೆ 7ಗಂಟೆ ಸುಮಾರಿಗೆ ಯಾತ್ರೆ ಆರಂಭವಾಯಿತು. ಚುಮು–ಚುಮು ಚಳಿಯಲ್ಲಿ ಹುರುಪಿನಿಂದ ಹೆಜ್ಜೆ ಹಾಕಿದ ರಾಹುಲ್ ಗಾಂಧಿ ನೇತೃತ್ವದ ಯಾತ್ರಾರ್ಥಿಗಳು ಕೇವಲ 2 ಗಂಟೆ 15 ನಿಮಿಷದಲ್ಲಿ ಮೈಸೂರಿನಿಂದ 14 ಕಿ.ಮೀ. ದೂರದಲ್ಲಿರುವ ಮಂಡ್ಯ ಜಿಲ್ಲೆಯ ನಗುವಿನಹಳ್ಳಿ ಗೇಟ್ ಬಳಿಗೆ ಆಗಮಿಸಿದರು.

ಮಂಡ್ಯ ಜಿಲ್ಲೆಯ ಗಡಿಯನ್ನು ಪ್ರವೇಶಿಸುತ್ತಿದಂತೆ ಮಾಜಿ ಶಾಸಕರಾದ ಎ.ಬಿ ರಮೇಶ್ ಬಂಡಿಸಿದ್ದೇಗೌಡ, ಚೆಲುವರಾಯಸ್ವಾಮಿ, ನರೇಂದ್ರಸ್ವಾಮಿ ನೇತೃತ್ವದ ಜಿಲ್ಲಾ ಕಾಂಗ್ರೆಸ್‌ನ ಕಾರ್ಯಕರ್ತರು ಹೂಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು.

ವಿವಿಧ ಜನಪದ ಕಲಾತಂಡಗಳ ಕಲರವ: ವೀರಗಾಸೆ, ಡೊಳ್ಳು, ನಗಾರಿ, ಕೋಲಾಟ, ಮಂಗಳವಾದ್ಯ, ಗಾರುಡಿಗೊಂಬೆ, ಕಂಸಾಳೆ, ಪೂಜಾ ಕುಣಿತ ಸೇರಿದಂತೆ ಹಲವು ಜನಪದ ಕಲಾವಿದರು ಸೇರಿದಂತೆ 100ರಿಂದ 200 ಮಹಿಳೆಯರು ಪೂರ್ಣಕುಂಭ ಹೊತ್ತು ಯಾತ್ರೆಯೊಂದಿಗೆ ಹೆಜ್ಜೆ ಹಾಕುವ ಮೂಲಕ ಮತ್ತಷ್ಟು ಉತ್ಸಾಹ ತುಂಬಿದರು.

ಪೊಲೀಸರಲ್ಲಿಗೊಂದಲ– ತಳ್ಳಾಟ, ನೂಕಾಟ: ನಗುವಿನಹಳ್ಳಿಯಲ್ಲಿ ಮೈಸೂರು ಮತ್ತು ಮಂಡ್ಯ ಪೊಲೀಸರ ನಡುವಿನ ಹೊಂದಾಣಿಕೆ ಕೊರತೆಯಿಂದ ಕೆಲಕಾಲ ಗೊಂದಲದ ವಾತಾವರಣ ಉಂಟಾಯಿತು.

ಮೈಸೂರಿನಿಂದ ಮಂಡ್ಯ ಜಿಲ್ಲೆಯ ಗಡಿಯವರೆಗೆ ರಾಹುಲ್ ಗಾಂಧಿ ಹಾಗೂ ಗಣ್ಯರು ಬರುವಾಗ ಅವರ ಸುತ್ತಲು ಹಗ್ಗ ಹಿಡಿದುಕೊಂಡು ಬಂದರು. ಆದರೆ, ಶ್ರೀರಂಗಪಟ್ಟಣ ಪ್ರವೇಶದ ವೇಳೆ ಮೈಸೂರು ಪೊಲೀಸರು ಹಗ್ಗವನ್ನು ಮಂಡ್ಯ ಪೊಲೀಸರಿಗೆ ನೀಡಲು ನಿರಾಕರಿಸಿದರು. ಇದರಿಂದ ಕೆಲ ಕಾಲ ಗೊಂದಲ ಸೃಷ್ಟಿಯಾಗಿ ತಳ್ಳಾಟ–ನೂಕಾಟವಾಯಿತು. ನಂತರ ಮಂಡ್ಯ ಪೊಲೀಸರು ಮಾನವ ಸರಪಳಿ ಸೃಷ್ಟಿಸಿಕೊಂಡು ರಾಹುಲ್ ಹಾಗೂ ತಂಡವನ್ನು ಶ್ರೀರಂಗಪಟ್ಟಣಕ್ಕೆ ಕರೆತಂದರು.

ದಾರಿಯುದ್ದಕ್ಕೂ ತಂಪು ಪಾನೀಯ ವ್ಯವಸ್ಥೆ: ನಗುವಿನಹಳ್ಳಿಯಿಂದ ಶ್ರೀರಂಗಪಟ್ಟಣದವರೆಗೆ ಅಲ್ಲಲ್ಲಿ ಕಾಂಗ್ರೆಸ್‌ನ ಮುಖಂಡರು ಯಾತ್ರಾರ್ಥಿಗಳಿಗೆ ಕಬ್ಬಿನ ಹಾಲು, ಎಳನೀರು, ಜ್ಯೂಸ್, ಮಜ್ಜಿಗೆ, ಲಸ್ಸಿ, ಮೋಸಂಬಿ ವಿತರಿಸಿದರು.

ಅಂತಿಮವಾಗಿ ಯಾತ್ರೆಯು ಬೆಳಗ್ಗೆ 10.30ಕ್ಕೆ ಶ್ರೀರಂಗಪಟ್ಟಣದ ಪರಿವರ್ತನಾ ಶಾಲೆಯನ್ನು ಪ್ರವೇಶಿಸಿತು. ಉಪಾಹಾರ ಸೇವಿಸಿ ವಿಶ್ರಾಂತಿ ಪಡೆದರು. ನಂತರ ಸುಮಾರು 2.30ರ ವೇಳೆಗೆ ಶ್ರೀರಂಗಪಟ್ಟಣದಿಂದ ಪಾಂಡವಪುರ ಕಡೆ ಪಾದಯಾತ್ರೆ ಸಾಗಿತು.

ಪಾದಯಾತ್ರೆಯಲ್ಲಿ ಕಾಣದ ಡಿಕೆಶಿ, ಸಿದ್ದು

ಎಐಸಿಸಿ ಅಧಿನಾಯಕಿ ಸೋನಿಯಾ ಗಾಂಧಿ ಮೈಸೂರಿಗೆ ಬಂದಿದ್ದ ಕಾರಣ ರಾಹುಲ್ ಗಾಂಧಿ ಜೊತೆಗಿನ ಭಾರತ್ ಜೋಡೋ ಪಾದಯಾತ್ರೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ಗೈರು ಹಾಜರಾದರು.

ಮೈಸೂರಿನವರೆಗೆ ಪಾದಯಾತ್ರೆಯಲ್ಲಿ ಪಾಲ್ಗೊಂಡ ಉಭಯ ನಾಯಕರು, ಬಳಿಕ ಸೋನಿಯಾ ಸ್ವಾಗತಿಸಲು ಮೈಸೂರಿನ ವಿಮಾನ ನಿಲ್ದಾಣಕ್ಕೆ ತೆರಳಿದ್ದರಿಂದ ಇಬ್ಬರು ಸಹ ಮಂಡ್ಯ ಜಿಲ್ಲೆಯ ಪಾದಯಾತ್ರೆಗೆ ಗೈರು ಹಾಜರಾಗಿದ್ದರು.

ಕೈ ನಾಯಕರಾದ ರಣದೀಪ್‌ಸಿಂಗ್ ಸುರ್ಜೇವಾಲ, ಬಿ.ಕೆ.ಹರಿಪ್ರಸಾದ್, ಎನ್. ಚಲುವರಾಯಸ್ವಾಮಿ, ಮಹಮ್ಮದ್ ನಲಪಾಡ್, ಧ್ರುವನಾರಾಯಣ, ಜಮೀರ್ ಅಹ್ಮದ್, ಕೃಷ್ಣಭೈರೇಗೌಡ, ಪ್ರಿಯಾಂಕ್ ಖರ್ಗೆ ಇತರರು ಭಾಗವಹಿಸಿದ್ದರು.



ಈ ನಡುವೆ ಮೈ–ಬೆಂ ಹೆದ್ದಾರಿಯ ಪಶ್ಚಿಮ ವಾಹಿನಿ ಬಳಿ ರಾಹುಲ್ ಗಾಂಧಿ ಬರುವ ಮೊದಲೇ ಬೃಹತ್ ಕಟೌಟ್ ನೆಲಸಮಗೊಂಡಿದ್ದು ಪಾದಯಾತ್ರೆ ಹಮ್ಮಿಕೊಂಡಿದ್ದ ರಾಷ್ಟ್ರ ಮಟ್ಟದ ನಾಯಕರಿಗೆ ಇರಿಸು ಮುರಿಸು ಉಂಟಾಗಿತ್ತು.

ಈ ಸಂದರ್ಭದಲ್ಲಿ ರಾಹುಲ್‌ಗಾಂಧಿ ಜೊತೆಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಎಂ.ಎಸ್.ಆತ್ಮಾನಂದ, ಜಮೀರ್ ಅಹ್ಮದ್ ಖಾನ್, ಕೃಷ್ಣಭೈರೇಗೌಡ, ಪ್ರಿಯಾಂಕ್ ಖರ್ಗೆ, ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ನಲಪಾಡ್, ಮಾಜಿ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಕೆ.ಬಿ. ಚಂದ್ರಶೇಖರ್, ಮಲ್ಲಾಜಮ್ಮ, ವಿಧಾನ ಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್‌ಗೂಳಿಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಮುಖಂಡರು ಸಾಥ್ ನೀಡಿದರು.

ದ್ವೇಷ, ಹಿಂಸೆಯ ವಿರುದ್ಧ ಐಕ್ಯತಾ ಯಾತ್ರೆ



ಪಾಂಡವಪುರ, ಅ.3– ದೇಶದಲ್ಲಿ ನಡೆಯುತ್ತಿರುವ ದ್ವೇಷ, ಹಿಂಸೆ ಹಾಗೂ ಕೋಮು ರಾಜಕಾರಣದ ವಿರುದ್ಧ ಹೋರಾಡಿ, ಇವುಗಳನ್ನು ತಡೆಯುವುದಕ್ಕೋಸ್ಕರ ಈ ಐಕ್ಯತಾ ಯಾತ್ರೆಯನ್ನು ನಡೆಸುತ್ತಿದ್ದೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಿಳಿಸಿದರು.

ಪಟ್ಟಣದ ಫೈಲೆಟ್ ವೃತ್ತದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಇದರ ಜತೆಗೆ ನಮ್ಮ ಪಾದಯಾತ್ರೆಯ ಪ್ರಮುಖ ಉದ್ದೇಶ ಎಂದರೆ ನಿರುದ್ಯೋಗ, ಬಡತನ, ಬೆಲೆ ಏರಿಕೆ ಸಮಸ್ಯೆ ವಿರುದ್ಧವಾಗಿ ನಾವು ಈ ಪಾದಯಾತ್ರೆಯನ್ನು ಹಮ್ಮಿಕೊಂಡಿದ್ದೇವೆ ಎಂದರು.

ಕರ್ನಾಟಕದಲ್ಲಿ ಇಡೀ ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಅಧಿಕಾರದಲ್ಲಿದೆ. ಪ್ರತಿ ಸರ್ಕಾರಿ ಕೆಲಸಕ್ಕೆ 40 ಪರ್ಸೆಂಟ್ ಲಂಚವನ್ನು ಪಡೆಯುತ್ತಿದ್ದಾರೆ. ರೈತರಿಂದ, ಕಾರ್ಮಿಕರಿಂದ, ವ್ಯಾಪಾರಸ್ಥರಿಂದ, ಉದ್ಯಮಿಗಳಿಂದ 40 ಪರ್ಸೆಂಟ್ ಲಂಚವನ್ನು ಬಿಜೆಪಿ ಸರ್ಕಾರ ಪಡೆಯುತ್ತಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದರು.

ಕರ್ನಾಟಕದಲ್ಲಿ ಗುತ್ತಿಗೆದಾರರು 40 ಪರ್ಸೆಂಟ್ ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಪತ್ರ ಬರೆದರೂ ಸಹ ಪ್ರಧಾನಿ ಮೋದಿ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಈ ಯಾತ್ರೆಯ ಉದ್ದೇಶ ಭ್ರಷ್ಟಾಚಾರದ ವಿರುದ್ಧ ಹೋರಾಡುವುದು. ಇಡೀ ದೇಶದ ಜನರ ಸಮಸ್ಯೆಯ ಧ್ವನಿಯಾಗಿ ಕೆಲಸ ಮಾಡುವುದು ನಮ್ಮ ಉದ್ದೇಶ ಎಂದರು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮೂರುವರೆ ಸಾವಿರಕ್ಕೂ ಹೆಚ್ಚು ಕಿಲೋ ಮೀಟರ್‌ನ ಪಾದಯಾತ್ರೆಯ ಉದ್ದೇಶವೇ ಸಮಸ್ಯೆ ಬಗೆಹರಿಸುವುದು. ಪಾದಯಾತ್ರೆಯಲ್ಲಿ ಮಂಡ್ಯ ಜಿಲ್ಲೆಯ ಸಾವಿರಾರು ಜನ ಹೆಜ್ಜೆ ಹಾಕಿದ್ದೀರಿ. ಈ ಜಿಲ್ಲೆಯಲ್ಲಿ ಇನ್ನು ಮೂರ್‍ನಾಲ್ಕು ದಿನ ಪಾದಯಾತ್ರೆ ನಡೆಯಲಿದ್ದು, ಯಶಸ್ವಿಗೊಳಿಸಿ ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ, ಸಲೀಂ ಅಹಮದ್, ಮಾಜಿ ಸಚಿವರಾದ ಕೃಷ್ಣಭೈರೇಗೌಡ, ಎನ್. ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಮುಖಂಡರಾದ ದಿನೇಶ್‌ಗೂಳಿಗೌಡ, ಕೆ.ಬಿ.ಚಂದ್ರಶೇಖರ್, ಡಾ.ಕೃಷ್ಣ, ಸಿ.ಡಿ. ಗಂಗಾಧರ್, ಸಿದ್ದಾರೂಢ ಡಾ.ರವೀಂದ್ರ ದಡದಪುರ ಶಿವಣ್ಣ ಇತರರು ಉಪಸ್ಥಿತರಿದ್ದರು.

ಕಬ್ಬು ತಿಂದು ಖುಷಿ ಪಟ್ಟ ರಾಹುಲ್



ಸಕ್ಕರೆ ನಾಡು ಮಂಡ್ಯದಲ್ಲಿ ಪಾದಯಾತ್ರೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಪಾಂಡವಪುರದ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ಬಳಿಗೆ ಪಾದಯಾತ್ರೆ ಬಂದಾಗ ರಾಹುಲ್ ಗಾಂಧಿ ರಸ್ತೆ ಬದಿ ನಿಂತಿದ್ದ ಎತ್ತಿನಗಾಡಿಯಿಂದ ಕಬ್ಬು ಎಳೆದುಕೊಂಡು ಅಗಿದು ಖುಷಿಪಟ್ಟರು.

ಜೋಡೋ ಯಾತ್ರೆಗೆ ಎರಡು ದಿನ ವಿರಾಮ

ನಾಳೆ ಆಯುಧಪೂಜೆ ಹಾಗೂ ನಾಡಿದ್ದು ವಿಜಯದಶಮಿ ಇರುವುದರಿಂದ ಪಾದಯಾತ್ರೆಯನ್ನು ಪಾಂಡವಪುರ ಪಟ್ಟಣದ ಪೈಲಟ್ ವೃತ್ತದಲ್ಲಿ ಮೊಟಕುಗೊಳಿಸಲಾಯಿತು. ಸಂಜೆ 4.45ರ ಸಮಯದಲ್ಲಿ ಬಹಿರಂಗ ಸಭೆ ಮುಗಿಸಿದ ಬಳಿಕ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿಯವರನ್ನು ಭೇಟಿ ಮಾಡಲು ಕಬಿನಿಗೆ ತೆರಳಿದರು.

ಪಾದಯಾತ್ರೆಯಲ್ಲಿ ಟಗರು

ರಾಹುಲ್‌ಗಾಂಧಿ ಭಾರತ್ ಜೋಡೋ ಪಾದಯಾತ್ರೆಯಲ್ಲಿ ಟಗರು ಮರಿ ಹೊತ್ತುಕೊಂಡು ರಾಹುಲ್ ಅಭಿಮಾನಿಯೊಬ್ಬ ಆಗಮಿಸಿದ್ದ. ಈ ಸಂದರ್ಭದಲ್ಲಿ ಪಾಲಹಳ್ಳಿ ವೃತ್ತದ ಬಳಿ ರಾಹುಲ್‌ಗೆ ಟಗರು ಉಡುಗೊರೆ ನೀಡಿ, ಕರಿ ಕಂಬಳಿ ಹೊದಿಸಿ ಗೌರವಿಸಲು ಮುಂದಾದಾಗ ಎಸ್‌ಪಿಜಿ ಭದ್ರತಾ ಪಡೆ ಅವಕಾಶ ನಿರಾಕರಿಸಿದರು.

ಯುವಕನ ಎದೆಯಲ್ಲಿ ರಾಹುಲ್ ಟ್ಯಾಟು: ರಾಹುಲ್ ಗಾಂಧಿ ಫೋಟೋ ಟ್ಯಾಟು ಹಾಕಿಸಿಕೊಂಡಿದ್ದ ಅಭಿಮಾನಿಯೊಬ್ಬ ರಾಹುಲ್ ಗಾಂಧಿ ಜೊತೆ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದ. ತೆಲಂಗಾಣ ಮೂಲದ ರಮೇಶ್ ನಾಯಕ್ ಎಂಬ ಕಾರ್ಯಕರ್ತ ರಾಹುಲ್ ಟ್ಯಾಟೂ ಪ್ರದರ್ಶಿಸುತ್ತಾ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು. ರಾಹುಲ್ ಗಾಂಧಿ ಕುಟುಂಬದ ಅನೇಕ ಮುಖಂಡರ ಟ್ಯಾಟುಗಳು ಇತ್ತು.

ಗುರುವಾರದ ಪಾದಯಾತ್ರೆಗೆ ಸೋನಿಯಾ ಸಾಥ್

ಗುರುವಾರ ಪಾಂಡವಪುರದ ಫೈಲಟ್ ವೃತ್ತದಿಂದ ಆರಂಭವಾಗುವ ಪಾದಯಾತ್ರೆಗೆ ಎಐಸಿಸಿ ಅಧಿನಾಯಕಿ ಸೋನಿಯಾಗಾಂಧಿ ಪಾಲೊಳ್ಳಲಿದ್ದಾರೆ. ರಾಹುಲ್ ಜೊತೆ ಚರ್ಚೆ ನಡೆಸಲು ಮೈಸೂರಿಗೆ ಬಂದಿರುವ ಸೋನಿಯಾ 2 ದಿನ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಅಂದು ಪಾಂಡವಪುರದಿಂದ ಕೆಲ ಗಂಟೆಗಳ ಕಾಲ ಸೋನಿಯಾ ಅವರು ರಾಹುಲ್‌ಗೆ ಪಾದಯಾತ್ರೆಯಲ್ಲಿ ಸಾಥ್ ನೀಡಲಿದ್ದಾರೆ



ಪಾಂಡವಪುರ ಬಳಿ ತೆರಳುವ ವೇಳೆ ರಸ್ತೆ ಬದಿ ನಿಂತಿದ್ದವರೊಂದಿಗೆ ಸೆಲ್ಫಿಗೆ ಫೋಸ್ ನೀಡಿದ ರಾಹುಲ್ ಗಾಂಧಿ.



ಶ್ರೀರಂಗಪಟ್ಟಣ ಬಳಿ ದರಸಗುಪ್ಪೆಯ ರಸ್ತೆ ಬದಿ ಬಿದಿರಿನ ಬುಟ್ಟಿ ನೇಯುತ್ತಿದ್ದ ಕುಟುಂಬದವರ ಕುಶಲ ವಿಚಾರಿಸಿ ಬುಟ್ಟಿ ಪರಿಶೀಲಿಸಿದ ರಾಹುಲ್ ಗಾಂಧಿ.

ಮೂರನೇ ಪುಟದಿಂದ

ರಾಹುಲ್ ಪಾದಯಾತ್ರೆ

ಆರಂಭದಲ್ಲಿ 2 ಸಾವಿರಕ್ಕೂ ಹೆಚ್ಚು ಜನ ಸಮೂಹ ಭಾಗವಹಿಸಿದ್ದ ಪಾದಯಾತ್ರೆ ಮುಂದಕ್ಕೆ ತೆರಳುತ್ತಿದ್ದಂತೆ ಹೆಚ್ಚೆಚ್ಚು ಜನರು ಸೇರತೊಡಗಿದರು. ಅಲ್ಲಿಂದ ಹೊರಟ ಯಾತ್ರೆ ಆಲ್ಬರ್ಟ್ ವಿಕ್ಟರ್ ರಸ್ತೆ ಮೂಲಕ ಸಾಗಿ, ನೆಹರು ವೃತ್ತದ ಮೂಲಕ ಅಶೋಕ ರಸ್ತೆ ಮೀಲಾದ್ ಪಾರ್ಕ್ ಬಳಿ ಬಂದಾಗ ಅಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಮಾಲಾರ್ಪಣೆ ಮಾಡಿದರು. ಸಮೀಪದ ಮಸೀದಿ ಹಾಗೂ ಸೇಂಟ್ ಫಿಲೋಮಿನಾ ಚರ್ಚ್‌ಗೂ ರಾಹುಲ್ ಭೇಟಿ ನೀಡಿದರು.

ಉತ್ಸಾಹದಿಂದ ರಾಹುಲ್ ತಮ್ಮ ಮೆರವಣಿಗೆಯನ್ನು ಮುಂದುವರೆಸುತ್ತಿದ್ದಂತೆ, ಜನಸಾಗರವೇ ಹರಿದುಬಂದಿತು. ಮೈಸೂರು–ಬೆಂಗಳೂರು ರಸ್ತೆಯ ಫೌಂಟೇನ್ ವೃತ್ತಕ್ಕೆ ಆಗಮಿಸುತ್ತಿದ್ದಂತೆ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್‌ಸೇಠ್ ಪ್ರತಿನಿಧಿಸುವ ಕ್ಷೇತ್ರದವರು, ಯಾತ್ರೆ ಮತ್ತು ರಾಹುಲ್‌ಗಾಂಧಿಯನ್ನು ಶ್ಲಾಘಿಸುವ ಘೋಷಣೆಗಳು ಮೊಳಗಿತು. ರಾಹುಲ್ ಮತ್ತು ಕಾಂಗ್ರೆಸ್ ನಾಯಕರ ಮೇಲೆ ಪುಷ್ಪಮಳೆಗರೆದರು.

ನಂತರ ಟಿಪ್ಪು ವೃತ್ತ, ಎಲ್‌ಐಸಿ ವೃತ್ತ (ಮಿಲೇನಿಯಂ ವೃತ್ತ), ಬನ್ನಿಮಂಟಪ ರಸ್ತೆ ಹಾಗೂ ಹಳೆ ಟೋಲ್‌ಗೇಟ್ ಮೂಲಕ ಮೆರವಣಿಗೆ ಸಾಗಿದ ರಾಹುಲ್, ಇಡೀ ಮಾರ್ಗದಲ್ಲಿ ನೆರೆದಿದ್ದ ಅಪಾರ ಜನಸ್ತೋಮವನ್ನು ಕೈಬೀಸಿ, ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್ (ಕೆಂಪೇಗೌಡ ವೃತ್ತ) ತಲುಪಿದರು. ಅಲ್ಲಿ ಅವರಿಗೆ ಅಪಾರ ಜನಸ್ತೋಮ ಅದ್ಧೂರಿ ಸ್ವಾಗತ ನೀಡಿದರು. ಸಿದ್ದಲಿಂಗಪುರದ ಬಳಿ ಪೂಜಾಕುಣಿತ, ವೀರಭದ್ರ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ರಾಹುಲ್ ಅವರಿಗೆ ಸಾಂಪ್ರದಾಯಿಕ ಸ್ವಾಗತ ನೀಡಿದವು. ಸಿದ್ದಲಿಂಗಪುರದಿಂದ ಮುಂದುವರಿದ ಯಾತ್ರೆ ಕಳಸ್ತವಾಡಿ ತಲುಪಿ, ಅಲ್ಲಿಂದ ಬೆಳಗ್ಗೆ 9.15ರ ವೇಳೆಗೆ ರಾಹುಲ್ ಗಾಂಧಿ ಯಾತ್ರೆ ಮಂಡ್ಯ ಜಿಲ್ಲೆ ಪ್ರವೇಶಿಸಿತು. ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಮುಖಂಡರು ರಾಹುಲ್ ಅವರನ್ನು ಅದ್ಧೂರಿಯಾಗಿ ಬರಮಾಡಿಕೊಂಡರು.

ಇಂದಿನ ಪಾದಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೆವಾಲಾ, ಶಾಸಕರಾದ ತನ್ವೀರ್‌ಸೇಠ್, ಪ್ರಿಯಾಂಕ್ ಖರ್ಗೆ, ರಿಜ್ವಾನ್ ಹರ್ಷದ್, ಡಾ. ಯತೀಂದ್ರ ಸಿದ್ದರಾಮಯ್ಯ, ಯು.ಟಿ.ಖಾದರ್, ಪಕ್ಷದ ಮುಖಂಡರಾದ ಬಿ.ಕೆ.ಹರಿಪ್ರಸಾದ್, ವಾಸು, ಎಂ.ಕೆ. ಸೋಮಶೇಖರ್, ಕೆ.ಹರೀಶ್‌ಗೌಡ, ಸಲೀಂ ಅಹಮದ್, ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಇನ್ನಿತರರು ಭಾಗವಹಿಸಿದ್ದರು.

ಕೌಂಟಿ ರೆಸಾರ್ಟ್‌ನಲ್ಲಿ ಸೋನಿಯಾ ಗಾಂಧಿ ವಾಸ್ತವ್ಯ

ನಂತರ ವಿಮಾನ ನಿಲ್ದಾಣದ ಲಾಂಜ್ ನಲ್ಲಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಹಾಗೂ ಕೆ.ಸಿ. ವೇಣುಗೋಪಾಲ್ ಅವರೊಂದಿಗೆ 10 ನಿಮಿಷಗಳ ಕಾಲ ಸಮಾಲೋಚಿಸಿದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯ ಪ್ರಗತಿ, ಜನರ ಪ್ರತಿಕ್ರಿಯೆ ಬಗ್ಗೆ ಮಾಹಿತಿ ಪಡೆದುಕೊಂಡರು. ಮುಂದಿನ ಯಾತ್ರೆಯಲ್ಲಿ ತಾವು ಭಾಗವಹಿಸಬೇಕಾದ ಸ್ಥಳ, ಮಾಡಿರುವ ವ್ಯವಸ್ಥೆ ಕುರಿತಂತೆಯೂ ಅವರು ರಾಜ್ಯ ನಾಯಕರೊಂದಿಗೆ ಚರ್ಚೆ ನಡೆಸಿದರು.

ವಿಂಡ್ ಫ್ಲವರ್‌ನಲ್ಲಿ ವಿಶ್ರಾಂತಿ: ವಿಮಾನ ನಿಲ್ದಾಣದಿಂದ ಭಾರೀ ಬಿಗಿ ಪೊಲೀಸ್ ಭದ್ರತೆಯಲ್ಲಿ ಚಾಮುಂಡಿಬೆಟ್ಟದ ತಪ್ಪಲಿನ ವಿಂಡ್ ಫ್ಲವರ್ ರೆಸಾರ್ಟ್‌ಗೆ ತೆರಳಿದ ಸೋನಿಯಾ ಗಾಂಧಿ, ಅಲ್ಲಿ ಮೀಸಲಿರಿಸ ಲಾಗಿದ್ದ ಪ್ರತ್ಯೇಕ ಕೊಠಡಿಯಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆದರು. ಇಲ್ಲಿಯೇ ಅಕ್ಟೋಬರ್ 6 ರವರೆಗೂ ವಾಸ್ತವ್ಯ ಹೂಡುವರು ಎಂದು ಹೇಳಲಾಗಿತ್ತಾದರೂ, ಕಡೇ ಘಳಿಗೆಯಲ್ಲಿ ವಾಸ್ತವ್ಯ ಸ್ಥಳ ಬದಲಾಯಿತು.

ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ವಾಸ್ತವ್ಯ: ಭಾರತ ಐಕ್ಯತಾ ಯಾತ್ರೆಯಲ್ಲಿ ಭಾಗವಹಿಸಲು ಆಗಮಿಸಿರುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಅವರ ಪುತ್ರ ರಾಹುಲ್ ಗಾಂಧಿ ಅವರೊಂದಿಗೆ ಇದೇ ಪ್ರಥಮ ಬಾರಿಗೆ ಹೆಚ್.ಡಿ.ಕೋಟೆ ತಾಲೂಕಿನ ಆರೆಂಜ್ ಕೌಂಟಿ ರೆಸಾರ್ಟ್ ನಲ್ಲಿ ವಾಸ್ತವ್ಯ ಹೂಡಿದ್ದಾರೆ.

ಆಯುಧ ಪೂಜೆ ಹಾಗೂ ವಿಜಯ ದಶಮಿ ಹಿನ್ನಲೆಯಲ್ಲಿ ಭಾರತ ಐಕ್ಯತಾ ಯಾತ್ರೆಗೆ 2 ದಿನಗಳ ಕಾಲ ವಿರಾಮ ನೀಡಿರುವ ಹಿನ್ನಲೆಯಲ್ಲಿ ವಿಶ್ರಾಂತಿ ಪಡೆಯಲು ಆಗಮಿಸಿರುವ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಮೊದಲು ಕಬಿನಿ ಜಂಗಲ್ ರೆಸಾರ್ಟ್‌ಗೆ ತೆರಳಿ ಟ್ ಮೂಲಕ ಆರೆಂಜ್ ಕೌಂಟಿ ರೆಸಾರ್ಟ್‌ಗೆ ತೆರಳಿ ಅಲ್ಲಿ ವಾಸ್ತವ್ಯ ಹೂಡಿದ್ದು, 2 ದಿನಗಳ ಕಾಲ ಅಲ್ಲಿಯೇ ಇದ್ದು, ರಾಜ್ಯ 'ಕೈ' ನಾಯಕರೊಂದಿಗೆ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ. ಕಬಿನಿ ಹಿನ್ನೀರಿನಲ್ಲಿ ಬೋಟ್ ಮೂಲಕ ಆರೆಂಜ್ ಕೌಂಟಿ ರೆಸಾರ್ಟ್‌ಗೆ ತೆರಳುತ್ತಿದ್ದ ವೇಳೆ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಪ್ರಕೃತಿ ಸೌಂದರ್ಯ ಸವಿದರು. ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ನೆರೆದಿದ್ದ ಆದಿವಾಸಿಗಳು ಪೆರಿ ಕೊಳಲು ನೃತ್ಯದ ಮೂಲಕ ಸೋನಿಯಾ ಗಾಂಧಿ, ಹಾಗೂ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಿದರು. ಇದೇ ವೇಳೆ ಉಪಸ್ಥಿತರಿದ್ದ ಶಾಸಕ ಅನಿಲ್ ಚಿಕ್ಕಮಾದು ಕೂಡ ಸ್ವಾಗತ ಕೋರಿದರು. ನಾಳೆ(ಮಂಗಳವಾರ) ಬೆಳಗ್ಗೆ ಸೋನಿಯಾ ಹಾಗೂ ರಾಹುಲ್ ಗಾಂಧಿ ಸಫಾರಿಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಆಗಮಿಸುವ ವಿಷಯ ತಿಳಿದು ರೆಸಾರ್ಟ್ ಬಳಿ ಭಾರೀ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಈ ವೇಳೆ ಅವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು. ಇದೀಗ ರೆಸಾರ್ಟ್ ಸುತ್ತಮುತ್ತ ಭಾರೀ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಈ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಶಾಸಕ ಅನಿಲ್ ಚಿಕ್ಕಮಾದು, ಮುಖಂಡ ಪ್ರದ್ಯುಮ್ನ, ಅರಣ್ಯ ಇಲಾಖೆ ಅಧಿಕಾರಿ ಕೃತಿಕಾ, ಎಸ್‌ಪಿ ಚೇತನ್, ಡಿವೈಎಸ್ಪಿ ರವಿಪ್ರಸಾದ್, ಸರ್ಕಲ್ ಇನ್ಸ್ ಪೆಕ್ಟರ್ ಬಸವರಾಜ್, ಆನಂದ್, ಎಸ್‌ಐಗಳಾದ ಜಯಪ್ರಕಾಶ್, ಶ್ರವಣದಾಸ ರೆಡ್ಡಿ, ರೆಸಾರ್ಟ್ ಜನರಲ್ ಮ್ಯಾನೇಜರ್ ಕಾಂತಿ, ಡೆಪ್ಯೂಟಿ ಜನರಲ್ ಮ್ಯಾನೇಜರ್ ಬಿದ್ದಪ್ಪ ಸೇರಿದಂತೆ ಇನ್ನಿತರರಿದ್ದರು.

ಕೊಡಗು ಭೇಟಿ ರದ್ದು: ಹವಾಮಾನ ವೈಪರೀತ್ಯ ಹಿನ್ನೆಲೆಯಲ್ಲಿ ಈ ಮೊದಲು ನಿಗದಿಯಾಗಿದ್ದ ಕೊಡಗು ಭೇಟಿಯನ್ನು ರದ್ದುಪಡಿಸಿದ ಸೋನಿಯಾ, ಕಬಿನಿ ರೆಸಾರ್ಟ್ ನಲ್ಲಿ ವಾಸ್ತವ್ಯ ಹೂಡಲು ನಿರ್ಧರಿಸಿದರು. ಮಡಿಕೇರಿಯ ರೆಸಾರ್ಟ್‌ವೊಂದರಲ್ಲಿ ಅಕ್ಟೋಬರ್ 6ರವರೆಗೂ ವಾಸ್ತವ್ಯ ಹೂಡುವರೆಂದು ಪೂರ್ವನಿಗದಿಯಾಗಿದ್ದರಿಂದ ಅಲ್ಲಿ ಸರ್ವ ರೀತಿಯ ಸಿದ್ಧತೆ ಮಾಡಲಾಗಿತ್ತು.

ಚಾಮುಂಡಿಬೆಟ್ಟ ಭೇಟಿಯೂ ರದ್ದು: ಈ ಮೊದಲು ವಿಂಡ್ ಫ್ಲವರ್ ರೆಸಾರ್ಟ್‌ನಿಂದ ಚಾಮುಂಡಿಬೆಟ್ಟಕ್ಕೆ ತೆರಳಿ ಶ್ರೀ ಚಾಮುಂಡೇಶ್ವರಿ ದರ್ಶನ ಮಾಡುವರೆಂದು ನಿಗದಿಯಾಗಿದ್ದ ಕಾರ್ಯಕ್ರಮವನ್ನೂ ಸೋನಿಯಾ ಗಾಂಧಿ ಕಡೇ ಘಳಿಗೆಯಲ್ಲಿ ರದ್ದುಗೊಳಿಸಿದರು.

ಯಾತ್ರೆಯಲ್ಲಿ ಭಾಗಿ: ಅಕ್ಟೋಬರ್ 6ರವರೆಗೂ ಆರೆಂಜ್ ಕೌಂಟಿ ರೆಸಾರ್ಟ್ ನಲ್ಲಿ ವಾಸ್ತವ್ಯ ಹೂಡಲಿರುವ ಕಾಂಗ್ರೆಸ್ ಅಧಿನಾಯಕಿ, ಅಂದು ಬೆಳಗ್ಗೆ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ ಐಕ್ಯತಾ ಯಾತ್ರೆಯಲ್ಲಿ ಸಾಂಕೇತಿಕವಾಗಿ ಸ್ವಲ್ಪ ದೂರ ಹೆಜ್ಜೆ ಹಾಕಲಿರುವ ಅವರು, ನಂತರ ವಿಶೇಷ ವಿಮಾನ ದಲ್ಲಿ ದೆಹಲಿಗೆ ತೆರಳುವರು ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಪ್ರತಿಭಟನೆ ಆತಂಕ!: ಅತಿವೃಷ್ಟಿ ಯಿಂದಾದ ಹಾನಿಯ ಪರಿಶೀಲನೆಗೆಂದು ತೆರಳಿದ್ದಾಗ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಿಗೆ ಕೊಡಗಿನಲ್ಲಿ ಮೊಟ್ಟೆ ಎಸೆದ ಪ್ರಕರಣದ ಹಿನ್ನೆಲೆಯಲ್ಲಿ ಸೋನಿಯಾ ಗಾಂಧಿಯವರ ಮಡಿಕೇರಿ ಭೇಟಿಯನ್ನು ರದ್ದು ಮಾಡಲಾಗಿದೆ ಎಂದು ಕೆಲವರು ಹೇಳುತ್ತಿದ್ದರಾದರೂ, ಹವಾಮಾನ ವೈಪರೀತ್ಯದಿಂದ ಹೆಲಿಕಾಪ್ಟರ್ ಲ್ಯಾಂಡ್ ಆಗಲು ಅಡ್ಡಿಯುಂಟಾಗುವುದೆಂಬ ಕಾರಣದಿಂದ ಎಸ್‌ಪಿಜಿ ಅಧಿಕಾರಿಗಳ ಸಲಹೆಯಂತೆ ವಾಸ್ತವ್ಯದ ಸ್ಥಳವನ್ನು ಬದಲಾಯಿಸಲಾಗಿದೆ ಎಂದು ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

ದೈಹಿಕವಾಗಿ ಫಿಟ್ ಆಗಿರುವುದನ್ನು ಸಾಬೀತುಪಡಿಸಲು ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ!

- ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವ್ಯಂಗ್ಯ
- ರಾಹುಲ್ ಗಾಂಧಿ ಮಾನಸಿಕವಾಗಿ ಸದೃಢರಾಗಿಲ್ಲ.
- ಅವರು ಕಾಲಿಟ್ಟಲ್ಲೆಲ್ಲಾ ಕಾಂಗ್ರೆಸ್ ನೆಲಕಚ್ಚಿದೆ
- ಮೊದಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಒಗ್ಗೂಡಿಸಲಿ



ಶೋಭಾ ಕರಂದ್ಲಾಜೆ ಮೆಟ್ಟಿಲುಗಳ ಮೂಲಕ ಬೆಟ್ಟವೇರಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು.

> “ರಸಗೊಬ್ಬರ ಮತ್ತು ಖಾದ್ಯ ತೈಲದ ಉತ್ಪಾದನಾ ಕ್ಷೇತ್ರದಲ್ಲಿ ದೇಶ ಸ್ವಾವಲಂಬಿಯಾಗಬೇಕಿದೆ. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಯೋಜನೆಗಳನ್ನು ರೂಪಿಸುತ್ತಿದೆ. ವಿದೇಶದಿಂದ ಆಮದು ಮಾಡಿಕೊಳ್ಳಬೇಕಾದ್ದರಿಂದ ಕೆಲವೆಡೆ ಅಭಾವ ಉಂಟಾಗುತ್ತಿದೆ. ದೇಶದಲ್ಲಿ ಅತಿವೃಷ್ಟಿ–ಅನಾವೃಷ್ಟಿ ಯಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಬೆಳೆ ವಿಮೆ ಯೋಜನೆಯಿಂದಾಗಿ ನಷ್ಟಕ್ಕೊಳಗಾದ ರೈತರಿಗೆ ನೆರವಾಗಲಿದೆ. ಇದರೊಟ್ಟಿಗೆ ರೈತರ ಸಂಕಷ್ಟಗಳನ್ನು ದೂರ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುವುದು.
>
> –ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಮೈಸೂರು, ಅ.3(ಜಿಎ)– ರಾಹುಲ್ ಗಾಂಧಿ ದೈಹಿಕವಾಗಿ ಫಿಟ್ ಆಗಿದ್ದೇನೆಂದು ತೋರಿಸಿಕೊಳ್ಳಲು ಭಾರತ್ ಜೋಡೋ ಯಾತ್ರೆ ಮಾಡ್ತಿದ್ದಾರೆ. ಆದರೆ, ರಾಹುಲ್ ಗಾಂಧಿ ಮಾನಸಿಕವಾಗಿ ಸದೃಢವಾಗಿಲ್ಲ. ಗೊತ್ತು ಗುರಿಯಿಲ್ಲದ ನಾಯಕ. ಭಾರತ್ ಜೋಡೋ ಯಾತ್ರೆಯನ್ನು ಪಾಕ್ ಆಕ್ರಮಿತ ಕಾಶ್ಮೀರ ಚೀನಾ ಗಡಿಯಲ್ಲಿ ಮಾಡಲಿ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದರು.

ಪ್ರತಿ ವರ್ಷ ನವರಾತ್ರಿ ಸಂದರ್ಭದಲ್ಲಿ ಮೆಟ್ಟಿಲುಗಳ ಮಾರ್ಗವಾಗಿ ಚಾಮುಂಡಿಬೆಟ್ಟವೇರಿ ವಿಶೇಷ ಪೂಜೆ ಸಲ್ಲಿಸುತ್ತಾ ಬಂದಿರುವ ಶೋಭಾ ಕರಂದ್ಲಾಜೆ, ಈ ಬಾರಿಯೂ ಚಾಮುಂಡಿಬೆಟ್ಟವನ್ನು ಹತ್ತುವ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿ, ಪ್ರತಿ ವರ್ಷದ ನವರಾತ್ರಿ ಸಂದರ್ಭದಲ್ಲಿ ಮೆಟ್ಟಿಲುಗಳನ್ನೇರಿ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುತ್ತಾ ಬಂದಿದ್ದೇನೆ. ಕಳೆದೆರಡು ವರ್ಷ ಕೊರೊನಾದಿಂದ ಅದ್ಧೂರಿ ದಸರಾ ಆಚರಣೆ ಸಾಧ್ಯವಾಗಿರಲಿಲ್ಲ. ಈ ಬಾರಿ ಕೊರೊನಾ ಭಯವಿಲ್ಲದೇ ದಸರಾ ಆಚರಣೆ ಮಾಡುತ್ತಿದ್ದೇವೆ. ದೇಶಕ್ಕೆ ಒಳಿತಾಗಲೆಂದು ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಕೈ ಬಲಪಡಿಸುವಂತೆ ಸಂಕಲ್ಪ ಮಾಡಿಕೊಂಡು ಬೆಟ್ಟವನ್ನೇರಿದ್ದೇನೆ. ಚಾಮುಂಡೇಶ್ವರಿ ಬಳಿಯೂ ದೇಶಕ್ಕೆ ಒಳಿತಾಗುವಂತೆ, ಪ್ರಧಾನಿ ನರೇಂದ್ರ ಮೋದಿಯವರಿಗೆ ಒಳಿತಾಗುವಂತೆ ಪ್ರಾರ್ಥಿಸುತ್ತೇನೆ ಎಂದರು. ರಾಹುಲ್ ಗಾಂಧಿಯ ಭಾರತ್ ಜೋಡೋ ಯಾತ್ರೆ ಕುರಿತು ಪ್ರತಿಕ್ರಿಯಿಸಿದ ಅವರು, ರಾಹುಲ್ ಗಾಂಧಿ ಯಾವ ಕ್ಷೇತ್ರಗಳಿಗೆ ಕಾಲಿಟ್ಟಿದ್ದಾರೆ ಅಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚಿದ್ದು, 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಡ್ರೆಸ್ ಇಲ್ಲದಂತಾಗುತ್ತದೆ. ಇದರೊಟ್ಟಿಗೆ ರಾಹುಲ್ ಗಾಂಧಿ ಕೂಡ ನೆಲೆ ಕಳೆದುಕೊಳ್ಳಲಿದ್ದಾರೆ. ಭಾರತ್ ಜೋಡೋ ಯಾತ್ರೆಯಿಂದ ಕಾಂಗ್ರೆಸ್‌ಗೆ ಲಾಭವಾಗುವುದಿಲ್ಲ ಎಂದು ಟೀಕಿಸಿದರು.

ಭಾರತ್ ಜೋಡೋ ಯಾತ್ರೆ ಯಶಸ್ಸಿನಿಂದ ಬಿಜೆಪಿಯವರಿಗೆ ಭಯವಾಗಿದೆ ಎಂಬ ರಾಜ್ಯ ಕಾಂಗ್ರೆಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿ, ಭಾರತ್ ಜೋಡೋ ಯಾತ್ರೆಗೆ ಬಿಜೆಪಿ ಹೆದರುವ ಪ್ರಶ್ನೆಯೇ ಇಲ್ಲ. ಪ್ರಧಾನಿ ನರೇಂದ್ರ ಮೋದಿ ಜಾಗತಿಕ ವರ್ಚಸ್ಸುಳ್ಳ ನಾಯಕರು. ನರೇಂದ್ರ ಮೋದಿ ಸಾಧನೆ ಮುಂದೆ ರಾಹುಲ್ ಗಾಂಧಿ ಸಾಧನೆ ಏನೂ ಇಲ್ಲ. ನರೇಂದ್ರ ಮೋದಿ ಸಾರಥ್ಯದಲ್ಲಿ ದೇಶ ಸದೃಢವಾಗಿದೆ. ಪಿಎಫ್‌ಐ ನಂತಹ ದೇಶ ವಿರೋಧಿ ಸಂಘಟನೆಗಳನ್ನು ನರೇಂದ್ರ ಮೋದಿ ಬಗ್ಗು ಬಡಿದಿದ್ದಾರೆ. ಸಿದ್ದರಾಮಯ್ಯ ಕಂಡರೆ ಡಿಕೆಶಿಗೆ ಭಯ. ಡಿಕೆಶಿ ಕಂಡರೆ ಸಿದ್ದರಾಮಯ್ಯಗೆ ಭಯ. ಅವರಿಬ್ಬರ ನಡುವಿನ ಭಯ ಹೋಗಲಾಡಿಸಿ, ಇಬ್ಬರೂ ಅಪ್ಪಿಕೊಳ್ಳುವಂತೆ ಮಾಡಲು ರಾಹುಲ್ ಗಾಂಧಿ ಯಾತ್ರೆ ನಡೆಸುತ್ತಿದ್ದಾರೆ. ಮೊದಲು ಸಿದ್ದರಾಮಯ್ಯ–ಡಿಕೆಶಿಯನ್ನು ಜೋಡಿಸುವ ಕೆಲಸ ಮಾಡಲಿ. ಸೋನಿಯಾ, ರಾಹುಲ್, ಪ್ರಿಯಾಂಕ ಸೇರಿದಂತೆ ಇಡೀ ಕಾಂಗ್ರೆಸ್ ಪಡೆ ಬಂದರೂ ಬಿಜೆಪಿ ಹೆದರುವುದಿಲ್ಲ ಎಂದು ಶೋಭಾ ಕರಂದ್ಲಾಜೆ ತಿರುಗೇಟು ನೀಡಿದರು. ಈ ವೇಳೆ ವಿಧಾನಪರಿಷತ್ ಸದಸ್ಯೆ ಭಾರತಿಶೆಟ್ಟಿ, ಬಿಜೆಪಿ ಅಧ್ಯಕ್ಷ ಶ್ರೀವತ್ಸ ಪಾಲಿಕೆ(ನಾಮ ನಿರ್ದೇಶಿತ) ಸದಸ್ಯ ಜಗದೀಶ್, ಮುಖಂಡ ಜೋಗಿ ಮಂಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಂಬೂಸವಾರಿ ; ಜನಪ್ರತಿನಿಧಿಗಳ ಪಾಸ್ ಬಿಜೆಪಿ ಕಾರ್ಯಕರ್ತರ ಪಾಲು

- ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಆರೋಪ
- ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳದಿರಲು ನಿರ್ಧಾರ



ಮೈಸೂರು,ಅ.3(ಪಿಎಂ)– ದಸರಾ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿಗೆ ಜನಪ್ರತಿನಿಧಿಗಳಿಗೆ ನೀಡಬೇಕಿದ್ದ ಪಾಸ್‌ಗಳನ್ನು ಬಿಜೆಪಿ ಕಾರ್ಯಕರ್ತರ ಮನೆ ಮನೆಗೆ ಬೇಕಾಬಿಟ್ಟಿ ಹಂಚಲಾಗಿದೆ ಎಂದು ಆರೋಪಿಸಿರುವ ಮೈಸೂರು ಮಹಾನಗರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ತಾವು ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿರುವುದಾಗಿ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅದ್ಧೂರಿ ದಸರಾ ಘೋಷವಾಕ್ಯವನ್ನೇ ಬಂಡವಾಳ ಮಾಡಿಕೊಂಡಿರುವ ಬಿಜೆಪಿ, ಆ ಮೂಲಕ ಮತ ರಾಜಕೀಯದಲ್ಲಿ ತೊಡಗಿದೆ. ಜಂಬೂಸವಾರಿಗೆ ಜನಪ್ರತಿನಿಧಿಗಳಿಗೆ ನೀಡಬೇಕಿದ್ದ ಪಾಸ್‌ಗಳನ್ನು ಬಿಜೆಪಿ ಕಾರ್ಯಕರ್ತರ ಮನೆ ಮನೆಗೆ ಬೇಕಾಬಿಟ್ಟಿ ಹಂಚಿ ಪಾಸ್‌ನ ಘನತೆ ಹಾಳುಗೆಡವಿರುವುದು ಮಾತ್ರವಲ್ಲದೆ, ಮುಂದಿನ ಚುನಾವಣೆ ಗಮನದಲ್ಲಿಟ್ಟುಕೊಂಡು ಬಿಜೆಪಿ, ಮತ ರಾಜಕಾರಣದಲ್ಲಿ ತೊಡಗಿದೆ ಎಂದು ದೂರಿದ್ದಾರೆ.

ಪಾಲಿಕೆ ಸದಸ್ಯರಿಗೆ ಕೇವಲ ತಲಾ ಹತ್ತು ಪಾಸ್‌ಗಳನ್ನು ನೀಡುವ ಮೂಲಕ ಕಣ್ಣೊರೆಸುವ ತಂತ್ರ ಅನುಸರಿಸಿರುವ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ಜಿಲ್ಲಾಡಳಿತ, ಬಿಜೆಪಿ ಕಾರ್ಯಕರ್ತರಿಗೆ ಮನಬಂದಂತೆ ಪಾಸ್‌ಗಳನ್ನು ವಿತರಿಸಿದೆ. ಮೈಸೂರಿನ ಸಂಘ–ಸಂಸ್ಥೆಗಳು, ಜನಪ್ರತಿನಿಧಿಗಳನ್ನು ಆರಂಭದಿಂದಲೂ ಕಡೆಗಣಿಸುತ್ತಿರುವ ಸರ್ಕಾರ, ಪಾಸ್ ಹಂಚಿಕೆಯಲ್ಲೂ ಅದನ್ನು ಮುಂದುವರೆಸಿದೆ. ಇದು ನಾಡಿನ ಜನತೆಯ ದಸರಾವಾಗದೇ ಬಿಜೆಪಿ ಉತ್ಸವವಾಗಿದೆ ಎಂದು ಕಿಡಿಕಾರಿದ್ದಾರೆ.

ಸಾರ್ವಜನಿಕರು ಗೋಗರೆದರೂ ಪಾಸ್ ಸಿಗದಿರುವ ಸನ್ನಿವೇಶ ಸೃಷ್ಟಿಸಿರುವ ಮೈಸೂರಿನ ಬಿಜೆಪಿ ಮುಖಂಡರು ತಮ್ಮ ಕಾರ್ಯಕರ್ತರ ಮುಖೇನ ಟಿಕೆಟ್‌ಗಳನ್ನು ಮನಬಂದಂತೆ ಬಿಕರಿಯಲ್ಲಿ ತೊಡಗಿರುವುದು ನಾಚಿಕೆಗೇಡಿನ ಸಂಗತಿ. 500 ಗೋಲ್ಡ್ ಕಾರ್ಡ್‌ಗಳನ್ನು ಬೆಂಗಳೂರು ಮೂಲದ ಟ್ರಾವೆಲ್ ಏಜೆನ್ಸಿ ಬೇನಾಮಿ ಹೆಸರುಗಳಲ್ಲಿ ತೆಗೆದುಕೊಂಡು ಹೋಗಿರುವುದರ ಹಿಂದೆ ಸ್ಥಳೀಯರ ಕೈವಾಡ ಇರುವ ಸಾಧ್ಯತೆ ಇದೆ. ಇಲ್ಲವಾದರೆ, ಜಿಲ್ಲಾಡಳಿತವೇ ಇದರ ಹಿಂದೆ ಇದ್ದರೂ ಆಶ್ಚರ್ಯವಿಲ್ಲ.


ಇನ್ನು ಸಾವಿರ ಹಾಗೂ ಒಂದೂವರೆ ಸಾವಿರ ರೂ. ಮುಖಬೆಲೆಯ ಎರಡು ಮಾದರಿ ಟಿಕೆಟ್‌ಗಳು ಕೆಲವೇ ನಿಮಿಷಗಳ ಅಂತರದಲ್ಲಿ ಬಿಕರಿಯಾಗಿರುವುದು ಅನುಮಾನ ಮೂಡಿಸಿದೆ. ಒಟ್ಟಾರೆ ದಸರಾ ಪಾಸ್ ಅನ್ನು ಬಿಜೆಪಿಗರು ದಂಧೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಮೊಳಗಿದ 'ಜೋಡೋ... ಜೋಡೋ... ಭಾರತ್ ಜೋಡೋ...' ಘೋಷಣೆ

ಮೈಸೂರಲ್ಲಿ ರಾಹುಲ್ ಗಾಂಧಿ ಪಾದಯಾತ್ರೆ



ಚಾಮುಂಡೇಶ್ವರಿ ದರ್ಶನ ಪಡೆದ ರಾಹುಲ್ ಗಾಂಧಿ



ಮೈಸೂರು, ಅ.3(ಆರ್‌ಕೆಬಿ)–ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೋಮವಾರ ಮೈಸೂರಿನಲ್ಲಿ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಪಾದಯಾತ್ರೆಯಲ್ಲಿ ಪಾಲ್ಗೊಂಡಿರುವ ಅವರು, ಬಿಡುವಿನ ಸಮಯದಲ್ಲಿ ಶ್ರೀರಂಗಪಟ್ಟಣದ ಬಳಿಯಿಂದ ಮೈಸೂರಿನ ಚಾಮುಂಡಿಬೆಟ್ಟಕ್ಕೆ ವಾಹನದಲ್ಲಿ ಬಂದರು. ಅವರೊಂದಿಗೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಜೊತೆಗಿದ್ದರು. ರಾಹುಲ್‌ಗಾಂಧಿ ಚಾಮುಂಡಿಬೆಟ್ಟಕ್ಕೆ ಬಂದ ಹಿನ್ನೆಲೆಯಲ್ಲಿ ಒಂದು ಗಂಟೆ ಕಾಲ ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಸಾರ್ವಜನಿಕರಿಗೆ ಪ್ರವೇಶ ನಿಷೇಧಿಸಲಾಗಿತ್ತು.

ಮೈಸೂರಿಗೆ ಬರುತ್ತಿರುವ ತಾಯಿ ಸೋನಿಯಾಗಾಂಧಿ ಅವರನ್ನು ಮಧ್ಯಾಹ್ನ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡ ರಾಹುಲ್, ನಂತರ ಶ್ರೀರಂಗಪಟ್ಟಣಕ್ಕೆ ವಾಹನದಲ್ಲಿ ತೆರಳಿದರು.

ಮಂಡ್ಯ ಜಿಲ್ಲೆಗೆ ತೆರಳಿದ ಪಾದಯಾತ್ರೆ: ಮೈಸೂರು ಜಿಲ್ಲೆಯಲ್ಲಿ 'ಭಾರತ್ ಜೋಡೋ' ಬಿರುಸಿನ ಪಾದಯಾತ್ರೆ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರು ಜಿಲ್ಲೆಯ ಕಳಸ್ತವಾಡಿ ಗಡಿಯಲ್ಲಿ ಮೈಸೂರು ಜಿಲ್ಲೆ ಪಾದಯಾತ್ರೆ ಪೂರ್ಣಗೊಳಿಸಿ, ಮಂಡ್ಯ ಜಿಲ್ಲೆಗೆ ತೆರಳಿದರು. ಕಳಸ್ತವಾಡಿ ಗೇಟ್ ಬಳಿ ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಮುಖಂಡರು ರಾಹುಲ್ ಗಾಂಧಿ ಅವರಿಗೆ ಹಾರ ಹಾಕಿ ಬರಮಾಡಿಕೊಂಡರು.

ರಾರಾಜಿಸಿದ ಫ್ಲೆಕ್ಸ್, ಬ್ಯಾನರ್‌ಗಳು, ಯಾತ್ರೆ ಮಾರ್ಗದಲ್ಲಿ ಟ್ರಾಫಿಕ್ ಜಾಮ್...



ಭಾರತ್ ಜೋಡೋ ಯಾತ್ರೆ ಸಾಗಿದ ಇಡೀ ಮಾರ್ಗದಲ್ಲಿ ಯಾತ್ರೆಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳು, ಬ್ಯಾನರ್‌ಗಳು, ಹೋರ್ಡಿಂಗ್‌ಗಳು ರಸ್ತೆ ಇಕ್ಕೆಲಗಳಲ್ಲಿ ಪ್ರದರ್ಶಿಸಲಾಗಿತ್ತು. ಭಾರತ್ ಜೋಡೋ ಯಾತ್ರೆಗೆ ಶುಭ ಕೋರುವ ಫ್ಲೆಕ್ಸ್‌ಗಳು, ಕಾಂಗ್ರೆಸ್ ಬಾವುಟಗಳು ರಾರಾಜಿಸಿದವು.

ರಾಹುಲ್ ಗಾಂಧಿ ಪಾದಯಾತ್ರೆ ತೆರಳುವ ಮಾರ್ಗದ ಸುತ್ತಮುತ್ತ ಟ್ರಾಫಿಕ್ ಜಾಮ್ ಉಂಟಾಗಿತ್ತು. ಹೆಚ್ಚು ಪೊಲೀಸರನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿತ್ತು. ದಸರಾ ಪ್ರವಾಸಿಗರ ದಟ್ಟಣೆಯಿಂದಾಗಿ ಬೆಂಗಳೂರು, ಬನ್ನೂರು ಮತ್ತು ರಿಂಗ್ ರೋಡ್ ಕಡೆಯಿಂದ ನಗರಕ್ಕೆ ಬರುವ ರಸ್ತೆಗಳಲ್ಲಿ ಕಿ.ಮೀ.ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸುಗಮ ಸಂಚಾರ ಸರಿಪಡಿಸಲು ಪೊಲೀಸರು ಪರದಾಡುವಂತಾಯಿತು. ರಾಹುಲ್ ಯಾತ್ರೆ ಮೈಸೂರು ಬಿಟ್ಟು ಸಾಗುತ್ತಿದ್ದಂತೆ ಟ್ರಾಫಿಕ್ ಜಾಮ್ ಕಡಿಮೆಯಾಯಿತು. ಯಾವುದೇ ಅಹಿತಕರ ಘಟನೆಗಳಿಗೂ ಅವಕಾಶ ಆಗದ ರೀತಿಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.



ಇಡ್ಲಿ ವಡೆ, ಖಾರಾಬಾತ್, ಕಾಫಿ ಸೇವಿಸಿದ ರಾಹುಲ್

ಉಪಾಹಾರದ ಹಣ ಅವರೇ ಕೊಟ್ಟರು

ಮೈಸೂರು: ಮಾರ್ಗ ಮಧ್ಯೆ ಸಿದ್ದಲಿಂಗಪುರದ ಬಳಿ ರಸ್ತೆ ಬದಿಯಲ್ಲಿದ್ದ ಕಸ್ತೂರಿ ನಿವಾಸ ಹೋಟೆಲ್‌ಗೆ ತೆರಳಿದ ರಾಹುಲ್ ಗಾಂಧಿ ಅಲ್ಲಿ ಬೆಳಗಿನ ಉಪಾಹಾರ ಸೇವಿಸಿದರು. ಇಡ್ಲಿ ವಡೆ, ಖಾರಾಬಾತ್, ಕಾಫಿ ಸೇವಿಸಿದ ರಾಹುಲ್ ಅವರೊಂದಿಗೆ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಮತ್ತು ಇತರೆ ನಾಯಕರೂ ಉಪಾಹಾರ ಸೇವಿಸಿದರು. ರಾಹುಲ್ ಅವರೇ ನಗುಮೊಗದೊಂದಿಗೆ ಉಪಾಹಾರದ ಬಿಲ್ ನೀಡಿದರು. ಅವರಿಗೆ ಉಪಾಹಾರ ಸರಬರಾಜು ಮಾಡಿದ ಹೋಟೆಲ್ ಕಾರ್ಮಿಕ ಲಕ್ಷ್ಮಣ್, ತಾನು ಮುಂದಿನ ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸುತ್ತಿರುವ ರಾಹುಲ್‌ಗಾಂಧಿ ಅವರಂತಹ ನಾಯಕರಿಗೆ ಉಪಾಹಾರ ಪೂರೈಸಿದ ಸಂತಸ ವ್ಯಕ್ತಪಡಿಸಿದರು. ಹೋಟೆಲ್ ಕಾರ್ಮಿಕರು ರಾಹುಲ್ ಅವರೊಂದಿಗೆ ಫೋಟೋ ತೆಗೆಸಿಕೊಂಡು ಖುಷಿಪಟ್ಟರು.

ಕಾಂಗ್ರೆಸ್ ಟೀಕೆ ಬಿಡಿ... ಮೊದಲು ಈಶ್ವರಪ್ಪನವರ ಕಣ್ಣೀರು ಒರೆಸಿ...

ಬಿಜೆಪಿಗೆ ಡಿ.ಕೆ.ಶಿವಕುಮಾರ್ ಟಾಂಗ್

ಮೈಸೂರು, ಅ.3(ಆರ್‌ಕೆಬಿ)– 'ಭಾರತ್ ಜೋಡೋ' ಯಾತ್ರೆಯನ್ನು ಬಿಟ್ಟು ಮೊದಲು ತಮ್ಮ ಪಕ್ಷವನ್ನು ಜೋಡಿಸಿಕೊಳ್ಳುವಂತೆ ಟೀಕಿಸಿದ ಬಿಜೆಪಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟಾಂಗ್ ನೀಡಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಅವರು, ಬಿಜೆಪಿಗೆ ನಮ್ಮ ಪಕ್ಷದ ಬಗ್ಗೆ ಯೋಚಿಸುವ ಅಗತ್ಯವಿಲ್ಲ. ತಮ್ಮಲ್ಲಿ ರುವ ಪ್ರಮಾದಗಳನ್ನು ಅವರು ಸರಿಪಡಿಸಿಕೊಳ್ಳಲಿ, ಪಾಪ ಈಶ್ವರಪ್ಪ ಕಣ್ಣೀರು ಸುರಿಸುತ್ತಿದ್ದಾರೆ. ಅವರನ್ನು ಮೊದಲು ಸಮಾಧಾನಪಡಿಸಲಿ ಎಂದರು. ಅ.6ರಂದು ನಡೆಯುವ ಪಾದಯಾತ್ರೆಯಲ್ಲಿ ಸೋನಿಯಾ ಗಾಂಧಿ ಪಾಲ್ಗೊಳ್ಳಲಿದ್ದಾರೆ. ಹಬ್ಬದ ಹಿನ್ನೆಲೆಯಲ್ಲಿ 2 ದಿನ ವಿಶ್ರಾಂತಿ ಪಡೆಯುತ್ತಾರೆ. ಅಲ್ಲಿಗೆ ಯಾವ ಕಾರ್ಯಕರ್ತ, ಮುಖಂಡರಿಗೂ ಅವಕಾಶವಿಲ್ಲ. ಅ.5ರಂದು ಮೈಸೂರಿಗೆ ಖರ್ಗೆ ಬರಲಿದ್ದಾರೆ. ಅ.6ರಂದು ಖರ್ಗೆ ಕೂಡ ಯಾತ್ರೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಡಿ.ಕೆ.ಶಿ ತಿಳಿಸಿದರು.



ಭಾರತ ಜೋಡೋ ಯಾತ್ರೆಯ ಮೂಲಕ ಮೈಸೂರಿಗೆ ಆಗಮಿಸಿದ ರಾಹುಲ್ ಗಾಂಧಿ ಅವರಿಗೆ ಅವರ ತಂದೆ–ತಾಯಿಯ ಅಪರೂಪದ ಫೋಟೋವನ್ನು ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿ ಹಾಗೂ ನಗರಪಾಲಿಕೆ ಸದಸ್ಯೆ ರಜನಿ ಅಣ್ಣಯ್ಯ ಅವರ ಪುತ್ರ ಯೋಗೇಶ್ ಅಣ್ಣಯ್ಯ ಉಡುಗೊರೆಯಾಗಿ ನೀಡಿದರು.

ಯಾತ್ರೆ ನಡುವೆ ರಾಹುಲ್ ಗಾಂಧಿ 'ಟೆಂಪಲ್ ರನ್'



ಮೈಸೂರಿನಲ್ಲಿ ಪಾದಯಾತ್ರೆ ವೇಳೆ ಸೋಮವಾರ ಬೆಳಗ್ಗೆ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ, ತನ್ವೀರ್‌ಸೇಠ್ ಅವರೊಂದಿಗೆ ಅಶೋಕ ರಸ್ತೆಯಲ್ಲಿರುವ ಆಜಮ್ ಮಸೀದಿಗೆ ಭೇಟಿ ನೀಡಿ, ಮುಸ್ಲಿಂ ಸಮುದಾಯದವರಿಂದ ಅಭಿನಂದನೆ ಸ್ವೀಕರಿಸಿದರು. ಈ ವೇಳೆ ಶಾಸಕ ತನ್ವೀರ್‌ಸೇಠ್ ಮಸೀದಿಯ ಇತಿಹಾಸವನ್ನು ರಾಹುಲ್ ಗಾಂಧಿ ಅವರಿಗೆ ವಿವರಿಸುತ್ತಿರುವುದನ್ನು ಸಿದ್ದರಾಮಯ್ಯ ಮತ್ತು ಇತರರು ನೋಡುತ್ತಿದ್ದಾರೆ.



ಮೈಸೂರು, ಅ.3(ಆರ್‌ಕೆಬಿ)– ಭಾರತ್ ಜೋಡೋ ಪಾದಯಾತ್ರೆ ನಡುವೆಯೇ ರಾಹುಲ್ ಗಾಂಧಿ ಅವರು ದೇವಸ್ಥಾನ, ಮಸೀದಿ, ಚರ್ಚ್‌ಗಳಿಗೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಸಾವಿರಾರು ಕಾರ್ಯಕರ್ತರು ಸಾಥ್ ನೀಡಿದ್ದರಿಂದ ಉತ್ಸಾಹದಿಂದ ಹೆಜ್ಜೆ ಹಾಕಿದ ರಾಹುಲ್ ಗಾಂಧಿ ಮಾರ್ಗಮಧ್ಯೆ ಅಶೋಕ ರಸ್ತೆಯಲ್ಲಿರುವ ಆಜಮ್ ಮಸೀದಿಗೆ ಭೇಟಿ ನೀಡಿದರು. ಅವರನ್ನು ಮುಸ್ಲಿಂ ಮುಖಂಡರು ಸ್ವಾಗತಿಸಿದರು. ನಂತರ ರಾಹುಲ್ ವಿಶ್ವವಿಖ್ಯಾತ ಸಂತ ಫಿಲೋಮಿನಾ ಚರ್ಚ್‌ಗೂ ಭೇಟಿ ನೀಡಿದ್ದರು. ಅಲ್ಲಿನ ವಾಸ್ತುಶಿಲ್ಪಕ್ಕೆ ಮಾರುಹೋದರು. ಪಾದಯಾತ್ರೆ ಮೈಸೂರು ಜಿಲ್ಲೆಯ ಗಡಿ ಪೂರ್ಣಗೊಳಿಸಿ, ಮಂಡ್ಯ ಜಿಲ್ಲೆಗೆ ಪ್ರವೇಶಿಸಿದ ನಂತರ, ವಾಹನದಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿದ ಅವರು ಚಾಮುಂಡೇಶ್ವರಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ವೈವಿಧ್ಯತೆ ರಾಷ್ಟ್ರಮಟ್ಟದಲ್ಲಿ ಹೆಸರುವಾಸಿ

ಮೈಸೂರು, ಅ.3(ಎಸ್‌ಪಿಎನ್)– ದಸರಾ ಮಹೋತ್ಸವದ ಅಂಗವಾಗಿ ಅರಮನೆ ಸಾಂಸ್ಕೃತಿಕ ವೇದಿಕೆ ಸೇರಿದಂತೆ ಒಟ್ಟು 9 ವೇದಿಕೆಗಳಲ್ಲಿ ಪ್ರದರ್ಶನಗೊಂಡ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಂಸ್ಕೃತಿಕ ನಗರಿ ಮೈಸೂರಿನ ಕೀರ್ತಿಯನ್ನು ರಾಷ್ಟ್ರ ಮಟ್ಟದಲ್ಲಿ ಹೆಚ್ಚಿಸಿದೆ. ಇದರಲ್ಲಿ ಸುಮಾರು 4,500ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿ ತಮ್ಮ ಸಾಂಸ್ಕೃತಿಕ ಪ್ರತಿಭೆ ಅನಾವರಣಗೊಳಿಸಿದ್ದಾರೆ.

ಸೆ.26ರಿಂದ ಇಲ್ಲಿಯವರೆಗೆ ಒಟ್ಟು 9 ವೇದಿಕೆಗಳಲ್ಲಿ ಹೆಸರಾಂತ ಕಲಾವಿದರಿಂದ ಭರತನಾಟ್ಯ, ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ರಂಗಗೀತೆ, ಜಾನಪದ ಗಾಯನ, ವಿವಿಧ ಕಲಾ ಪ್ರಕಾರಗಳು ಹಾಗೂ ಸುಗಮ ಸಂಗೀತ, ಲಾವಣಿ, ಕಂಸಾಳೆ, ವೀರಭದ್ರ ಕುಣಿತ, ನೃತ್ಯರೂಪಕ ಸೇರಿದಂತೆ ವಿವಿಧ ವಾದ್ಯ ಗೋಷ್ಠಿಗಳು ಪ್ರದರ್ಶನಗೊಂಡು ಭಾರತದ ಸಾಂಸ್ಕೃತಿಕ ಬಹುತ್ವ ಅನಾವರಣಗೊಳಿಸಿದ್ದಾರೆ ಎಂಬ ಮಾತು ಸಾರ್ವಜನಿಕ ವಲಯದಿಂದ ಕೇಳಿ ಬಂದಿದೆ.

ವೇದಿಕೆಯಲ್ಲೇ ಚೆಕ್ ವಿತರಣೆ: ಅರಮನೆ ವೇದಿಕೆಯಲ್ಲಿ 32 ಕಲಾ ತಂಡಗಳು, ಜಗನ್ಮೋಹನ ಅರಮನೆ ವೇದಿಕೆಯಲ್ಲಿ 36 ತಂಡಗಳು, ಕರ್ನಾಟಕ ಕಲಾಮಂದಿರ ವೇದಿಕೆಯಲ್ಲಿ 36, ಗಾನ ಭಾರತಿ ವೇದಿಕೆಯಲ್ಲಿ 36, ನಾದಬ್ರಹ್ಮ ವೇದಿಕೆ 36, ಚಿಕ್ಕಗಡಿಯಾರ ವೇದಿಕೆ 42, ಪುರಭವನ ವೇದಿಕೆಯಲ್ಲಿ ಪೌರಾಣಿಕ 25 ನಾಟಕ, ನಂಜನಗೂಡು ವೇದಿಕೆ(ಅರಮನೆ ಮಾಳ)ಯಲ್ಲಿ 34 ಕಾರ್ಯಕ್ರಮಗಳು ನಡೆದಿವೆ. ಕಿರು ರಂಗಮಂದಿರದಲ್ಲಿ 19 ಹವ್ಯಾಸಿ ನಾಟಕ, ರಂಗಾಯಣದಲ್ಲಿ 10 ನಾಟಕಗಳು ಪ್ರದರ್ಶನಗೊಂಡು ಜನರ ಮನಸೂರೆಗೊಂಡಿವೆ.

ಹಾಗಾಗಿ ಪ್ರತಿಬಾರಿಯಂತೆ ಈ ಬಾರಿಯೂ ಆ ತಂಡದ ಕಾರ್ಯಕ್ರಮ ಮುಗಿದ ತಕ್ಷಣ ಆಯಾಯ ಕಲಾವಿದರ ತಂಡಕ್ಕೆ ಸ್ಥಳದಲ್ಲೆ ಚೆಕ್ ವಿತರಿಸುವ ಮೂಲಕ ಯಾವುದೇ ಗೊಂದಲಕ್ಕೆ ಆಸ್ಪದ ನೀಡಿಲ್ಲ. ಅರಮನೆ ವೇದಿಕೆಯಲ್ಲಿ ಮಾತ್ರ ಸೋಮವಾರ ಸಾಂಸ್ಕೃತಿಕ ಚಟುವಟಿಕೆಗಳು ಮುಕ್ತಾಯಗೊಂಡಿದ್ದು, ಇನ್ನುಳಿದಂತೆ 8 ವೇದಿಕೆಗಳಲ್ಲಿ



ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ (ಅ.4) ಒಂದು ದಿನ ಇರಲಿದೆ ಎಂದು ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಜನರ ಮನಗೆದ್ದ ಅರಮನೆ ವೇದಿಕೆ: ಅದರಲ್ಲೂ ಅರಮನೆ ವೇದಿಕೆಯಲ್ಲಿ ಜರುಗಿದ 'ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ' ಕಾರ್ಯಕ್ರಮ, 'ಪೊಲೀಸ್ ಬ್ಯಾಂಡ್', 'ಒಡೆಯರ್ ಕೃತಿಗಳ ಗಾನ ವಾದ್ಯ ವೈಭವ' ಸೇರಿದಂತೆ ಅಂತರರಾಷ್ಟ್ರೀಯ ಕಲಾವಿದರು ನಡೆಸಿಕೊಟ್ಟ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಫಲಪುಷ್ಪ ಪ್ರದರ್ಶನವೂ ಸೇರಿದಂತೆ ಜನರ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು ಎಂದು ಪ್ರವಾಸಿಗ ರಾಜೀವ್ ಅಗಳಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದೀಪಾಲಂಕಾರಕ್ಕೆ ಮನಸೋತ ಪ್ರವಾಸಿಗರು: ದಸರಾದ ಪ್ರಮುಖ ಆಕರ್ಷಣೆಯ ಭಾಗವಾದ ದೀಪಾಲಂಕಾರ ವರ್ಷದಿಂದ ವರ್ಷಕ್ಕೆ ಮತ್ತಷ್ಟು ವರ್ಣಮಯವಾಗಿದೆ. ಈ ಬಾರಿ ದೀಪಾಲಂಕಾರ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಕೊಲ್ಕತ್ತಾದ ದುರ್ಗಾ ಪೂಜೆಗಾಗಿ ದೀಪಾಲಂಕಾರ ಅದ್ಧೂರಿಯಾಗಿರುತ್ತದೆ. ಆ ದೀಪಾ ಲಂಕಾರವನ್ನು ಇಲ್ಲಿ ನೋಡಿದ್ದು ಹೆಮ್ಮೆಯ ಸಂಗತಿ. ಕುಟುಂಬ ಸಮೇತ ಆಗಮಿಸಿ ಈ ಅಂದವನ್ನು ಎಷ್ಟು ನೋಡಿದರೂ ಸಾಲದು. ಕಳೆದ 2 ದಿನದಿಂದ ರಾತ್ರಿ 7ರಿಂದ 12 ಗಂಟೆಯವರೆಗೆ ದೀಪಾಲಂಕಾರ ವೀಕ್ಷಣೆಗೆ ಅನುವು ಮಾಡಿಕೊಟ್ಟಿದ್ದು ಹೊರಗಡೆಯಿಂದ ಬಂದಿದ್ದ ಪ್ರವಾಸಿಗರು ದೀಪಾಲಂಕಾರ ನೋಡಲು ಅನುಕೂಲವಾಗಿದೆ ಎಂದು ಬೆಂಗಳೂರಿನ ನಿವಾಸಿ ನಂಜುಂಡಸ್ವಾಮಿ ತಿಳಿಸಿದರು.

ಬ್ಯಾಂಕ್ ಲೋನ್ ಆಮಿಷ: 2.95 ಲಕ್ಷ ವಂಚನೆ

- ಟ್ರೇಡಿಂಗ್ ಆ್ಯಪ್‌ನಲ್ಲಿ 2.10 ಲಕ್ಷ ಪಂಗನಾಮ
- ಉಡುಗೊರೆ ಆಸೆ ತೋರಿಸಿ 35.38 ಲಕ್ಷ ಮೋಸ

ಮೈಸೂರು, ಅ.3– ಬ್ಯಾಂಕ್‌ನಿಂದ ಲೋನ್ ಕೊಡುವುದಾಗಿ ಕರೆ ಮಾಡಿ ವ್ಯಕ್ತಿಯೊಬ್ಬರಿಗೆ ಆನ್‌ಲೈನ್ ಮೂಲಕ 2.95 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ವಿವಿ ಮೊಹಲ್ಲಾ ನಿವಾಸಿ ಎಸ್.ಶಿವಶಂಕರ್(26) ಅವರಿಗೆ ಕರೆ ಮಾಡಿದ ವಂಚಕ ತನ್ನನ್ನು ಬ್ಯಾಂಕ್ ಸಿಬ್ಬಂದಿ ಎಂದು ಪರಿಚಯಿಸಿಕೊಂಡು ಬ್ಯಾಂಕ್‌ನಿಂದ ಲೋನ್ ನೀಡುವುದಾಗಿ ತಿಳಿಸಿದಲ್ಲದೆ, ಶಿವಶಂಕರ್ ಬ್ಯಾಂಕ್ ಖಾತೆಗೆ 2,96,495 ರೂ. ಜಮೆ ಮಾಡುವಂತೆ ತಿಳಿಸಿದ್ದಾನೆ. ಅವರು ಹಣ ಜಮೆ ಮಾಡಿದ ನಂತರ ಓಟಿಪಿ ಪಡೆದು 2,95,174 ರೂ.ಗಳನ್ನು ಅವರ ಅಕೌಂಟ್‌ನಿಂದ ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ.

2.10 ಲಕ್ಷ ವಂಚನೆ: ಮತ್ತೊಂದು ಪ್ರಕರಣದಲ್ಲಿ ಟ್ರೇಡಿಂಗ್ ಆ್ಯಪ್‌ನಲ್ಲಿ ಹಣ ಹೂಡಿಕೆ ಮಾಡಿಕೊಂಡು 2.10 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಬೋಗಾದಿ ನಿವಾಸಿ ಎಂ.ಪಿ.ಜಗದೀಶ್ (37) ಅವರಿಗೆ ಟೆಲಿಗ್ರಾಮ್ ಆ್ಯಪ್‌ನಲ್ಲಿ ಪರಿ ಚಯವಾದ ವ್ಯಕ್ತಿ ತಿಳಿಸಿದಂತೆ ಟ್ರೇಡಿಂಗ್ ಆ್ಯಪ್‌ವೊಂದರಲ್ಲಿ ಅವರು 2.10 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಆ್ಯಪ್‌ನ ಅಕೌಂಟ್‌ನಲ್ಲಿ ಅವರಿಗೆ ಲಾಭ ಬಂದಿದೆ ಎಂದು ತೋರಿಸಿತ್ತಾದರೂ ಆ ಹಣವನ್ನು ಡ್ರಾ ಮಾಡಲು ಸಾಧ್ಯವಾಗಲಿಲ್ಲ. ನಂತರ ಆ್ಯಪ್‌ನಲ್ಲಿನ ಅವರ ಖಾತೆ ಬ್ಲಾಕ್ ಆಗಿದೆ. ಇವೆರಡು ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಕೊಡಗು ವರದಿ: ವಿದೇಶದಿಂದ ಉಡುಗೊರೆ ಕಳುಹಿಸುವುದಾಗಿ ನಂಬಿಸಿ ಬೆಳೆಗಾರರೊಬ್ಬರಿಗೆ ಆನ್‌ಲೈನ್ ಮೂಲಕ 35.38 ಲಕ್ಷ ರೂ. ವಂಚಿಸಲಾಗಿದೆ. ಕೊಡಗಿನ ನೆಲಜಿ ಗ್ರಾಮದ ಬೆಳೆಗಾರ ಎಂ.ಎಂ.ಅಪ್ಪಚ್ಚ ವಂಚನೆಗೊಳಗಾದವರಾಗಿದ್ದು, ಇವರ ಪತ್ನಿ ಸೋನಿ ಅಪ್ಪಚ್ಚ ಅವರಿಗೆ ಕಳೆದ 2 ತಿಂಗಳ ಹಿಂದೆ ಫೇಸ್‌ಬುಕ್ ಮೂಲಕ ಪರಿಚಯವಾದ ಬೈರತು ಯಡೆಟ್ಟಾ ಎಂಬ ವ್ಯಕ್ತಿ ತಾನು ವೇಲ್ಸ್ ದೇಶದಲ್ಲಿ ಇರುವುದಾಗಿ ತಿಳಿಸಿದ್ದಾನೆ. ನಂತರ ಸೋನಿ ಅವರ ವಾಟ್ಸ್‌ಅಪ್ ನಂಬರ್ ಪಡೆದ ಆತ ಕೆಲ ದಿನಗಳ ಕಾಲ ಚಾಟ್ ಮಾಡುತ್ತಿದ್ದ. ಇತ್ತೀಚೆಗೆ ತಾನು ಉಡುಗೊರೆ ಕಳುಹಿಸುವುದಾಗಿ ತಿಳಿಸಿ, ಉಡುಗೊರೆ ಪಾರ್ಸಲ್ ಮಾಡಿದ್ದ ರಸೀದಿಯನ್ನೂ ಕೂಡ ವಾಟ್ಸ್‌ಅಪ್ ಮೂಲಕ ಸೋನಿ ಅವರಿಗೆ ರವಾನಿಸಿದ್ದ. ಸೆ.20ರಂದು ಸೋನಿ ಅವರಿಗೆ ಕರೆ ಮಾಡಿದ ವ್ಯಕ್ತಿ ತಾನು ದೆಹಲಿಯ ಕಸ್ಟಮ್ಸ್‌ನಿಂದ ಮಾತನಾಡುವುದಾಗಿ ತಿಳಿಸಿ, ತಮಗೆ ಬಂದಿರುವ ಪಾರ್ಸಲ್‌ನಲ್ಲಿ ಡಾಲರ್ ಇರುವುದಾಗಿಯೂ ಉಡುಗೊರೆ ಬಿಡಿಸಿಕೊಳ್ಳಲು ಭಾರತದ ತೆರಿಗೆ ಮತ್ತು ಕಸ್ಟಮ್ ಹಾಗೂ ಇತರ ಶುಲ್ಕಗಳು 35.38 ಲಕ್ಷ ರೂ. ಪಾವತಿಸಬೇಕೆಂದು ತಿಳಿಸಿ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಆದರೆ ಇದುವರೆಗೂ ಅವರಿಗೆ ಯಾವುದೇ ಉಡುಗೊರೆ ಬಂದಿಲ್ಲ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಲಾಕ್‌ನಲ್ಲಿ ದಸರಾ ಗೋಲ್ಡ್‌ಕಾರ್ಡ್: ಬೆಂಗಳೂರು ಟ್ರಾವೆಲ್ ಏಜೆನ್ಸಿ ವಿರುದ್ಧ ಕೇಸ್



ಮೈಸೂರು, ಅ.3– ದಸರಾ ಗೋಲ್ಡ್ ಕಾರ್ಡ್ ಅನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಬೆಂಗಳೂರಿನ ಟ್ರಾವೆಲ್ ಏಜೆನ್ಸಿಯೊಂದರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ದಸರಾ ಗೋಲ್ಡ್ ಕಾರ್ಡ್‌ಗಳನ್ನು ಆನ್‌ಲೈನ್ ಮೂಲಕ 4,999 ರೂ.ಗಳಿಗೆ ಖರೀದಿಸಿದ್ದ ಬೆಂಗಳೂರಿನ ಸವಾರಿ ಇಂಟರ್ ನ್ಯಾಷನಲ್ ಟ್ರಾವೆಲ್ಸ್ ಎಂಬ ಸಂಸ್ಥೆಯು ಒಂದು ಗೋಲ್ಡ್ ಕಾರ್ಡ್‌ಗೆ 7,000 ರೂ.ಗಳಂತೆ ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ಪ್ರಶಾಂತ್ ಎಂಬುವವರು ಜಿಲ್ಲಾಧಿಕಾರಿಗಳಿಗೆ ವಾಟ್ಸ್ ಅಪ್ ಮೂಲಕ ದೂರು ಸಲ್ಲಿಸಿದ್ದರು. ಅಲ್ಲದೆ, ಟ್ರಾವೆಲ್ ಏಜೆನ್ಸಿ ಅವರು ಸಾರ್ವಜನಿಕರನ್ನು ಸಂಪರ್ಕಿಸಿ ಗೋಲ್ಡ್ ಕಾರ್ಡ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ಕುರಿತು ಮಾತುಕತೆ ನಡೆಸಿರುವ ಆಡಿಯೋವನ್ನೂ ಕೂಡ ಕಳುಹಿಸಿದ್ದರು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ವಿಶೇಷ ತಹಶೀಲ್ದಾರರಾದ ಎನ್.ಕೆ.ನಿಶ್ಚಯ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.





ಕಾನೂನು ವಿವಿ ಕುಲಪತಿ ಬಸವರಾಜು ಮತ್ತು ಕಾನೂನು ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಮಿಥನ ದೇಶಿಕ್ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ರಾಜ್ಯ ವಕೀಲರ ಪರಿಷತ್ ಉಪಾಧ್ಯಕ್ಷ ಚಂದ್ರಮೌಳಿ ಇನ್ನಿತರರಿದ್ದರು.

ಕಬ್ಬಿಗೆ ಬೆಂಬಲ ಬೆಲೆ ಏರಿಕೆಗೆ ಇಂದು ಮಧ್ಯರಾತ್ರಿಯ ಗಡುವು: ತಪ್ಪಿದರೆ ಜಂಬೂಸವಾರಿ ದಿನ ಪ್ರತಿಭಟನೆ

- ರೈತ ಮುಖಂಡರ ಎಚ್ಚರಿಕೆ
- ಮುಖ್ಯಮಂತ್ರಿಗಳೊಂದಿಗೆ ಸಭೆ ಏರ್ಪಡಿಸುವುದಾಗಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭರವಸೆ

ಮೈಸೂರು, ಅ.3(ಜಿಎ)–ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಳದ ಬಗ್ಗೆ ನಾಳೆ(ಮಂಗಳವಾರ) ರಾತ್ರಿ 12 ಗಂಟೆಯೊಳಗೆ ಸರ್ಕಾರ ತನ್ನ ನಿಲುವು ಪ್ರಕಟಿಸದಿದ್ದರೆ, ವಿಜಯದಶಮಿ ದಿನದಂದೇ ಮೈಸೂರು ಜಿಲ್ಲೆಯಾದ್ಯಂತ ಬಾರೀ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ದಸರಾ ಮಹೋತ್ಸವದ ವಿಜಯದಶಮಿಯಂದು ಕರ್ನಾಟಕ ರೈತ ಸಂಘವು ಪ್ರತಿಭಟನೆಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸಿದರು.

ಈ ವೇಳೆ ಸಭೆಯಲ್ಲಿ ಮಾತನಾಡಿದ ಬಡಗಲಪುರ ನಾಗೇಂದ್ರ, ಸಿಎಂ ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಈ ಹಿಂದೆ ತಿಳಿಸಿದ್ದು, ಆದರೆ, ಮಾತಿಗೆ ತಪ್ಪಿದ್ದಾರೆ. ಹಾಗಾಗಿ ನೀವೇ ದಸರಾ ಮಾಡಿ ನಾವು ದಸರಾ ದಿನ ಪ್ರತಿಭಟನೆ ಮಾಡುತ್ತೇವೆ. ನಮನ್ನೂ ಜೈಲಿಗೆ ಕಳುಹಿಸಿ, ನೀವೇ ದಸರಾ ಆಚರಣೆ ಮಾಡಿಕೊಳ್ಳಿ. ನಾಳೆ ಮಧ್ಯರಾತ್ರಿಯೊಳಗೆ ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಳ ಮಾಡದಿದ್ದರೆ ನಾವು ಪ್ರತಿಭಟನೆ ಮಾಡೇ ಮಾಡುತ್ತೇವೆ. ಈಗಾಗಲೇ ಪ್ರತಿಭಟನೆ



ಎಲ್ಲಾ ರೀತಿ ಸಿದ್ಧತೆ ಮಾಡಿ ಕೊಳ್ಳಲಾಗಿದೆ ಎಂದರು.

ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಮಾತನಾಡಿ, ನಿಮ್ಮ ವಿವಿಧ ಬೇಡಿಕೆಗಳು ಕೇವಲ ಮೈಸೂರು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಅದು ರಾಜ್ಯಾದ್ಯಂತ ಇರುವ ಬೇಡಿಕೆಗಳು. ಈ ಹಿನ್ನೆಲೆಯಲ್ಲಿ ಕೆಲವೊಂದು ವಿಚಾರಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಮ್ಮುಖದಲ್ಲಿ ತೀರ್ಮಾನಿಸಬೇಕಿದೆ. ನಿಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಡುತ್ತೇವೆ ಎಂದರು.

ನಂತರ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ನಾನು ಯಾವ ಸಭೆಯಲ್ಲೂ ಭಾಗಿಯಾಗಿರಲಿಲ್ಲ. ಮುಖ್ಯಮಂತ್ರಿಗಳು ಹೇಳಿದ ಮೇಲೆ ಮಾಡೇ ಮಾಡುತ್ತಾರೆ. ಇಲ್ಲವಾದರೆ ಅವರು ಹೇಳಲ್ಲ. ನಾಳೆ ಅವರು ಮೈಸೂರಿಗೆ ಬರಲಿದ್ದಾರೆ. ಅವರಿಗೆ ಈ ವಿಷಯ ತಿಳಿಸಿ, ಅವರೊಂದಿಗೆ ಸಭೆಯನ್ನು ಆಯೋಜಿಸಲು ಪ್ರಯತ್ನ ಮಾಡುತ್ತೇನೆ ಎಂದು ಸಚಿವ ಎಸ್.ಟಿ. ಸೋಮಶೇಖರ್ ಭರವಸೆ ನೀಡಿದರು.

ಉಸ್ತುವಾರಿ ಸಚಿವರ ಭರವಸೆಗೆ ಸಹಮತ ವ್ಯಕ್ತಪಡಿಸಿದ ರೈತ ಮುಖಂಡರು, ಸಭೆಯಲ್ಲಿ ನಮ್ಮ ಬೇಡಿಕೆ ಈಡೇರುವುದಾದರೆ ಮಾತ್ರ ಅವರೊಂದಿಗೆ ಸಭೆ ಆಯೋಜಿಸಿ ಇಲ್ಲವಾದರೆ, ಅವರೊಂದಿಗೆ ಮಾತು–ಕತೆಯೇ ಬೇಡ. ನಾವು ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಕೃಷಿ, ಚೆಸ್ಕಾಂ, ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು ಮತ್ತು ರೈತ ಮುಖಂಡರಾದ ಸುನೀತ ಪುಟ್ಟಣ್ಣಯ್ಯ, ಎ.ಎಲ್. ಕೆಂಪೇಗೌಡ, ಪ್ರಸನ್ನ ಎನ್.ಗೌಡ, ಮಧುಸೂಧನ್, ಮರಕಯ್ಯ ಸೇರಿದಂತೆ ಇನ್ನಿತರರು ಭಾಗಿಯಾಗಿದ್ದರು.

ಮೈಸೂರು ಮಿತ್ರ ಮಂಗಳವಾರ 4 ಅಕ್ಟೋಬರ್ 2022

ದಶಮಂಟಪಗಳ ಶೋಭಾಯಾತ್ರೆ ಆಕರ್ಷಕವಾಗಿರಲು ಸೂಚನೆ



ಮಡಿಕೇರಿ,ಅ.3– ವಿಜಯದಶಮಿಯಂದು ನಡೆಯಲಿರುವ ದಶಮಂಟಪಗಳ ಶೋಭಾಯಾತ್ರೆಯನ್ನು ಜನಾಕರ್ಷಕವಾಗಿ, ಅಚ್ಚುಕಟ್ಟಾಗಿ ನಿರ್ವಹಿಸಲು ಎಲ್ಲಾ ಮಂಟಪಗಳ ಸಮಿತಿಗಳಿಗೆ ಸೂಚಿಸಲಾಗಿದೆ. ಮಂಟಪಗಳ ತೀರ್ಪುಗಾರಿಕೆಯನ್ನು ಬೆಳಗ್ಗೆ 4 ಗಂಟೆಯ ಒಳಗಾಗಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದು ಮಡಿಕೇರಿ ದಸರಾ ದಶಮಂಟಪ ಸಮಿತಿ ಅಧ್ಯಕ್ಷ ಮನು ಮುಂಜುನಾಥ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರ್ಷಂಪ್ರತಿ ತೀರ್ಪುಗಾರಿಕೆಯಲ್ಲಿ ಉಂಟಾಗುತ್ತಿರುವ ವಿಳಂಬ ಮತ್ತು ಗೊಂದಲಗಳ ನಿವಾರಣೆಗೂ ಈ ಬಾರಿ ಚಿಂತನೆ ನಡೆಸಲಾಗಿದ್ದು, ಪ್ರತಿ ಮಂಟಪ ಗಳಿಗೆ ತೀರ್ಪಿನ ಸಮಯ ಮತ್ತು ಸ್ಥಳವನ್ನು ಸೂಚಿಸಲಾಗಿದೆ. ನಿಗದಿತ ಸಮಯಕ್ಕೆ ಆಯಾ ಮಂಟಪಗಳು ಆಯಾ ಸ್ಥಳಗಳಿಗೆ ಬಾರದೆ ಇದ್ದಲ್ಲಿ ಅವುಗಳಿಗೆ ನೀಡುವ ಅಂಕಗಳನ್ನು ಕಡಿತಗೊಳಿಸುವ ಮಹತ್ವದ ನಿರ್ಣಯವನ್ನೂ ಕೈಗೊಂಡಿರುವುದಾಗಿ ಸ್ಪಷ್ಟಪಡಿಸಿದರು.


ವರ್ಷಂಪ್ರತಿ ದಶಮಂಟಪಗಳ ಮೆರವಣಿಗೆ ಕೇವಲ ತೀರ್ಪಿಗೆ ಮಾತ್ರ ಸೀಮಿತವಾಗುತ್ತಿರುವ ಬಗ್ಗೆ ಸಾರ್ವಜನಿಕ ವಲಯದ ಅಸಮಾಧಾನದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ, ಈ ಬಾರಿ ಪ್ರತಿ ಮಂಟಪಗಳು ತಮ್ಮ ಶೋಭಾಯಾತ್ರೆಯ ಸಂದರ್ಭ ಕನಿಷ್ಠ 3ರಿಂದ 4 ಪ್ರದರ್ಶನಗಳನ್ನು ನೀಡಲಿವೆ ಎಂದು ಮಾಹಿತಿ ನೀಡಿದರು.

ಸಮಿತಿಯ ಕಾರ್ಯಾಧ್ಯಕ್ಷ ಎ.ಆರ್. ಮಂಜುನಾಥ್ ಮಾತನಾಡಿ, ಈ ಬಾರಿ ದಶ ಮಂಟಪಗಳು ತೀರ್ಪಿನ ಸಂದರ್ಭ ಇರಬೇಕಾದ ಸ್ಥಳಗಳನ್ನು ಈಗಾಗಲೇ ಗುರುತಿಸಲಾಗಿದೆ. ಪ್ರತಿ ಮಂಟಪಕ್ಕೆ ಸಂಬಂಧಿಸಿದಂತೆ ಕಥಾ ಸಾರಾಂಶ ಮತ್ತು ಕಲಾಕೃತಿ, ಪ್ರಭಾವಳಿ ಮತ್ತು ಸ್ಟುಡಿಯೋ, ಧ್ವನಿಮುದ್ರಣ–ಶುಚಿತ್ವ ಮತ್ತು ಸಮಯ ಪಾಲನೆ, ಚಾಲನೆ ಮತ್ತು ಟ್ರ್ಯಾಕ್ಟರ್ ಸೆಟ್ಟಿಂಗ್ ಸೇರಿದಂತೆ ನಾಲ್ಕು ವಿಭಾಗಗಳಲ್ಲಿ ನಾಲ್ಕು ಮಂದಿ ಪರಿಣಿತರು ಒಟ್ಟು ನೂರು ಅಂಕಗಳಿಗೆ ತಮ್ಮ ತೀರ್ಪನ್ನು ಆಯಾ ಮಂಟಪಗಳಿಗೆ ನೀಡುತ್ತಾರೆ. ತೀರ್ಪಿನ ಬಳಿಕ ಪಾರದರ್ಶಕತೆ ಕಾಪಾಡಲು ಮಂಟಪ ಸಮಿತಿಯ ಅಧ್ಯಕ್ಷರ ಸಹಿಯೊಂದಿಗೆ ಡಬ್ಬಕ್ಕೆ ಹಾಕುವ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ದಶಮಂಟಪ ಸಮಿತಿ ಉಪಾಧ್ಯಕ್ಷ ಸಿ.ಪಿ. ಹೇಮ ಕುಮಾರ್, ಪ್ರಧಾನ ಸಲಹೆಗಾರ ಕೆ.ಕೆ.ದಾಮೋದರ್, ಕುಂದುರುಮೊಟ್ಟೆ ದಸರಾ ಮಂಟಪ ಸಮಿತಿ ಅಧ್ಯಕ್ಷ ನಂದಾ ಉತ್ತಪ್ಪ ಉಪಸ್ಥಿತರಿದ್ದರು.

ದಶಮಂಟಪಗಳ ಪ್ರದರ್ಶನ

ಶ್ರೀ ಪೇಟೆರಾಮ ಮಂದಿರದ ಮಂಟಪದ ತೀರ್ಪು ರಾತ್ರಿ 10 ಗಂಟೆಗೆ ಗಾಂಧಿ ಮೈದಾನದ ಕಾಫಿ ಕೃಪ ಕಟ್ಟಡದ ಬಳಿ, ದೇಚೂರು ಶ್ರೀ ರಾಮ ಮಂದಿರ ಮಂಟಪದ ತೀರ್ಪು ಆಂಜನೇಯ ದೇವಾಲಯದ ಮುಂಭಾಗ ರಾತ್ರಿ 11 ಗಂಟೆಗೆ, ಶ್ರೀ ದಂಡಿನ ಮಾರಿಯಮ್ಮ ಮಂಟಪದ ತೀರ್ಪು ರಾತ್ರಿ 3 ಗಂಟೆಗೆ ನಗರ ಪೊಲೀಸ್ ಠಾಣೆ ಮುಂಭಾಗ, ಶ್ರೀ ಚೌಡೇಶ್ವರಿ ದೇಗುಲದ ಮಂಟಪಕ್ಕೆ ಹೋಟೆಲ್ ಪಾಪ್ಯುಲರ್ ಮುಂಭಾಗ ರಾತ್ರಿ 11.45 ಗಂಟೆಗೆ, ಶ್ರೀ ಕಂಚಿ ಕಾಮಾಕ್ಷಿ ಮಂಟಪಕ್ಕೆ ವಿನೋದ್ ಮೆಡಿಕಲ್ಸ್ ಮುಂಭಾಗ ರಾತ್ರಿ 3.30 ಗಂಟೆಗೆ, ಶ್ರೀ ಚೌಟಿ ಮಾರಿಯಮ್ಮ ಮಂಟಪಕ್ಕೆ ಬೆಳಗ್ಗೆ 4 ಗಂಟೆಗೆ ಕಾವೇರಿ ಕಲಾ ಕ್ಷೇತ್ರ ಮುಂಭಾಗ, ಶ್ರೀ ಕೋಟೆ ಮಾರಿಯಮ್ಮ ಮಂಟಪಕ್ಕೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ರಾತ್ರಿ 1.45 ಗಂಟೆಗೆ, ಶ್ರೀ ಕೋದಂಡ ರಾಮ ಮಂಟಪಕ್ಕೆ ಬಾಟಾ ಶೋ ರೂಂ ಮುಂಭಾಗ ರಾತ್ರಿ 1.15 ಗಂಟೆಗೆ, ಶ್ರೀ ಕೋಟೆ ಗಣಪತಿ ಮಂಟಪಕ್ಕೆ ನಗರ ಪೊಲೀಸ್ ಠಾಣೆ ಮುಂಭಾಗ ರಾತ್ರಿ 12.30 ಗಂಟೆಗೆ, ಶ್ರೀ ಕರವಲೆ ಭಗವತಿ ಮಂಟಪಕ್ಕೆ ರಾತ್ರಿ 2.30 ಗಂಟೆಗೆ ಸಿಂಧೂರ್ ಬಟ್ಟೆ ಮಳಿಗೆ ಮುಂಭಾಗ ಸ್ಥಳವನ್ನು ನಿಗದಿಪಡಿಸಲಾಗಿದೆ.

ನಾಳೆ ಗೋಣಿಕೊಪ್ಪ ದಸರಾಗೆ ಆಕರ್ಷಕ ತೆರೆ



ಭಾನುವಾರ ನಡೆದ ಯುವ ದಸರಾ ಕಾರ್ಯಕ್ರಮದಲ್ಲಿ ವಿರಾಜಪೇಟೆ ನಾಟ್ಯ ಮಯೂರಿ ನೃತ್ಯ ಶಾಲೆಯ ಶ್ರೀದೇವಿ ಭರತ ನಾಟ್ಯ.

ಗೋಣಿಕೊಪ್ಪ, ಅ.3– 44ನೇ ವರ್ಷದ ಗೋಣಿಕೊಪ್ಪ ದಸರಾಕ್ಕೆ ಅ.5 ರಂದು ತೆರೆ ಎಳೆಯಲಾಗುತ್ತದೆ. ಸೀಗೆತೋಡಿನಲ್ಲಿ ಚಾಮುಂಡೇಶ್ವರಿ ದೇವಿ ವಿಸರ್ಜನೆ ಮೂಲಕ ಧಾರ್ಮಿಕ ವಿಧಿ–ವಿಧಾನ ಸಂಪನ್ನಗೊಳ್ಳಲಿದೆ. ಹಗಲು ಸ್ತಬ್ಧಚಿತ್ರ ಮೆರವಣಿಗೆ, ರಾತ್ರಿ ಮಂಟಪಗಳ ಶೋಭಾಯಾತ್ರೆ ಕಣ್ಮನ ಸೆಳೆಯಲಿದೆ. 2 ವರ್ಷಗಳ ನಂತರ ದಸರಾ ಸಂಭ್ರಮಕ್ಕೆ ಅವಕಾಶ ದೊರೆತಿರುವುದರಿಂದ ಕಲಾಭಿ ಮಾನಿಗಳು ಹೆಚ್ಚಾಗಿ ಪಾಲ್ಗೊಳ್ಳುವ ಸಾಧ್ಯತೆ ದಟ್ಟವಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಭವನದಲ್ಲಿ ಸಂಜೆ 6.30 ಗಂಟೆಗೆ ದೇವಿಗೆ ಮಹಾಪೂಜೆ ನೆರವೇರಲಿದೆ. ನಂತರ ಶೋಭಾಯಾತ್ರೆಗೆ ಚಾಲನೆ ದೊರೆಯಲಿದೆ. ರಾತ್ರಿ 8 ಗಂಟೆ ಸುಮಾರಿಗೆ ದಶಮಂಟಪಗಳು ಉಮಾ ಮಹೇಶ್ವರಿ ದೇವಸ್ಥಾನದಿಂದ ಮುಖ್ಯಬೀದಿಯಲ್ಲಿ ಸಾಗಲಿದೆ. ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಪಟ್ಟಣದಲ್ಲಿ ಚಾಮುಂಡೇಶ್ವರಿ ದೇವಿಯ ರಾಕ್ಷಸ ಸಂಹಾರವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಶೋಭಾಯಾತ್ರೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ಉದ್ಘಾಟಿಸಲಿದ್ದಾರೆ. ಉಸ್ತುವಾರಿ ಸಚಿವ ಬಿ.ಸಿ. ನಾಗೇಶ್, ಶಾಸಕ ಕೆ.ಜಿ. ಬೋಪಯ್ಯ, ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಶಿ, ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿ ಮಂಡೇಪಂಡ ಸುಜಾ ಕುಶಾಲಪ್ಪ, ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಪಾಲ್ಗೊಳ್ಳಲಿದ್ದಾರೆ.

ಸ್ತಬ್ಧಚಿತ್ರ; ಹಗಲು 10.30 ಗಂಟೆಗೆ ನಾಡಹಬ್ಬ ದಸರಾ ಸಮಿತಿ ವತಿಯಿಂದ ಹರಿಶ್ಚಂದ್ರಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಿಂದ ಸ್ತಬ್ಧಚಿತ್ರ ಮೆರವಣಿಗೆ ಆರಂಭಗೊಳ್ಳಲಿದೆ. 25ಕ್ಕೂ ಹೆಚ್ಚು ಸ್ತಬ್ಧಚಿತ್ರ ಅನಾವರಣಗೊಳ್ಳುವ ನಿರೀಕ್ಷೆ ಇದೆ. ಸಾಮಾಜಿಕ, ಪೌರಾಣಿಕ ಹಿನ್ನೆಲೆ ಚಿತ್ರಗಳೊಂದಿಗೆ ವಿವಿಧ ಇಲಾಖೆಗಳು ಕೂಡ ಸ್ತಬ್ಧಚಿತ್ರದಲ್ಲಿ ಪಾಲ್ಗೊಳ್ಳುತ್ತಿವೆ. ಶಾಸಕ ಬೋಪಯ್ಯ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಯಾಗಿ ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಪಾಲ್ಗೊಳ್ಳಲಿದ್ದಾರೆ.

ರಾತ್ರಿ 8 ಗಂಟೆಗೆ ಕಾವೇರಿ ಕಲಾ ವೇದಿಕೆಯಲ್ಲಿ ಸರಗಮಪ ಕನ್ನಡ ಕೋಗಿಲೆ ಖ್ಯಾತಿಯ ರಿಷಿ ಪುರುಷೋತ್ತಮ್ ತಂಡದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಯುವ ದಸರಾ; ಕಾವೇರಿ ಕಲಾ ವೇದಿಕೆಯಲ್ಲಿ ಭಾನುವಾರ ನಡೆದ ಯುವ ದಸರಾದಲ್ಲಿ ಯುವಕ, ಯುವತಿಯರ ನೃತ್ಯದಿಂದ ಕಳೆಗಟ್ಟಿತು. ಪೌರಾಣಿಕ ಹಿನ್ನೆಲೆ, ನವದುರ್ಗಿಯರ ಅವತಾರ, ಸ್ಯಾಂಡಲ್‌ವುಡ್, ಹಾಲಿವುಡ್ ಗೀತೆಗಳಿಗೆ ಹೆಜ್ಜೆ, ಡಿಜೆ ನೈಟ್ಸ್, ಫ್ಯಾಷನ್ ಶೋ ಮೂಡಿ ಬಂತು.

ನಾಟ್ಯಾಂಜಲಿ ವಿರಾಜಪೇಟೆ, ರಿಫ್ಲೆಕ್ಷನ್ ಡ್ಯಾನ್ಸ್ ಟೀಮ್, ಟೀಮ್ ಗಾಡ್, ರಾಕಿಂಗ್ ಸ್ಟಾರ್, ರಾಕೇಶ್ ಟೀಮ್, ನೋಟಿ ಕಿಡ್ಸ್, ಕಿಂಗ್ ಆಫ್ ಕೂರ್ಗ್, ಚಾಮುಂಡೇಶ್ವರಿ ನಾಟಕ ಕಲಾಸಂಘ, ಶ್ಯಾಮಿಲಿ ಟೀಮ್, ಸರ್ವದೈವತಾ ಕಂಸಾಳೆ, ಶಿವಾನಿ ಟೀಮ್, ಲಯನ್ಸ್ ಪಿ.ಯು. ಕಾಲೇಜು, ಟೀಮ್ ಪಿಂಟೋಪಿಕ್, ಸ್ಟಾರ್ ಆನ್ ಗೇರ್ಲ್ಸ್, ಎಸ್.ಸಿ.ಎಂ.ಎಸ್ ಬಾಯ್ಸ್, ಜನನಿ ಟೀಮ್, ಪವನ್ ಟೀಮ್, ಮಡಿಕೇರಿ ನೃತ್ಯ ಕಲಾ ಸ್ಟುಡಿಯೋ, ದೇಶಿಕ ರಕ್ಷಿತಾ ತಂಡಗಳು ಸೇರಿದಂತೆ 19 ತಂಡಗಳು ನೃತ್ಯ ಪ್ರದರ್ಶನ ನೀಡಿತು.

ಚಂದ್ರಶೇಖರ್ ಮತ್ತು ಕಲಾತಂಡದ ಸಂಗೀತ ಕಾರ್ಯಕ್ರಮ ಕೇಳುಗರಿಗೆ ಇಂಪು ನೀಡಿತು. ವಿರಾಜಪೇಟೆ ನಾಟ್ಯಮಯೂರಿ ನೃತ್ಯ ಶಾಲೆಯ ವಿದ್ಯಾರ್ಥಿನಿ ಶ್ರೀದೇವಿಯ ಭರತನಾಟ್ಯ ಗಮನಾರ್ಹವಾಗಿತ್ತು. ಶಾಲೆಯ ಲಕ್ಷ, ಸಾನ್ವಿ, ಅಕಾಂಕ್ಷ, ಹಂಸಿನಿ, ವರ್ಷಿತ, ಶ್ರೇಯಾ ಸೋಮಣ್ಣ, ಆದಿತ್ಯ, ಸಿಂಚನ, ವಿಸ್ಮಿತ, ಪೂಣಚ್ಚ ಅವರುಗಳು ಸಾಂಪ್ರದಾಯಿಕ ನೃತ್ಯಗಳನ್ನು ಮಾಡಿದರು. ವಿರಾಜಪೇಟೆ ಇಂಟೋಫೀಸ್ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮವು ಗಮನ ಸೆಳೆಯಿತು.

ಸಭಾ ಕಾರ್ಯಕ್ರಮ; ಸಮಿತಿಯ ಅಧ್ಯಕ್ಷ ಬಿ.ಎನ್ ಪ್ರಕಾಶ್, ಕಾರ್ಯಾಧ್ಯಕ್ಷ ಸಿ.ಕೆ ಬೋಪಣ್ಣ, ರಾಜ್ಯ ಮುಖ್ಯ ವಿದ್ಯುತ್ ಪರಿವೀಕ್ಷಕ ಇಂಧನ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ತೀತಿರ ಅಪ್ಪಚ್ಚು, ಪ್ರಮುಖರಾದ ಸಿದ್ದಲಿಂಗಪ್ಪ, ಡಾ.ಅಮೃತ್ ನಾಣಯ್ಯ, ಸೋಮೆಯಂಡ ಕವನ್ ಕಾರ್ಯಪ್ಪ, ಸಣ್ಣುವಂಡ ಕಿಶೋರ್ ನಾಚಪ್ಪ, ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್‌ದಾಸ್ ಅರಸ್, ಕೆ. ರಾಜೇಶ್, ಪಿ.ಎಂ. ಹಕೀಮ್, ಅಫ್ಜಲ್, ರತಿ ಅಚ್ಚಪ್ಪ, ಬಾನಂಡ ಪ್ರಥ್ಯು, ಪರಶುರಾಮ್ ಇದ್ದರು.

ಅ.4 ಕಾರ್ಯಕ್ರಮ: ಬೆ.7 ಗಂಟೆಗೆ ದೇವಿಯ ವಿಶೇಷಪೂಜೆ. ಬೆ.9:30ಕ್ಕೆ ವಾಹನ ಚಾಲಕರ ಸಂಘ, ಆಟೋ ಮಾಲೀಕರ ಹಾಗೂ ಚಾಲಕರ ಸಂಘದ ವತಿಯಿಂದ ಆಯುಧಾಪೂಜಾ ಕಾರ್ಯಕ್ರಮ, ಗ್ರೀಸ್ ಹಚ್ಚಿದ ಕಂಬ ಹತ್ತುವ ಸ್ಪರ್ಧೆ, ಅಮ್ಮಳಮ್ಮ ಬುಡಕಟ್ಟು ನೃತ್ಯ ತಂಡದ ಬುಡಕಟ್ಟು ಸಮುದಾಯದ ಸಂಸ್ಕೃತಿ ಅನಾವರಣ. ಸಂಜೆ 7ಕ್ಕೆ ಕಾವೇರಿ ಕಲಾವೇದಿಕೆಯಲ್ಲಿ ಬೆಂಗಳೂರಿನ ಮಧುರ ಮ್ಯೂಸಿಕ್ ಇವೆಂಟ್ಸ್ ವತಿಯಿಂದ ಸಂಗೀತ ರಸಮಂಜರಿ.

ಮಡಿಕೇರಿ ಗಾಂಧಿ ಮೈದಾನದಲ್ಲಿ ಚಿಣ್ಣರ ಕಲರವ

ಮಡಿಕೇರಿ,ಅ.3– ಶಾಲಾ ಪಾಠ ಪ್ರವಚನಗಳ ಚಟುವಟಿಕೆಗಳಿಂದ ಮುಕ್ತರಾಗಿ, ವೈವಿಧ್ಯಮಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮಕ್ಕಳ ಕಲರವ ಮಡಿಕೇರಿ ಗಾಂಧಿ ಮೈದಾನದ ಭವ್ಯ ವೇದಿಕೆಯಲ್ಲಿ ಆಯೋಜಿತ 'ಮಕ್ಕಳ ದಸರಾ' ಉತ್ಸವಕ್ಕೆ ಮೆರುಗು ತುಂಬಿತು.



ಮಕ್ಕಳಿಂದ 'ಪಾಪ್‌ಕಾರ್ನ್' ಖರೀದಿಸಿ ಹಣ ನೀಡುತ್ತಿರುವ ಜಿಲ್ಲಾಧಿಕಾರಿಗಳು,



ಮಕ್ಕಳ ದಸರಾ.

ಮಡಿಕೇರಿ ದಸರಾ ಸಮಿತಿ ಹಾಗೂ ಮಡಿಕೇರಿ ರೋಟರಿ ಮಿಸ್ಟಿಹಿಲ್ಸ್ ವತಿಯಿಂದ ಆಯೋಜಿತ ಮಕ್ಕಳ ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ವಿವಿಧ ಶಾಲೆಗಳಿಂದ ನೂರಾರು ಪುಟಾಣಿಗಳು ಆಗಮಿಸಿದ್ದರು.

ಮಕ್ಕಳ ದಸರಾ ಉತ್ಸವದಲ್ಲಿ ಆಯೋಜಿತವಾಗಿದ್ದ 'ಮಕ್ಕಳ ಸಂತೆ', ವಾರದ ಸಂತೆಗಳನ್ನು ಮೀರಿಸುವಂತಿತ್ತು. ವಿವಿಧ ಶಾಲಾ ಮಕ್ಕಳು ನೈಜ ವರ್ತಕರಂತೆ ವಿವಿಧ ಬಗೆಯ ತರಕಾರಿ, ಹಣ್ಣು ಹಂಪಲು, ಗ್ರಾಮೀಣ ಭಾಗಗಳಲ್ಲಿ ದೊರಕುವ ಬಾಳೆ ಕೂಂಬೆ, ಚಕ್ಕೋತ, ಕಬ್ಬು, ಚರ್ಮೆ ಸೊಪ್ಪು, ಸೇರಿದಂತೆ ವಿವಿಧ ತರಕಾರಿಗಳನ್ನಿಟ್ಟು ವ್ಯಾಪಾರ ಮಾಡುತ್ತಿದ್ದುದು ನೋಡುಗರನ್ನು ಆಶ್ಚರ್ಯ ಚಕಿತಗೊಳಿಸಿತು.


ಗಣ್ಯರೇ ಗ್ರಾಹಕರಾದರು: ಮಡಿಕೇರಿ ತಾಲೂಕು ಶಾಸಕ ಅಪ್ಪಚ್ಚು ರಂಜನ್, ಜಿಲ್ಲಾಧಿಕಾರಿ, ಡಾ.ಬಿ.ಸಿ.ಸತೀಶ, ಮಡಿಕೇರಿ ದಸರಾ ಸಮಿತಿ ಅಧ್ಯಕ್ಷೆ ಅನಿತಾ ಪೂವಯ್ಯ, ಕಾರ್ಯಾಧ್ಯಕ್ಷ ಕೆ.ಎಸ್. ರಮೇಶ್, ಮಡಿಕೇರಿ ರೋಟರಿ ಮಿಸ್ಟಿಹಿಲ್ಸ್ ಅಧ್ಯಕ್ಷ ಪ್ರಸಾದ್ ಗೌಡ, ದಸರಾ ಸಾಂಸ್ಕೃತಿಕ ಸಮಿತಿ ಮಾಜಿ ಅಧ್ಯಕ್ಷ ಅನಿಲ್ ಎಚ್.ಟಿ. ಸೇರಿದಂತೆ ಹಲ ಗಣ್ಯರು ಮಕ್ಕಳ ಸಂತೆಯನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸುವುದರೊಂದಿಗೆ ಮಕ್ಕಳಲ್ಲಿ ಪ್ರೋತ್ಸಾಹ ತುಂಬಿದರು. ಮಾತ್ರವಲ್ಲದೇ ಮಕ್ಕಳ ಸಂತೆಯಲ್ಲಿ ವಿವಿಧ ಬಗೆಯ ತರಕಾರಿ, ಸೊಪ್ಪುಗಳು, ಹಣ್ಣು ಹಂಪಲುಗಳನ್ನು ಖರೀದಿಸುವ ಮೂಲಕ ಗಣ್ಯರೇ ಗ್ರಾಹಕರಾದರು. ಶಾಸಕರು, ಜಿಲ್ಲಾಧಿಕಾರಿಗಳು ತಮ್ಮ ಮಳಿಗೆಯಿಂದ ಖರೀದಿ ಮಾಡಿರುವುದನ್ನು ಕಂಡು ಮಕ್ಕಳು ಪುಳಕಿತರಾದರು.

ವೈವಿಧ್ಯಮಯ ತರಕಾರಿಗಳಿಂದ ಆಕರ್ಷಿತರಾದ ಸಾರ್ವಜನಿಕರು ಯಾವುದೇ ಚೌಕಾಸಿ ಮಾಡದೇ ಮಕ್ಕಳು ನಿಗದಿಪಡಿಸಿದ ದರದಲ್ಲೇ ಭಾರೀ ಉತ್ಸಾಹದಿಂದ ಖರೀದಿ ಮಾಡುವ ಮೂಲಕ ತಮ್ಮ ಚೀಲ ತುಂಬಿಕೊಳ್ಳುತ್ತಿದ್ದುದು ಕಂಡು ಬಂತು.

ಆಕರ್ಷಕ ಮಂಟಪ: ಮಡಿಕೇರಿ ದಸರಾ ಶೋಭಾಯಾತ್ರೆಯ ಪ್ರಭಾವಕ್ಕೆ ಒಳಗಾದ ಮಕ್ಕಳು 'ಮಕ್ಕಳ ಮಂಟಪ' ಸ್ಪರ್ಧೆಯಲ್ಲಿಯೂ ತಾವೂ ಯಾವ ದಶ ಮಂಟಪ ಸಮಿತಿಯವರಿಗೂ ಕಮ್ಮಿ ಇಲ್ಲ ಎಂಬಂತೆ ಮಂಟಪಗಳನ್ನು ಸಿದ್ಧಪಡಿಸಿದ್ದರು. ವಿವಿಧ ದೇವಾನು ದೇವತೆಗಳ ಸ್ತಬ್ಧ ಚಿತ್ರ, ವಿದ್ಯುತ್ ಅಲಂಕಾರಗಳೊಂದಿಗೆ ತಮ್ಮ ಸೈಕಲ್‌ಗಳಲ್ಲಿ ಹಾಗೂ ಸೂಚಿತ ಸ್ಥಳದಲ್ಲಿ ಪ್ರದರ್ಶಿಸುವ ಮೂಲಕ ತಮ್ಮ ಕ್ರಿಯಾಶೀಲತೆಯಿಂದ ನೋಡುಗರನ್ನು ಚಕಿತಗೊಳಿಸಿದರು. ಅಷ್ಟೇ ಏಕೆ ಕೆಲವು ಮಂಟಪಗಳಲ್ಲಿ ಕೂಲ್ ಫಯರ್, ಡಿ.ಜೆ ಮ್ಯೂಸಿಕ್, ಹಿನ್ನೆಲೆ ಧ್ವನಿಯೊಂದಿಗೆ ಕಲಾಕೃತಿಗಳ ಚಲನವಲನಗಳನ್ನು ಅಳವಡಿಸಿಕೊಂಡು ಭವಿಷ್ಯದಲ್ಲಿ ದಶಮಂಟಪಗಳ ಸಮಿತಿಯ ಪದಾಧಿಕಾರಿಗಳು ನಾವೇ ಎಂದು ಪ್ರತಿಪಾದಿಸಿಕೊಂಡಂತೆ ಕಂಡು ಬಂತು.

ಛದ್ಮವೇಷ ಸ್ಪರ್ಧೆ: ಗಾಂಧಿ ಮೈದಾನದ ಕಲಾ ವೈಭವದ ವೇದಿಕೆಯಲ್ಲಿ ದೇವಾನು ದೇವತೆಗಳು ವೀರ ವನಿತೆ ಓಬವ್ವ ಶುಭಾಷ್ ಚಂದ್ರಬೋಸ್, ಮಹಾತ್ಮ ಗಾಂಧಿ, ಶ್ರೀಕೃಷ್ಣ, ಅಜ್ಜಿ, ರಾಜರು, ಸ್ವಾತಂತ್ರ್ಯ ಹೋರಾಟಗಾರರು ಹೀಗೆ ವಿವಿಧ ಛದ್ಮವೇಷ ತೊಟ್ಟ ಪುಟಾಣಿಗಳು ತಮ್ಮ ಪ್ರತಿಭೆ ಪ್ರದರ್ಶಿಸಿದರು. ಪ್ರದರ್ಶನದ ಸಂದರ್ಭ ಹೇಳಬೇಕಾದ ಒಂದೆರಡು ಮಾತುಗಳನ್ನು ತೊದಲು ನುಡಿಗಳಲ್ಲಿ ಹೇಳುತ್ತಿದ್ದ ರೀತಿ ಎಲ್ಲವೂ ನೋಡುಗರ ಮನ ಸೂರೆಗೊಂಡಿತು. ಈ ಸ್ಪರ್ಧೆಗೆ 140 ಪುಟಾಣಿಗಳ ಹೆಸರು ನೋಂದಾಯಿಸಿಕೊಂಡಿದ್ದು ವಿಶೇಶವಾಗಿತ್ತು. ಪ್ರತಿಯೊಬ್ಬ ಪುಟಾಣಿಗೂ ವೇದಿಕೆಯನ್ನು ಕಲ್ಪಿಸಿದ ಆಯೋಜಕರು ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು.

ಗಮನ ಸೆಳೆದ ಮಕ್ಕಳ ಸಂತೆ, ಮಕ್ಕಳ ಮಂಟಪ



ಮಕ್ಕಳ ಮಂಟಪ.

ಅ.7, ಕೊಡವ ಪಡಿಪು ಪಾಠ ಪುಸ್ತಕ ಬಿಡುಗಡೆ

ಮಡಿಕೇರಿ, ಅ.3– ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಅ.7 ರಂದು ಪೊನ್ನಂಪೇಟೆ ಕೊಡವ ಸಮಾಜ ಇವರ ಸಹಯೋಗದೊಂದಿಗೆ ಪೊನ್ನಂಪೇಟೆ ಕೊಡವ ಸಮಾಜದಲ್ಲಿ 'ಕೊಡವ ಪಡಿಪು ಪಾಠ ಪುಸ್ತಕ' ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಮೈಸೂರಿನ ಜಂಬೂ ಸವಾರಿಯಲ್ಲಿ ಪುನೀತ್ ರಾಜ್‌ಕುಮಾರ್ ಸ್ಮರಣೆ



ಚಾಮರಾಜನಗರ,ಅ.3–ಮೈಸೂರಿನಲ್ಲಿ ಬುಧವಾರ ನಡೆಯಲಿರುವ ದಸರಾ ಜಂಬೂ ಸವಾರಿ ವೇಳೆ ಸಾಗಲಿರುವ ಸ್ತಬ್ಧಚಿತ್ರಗಳ ಮೆರವಣಿಗೆಯಲ್ಲಿ ಚಾಮರಾಜನಗರ ಜಿಲ್ಲೆಯ ರಾಯಭಾರಿ ಆಗಿದ್ದ ಪುನೀತ್ ರಾಜ್‌ಕುಮಾರ್ ಅವರನ್ನು ಸ್ಮರಿಸಲಾಗುತ್ತಿದೆ.

ಜಂಬೂ ಸವಾರಿ ವೇಳೆ 47 ಸ್ತಬ್ಧಚಿತ್ರಗಳು ಸಾಗಲಿದ್ದು, ಇದರಲ್ಲಿ ಚಾಮರಾಜನಗರ ಜಿಲ್ಲಾ ಪಂಚಾಯತ್ ವತಿಯಿಂದ ತಯಾರಿಸಿರುವ ಸ್ತಬ್ಧಚಿತ್ರ ಸೇರಿದೆ. ಇದರಲ್ಲಿ ಜಿಲ್ಲೆಯನ್ನು ಹುಲಿಗಳನಾಡು ಎಂದು ಬಿಂಬಿಸಲಾಗಿದೆ. ಜಿಲ್ಲೆಯ ರಾಯಭಾರಿ ಆಗಿದ್ದ ನಟ ಪುನೀತ್ ರಾಜ್‌ಕುಮಾರ್ ಅವರ ಚಿತ್ರ ಮಾದರಿಯೂ ಸಹ ಇರಲಿದೆ. ಈ ಮೂಲಕ ಪುನೀತ್ ಅವರಿಗೆ ಜಿಲ್ಲೆಯಿಂದ ನಮನ ಸಲ್ಲಿಸಲಾಗುತ್ತಿದೆ.



ಚಾ.ನಗರದ ಜಿಲ್ಲೆ ಭೌಗೋಳಿಕವಾಗಿ ಶೇ.4.8ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಬಂಡೀಪುರ ಹುಲಿ ಸಂರಕ್ಷಿತಾ ಅರಣ್ಯಧಾಮ, ಬಿಆರ್‌ಟಿ ಹುಲಿ ಸಂರಕ್ಷಿತಾ ಅರಣ್ಯಧಾಮ ಹಾಗೂ ಕಾವೇರಿ ಅರಣ್ಯಧಾಮಗಳೆಂಬ ಮೂರು ಅರಣ್ಯಧಾಮಗಳನ್ನು ಹೊಂದಿದೆ. ಇವುಗಳಲ್ಲಿ ಬಂಡೀಪುರ ಮತ್ತು ಬಿಆರ್‌ಟಿ ಅರಣ್ಯಗಳು ಹುಲಿ ಸಂರಕ್ಷಿತಾ ಅರಣ್ಯಗಳಾಗಿವೆ. 2018ರ ಗಣತಿಯ ಪ್ರಕಾರ ದೇಶದಲ್ಲಿ ಅತೀ ಹೆಚ್ಚು ಹುಲಿಗಳಿರುವ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಇವೆ ಎನ್ನಲಾದ 524 ಹುಲಿಗಳಲ್ಲಿ ಅತಿ ಹೆಚ್ಚು ಹುಲಿಗಳು ಚಾ.ನಗರ ಜಿಲ್ಲೆಯ ಅರಣ್ಯ ವ್ಯಾಪ್ತಿಯಲ್ಲಿವೆ ಎಂಬುದು ವಿಶೇಷ.

ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಸುಮಾರು 2 ಸಾವಿರ ಆನೆಗಳು ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಇವೆ. ಅಲ್ಲದೆ ಅರಣ್ಯ ಪ್ರದೇಶದಲ್ಲಿ ಮಹದೇಶ್ವರಬೆಟ್ಟದ ದೇವಸ್ಥಾನ, ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನ, ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ ಸೇರಿದಂತೆ ಅನೇಕ ಪುಣ್ಯ ಕ್ಷೇತ್ರಗಳಿವೆ.

ಪ್ರಕೃತಿ ಮಡಿಲಿನ ಹುಲಿ ಮತ್ತು ಆನೆಗಳ ಅರಣ್ಯ ಧಾಮ ಎಂಬ ಶೀರ್ಷಿಕೆಯ ಸ್ತಬ್ಧ ಚಿತ್ರದಲ್ಲೇ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ 'ಚಲುವ ಚಾಮರಾಜನಗರ' ರಾಯಭಾರಿಯಾಗಿದ್ದ ದಿ. ಡಾ.ಪುನೀತ್ ರಾಜ್‌ಕುಮಾರ್ ಅವರ ಮಾದರಿಯನ್ನು ಜಂಬೂಸವಾರಿ ಮೆರವಣಿಗೆಯಲ್ಲಿ ಸ್ತಬ್ಧಚಿತ್ರ ಮಾಡಿ ಜಿಲ್ಲೆಯನ್ನು ಪ್ರತಿಬಿಂಬಿಸುವ ಪ್ರಯತ್ನ ಮಾಡಲಾಗಿದೆ.

> ಮೈಸೂರಿನಲ್ಲಿ ಬುಧವಾರ ನಡೆಯುವ ಜಂಬೂ ಸವಾರಿ ಯಲ್ಲಿ ಜಿಲ್ಲೆಯ ಜಿಪಂ ವತಿಯಿಂದ ನಿರ್ಮಿಸಿರುವ ಸ್ತಬ್ಧಚಿತ್ರವು 7ನೇಯದಾಗಿ ಸಾಗಲಿದೆ. ಜಿಲ್ಲೆಯ ಪ್ರಸೋದ್ಯಮದ ಮತ್ತಷ್ಟು ಅಭಿವೃದ್ದಿಗಾಗಿ 'ಚಲುವ ಚಾಮರಾಜನಗರ' ರಾಯಭಾರಿ ಆಗಿದ್ದ ಡಾ. ಪುನೀತ್ ರಾಜಕುಮಾರ್ ಅವರನ್ನು ಸ್ಮರಿಸುವ ಕೆಲಸ ಮಾಡಲಾಗಿದೆ.
>
> **–ರಾಜೇಂದ್ರಪ್ರಸಾದ್,**
> **ಚಾಮರಾಜನಗರ ಗ್ರಾಮೀಣ ಕೈಗಾರಿಕಾ ಇಲಾಖೆ.**

ಪೊಲೀಸ್–ಕೃಷಿ ಅಧಿಕಾರಿಗಳ ಜಂಟಿ ಕಾರ್ಯಾಚರಣೆ

ಅಕ್ರಮ ಸಂಗ್ರಹ: 510 ಚೀಲ ರಸಗೊಬ್ಬರ ವಶ

ಗುಂಡ್ಲುಪೇಟೆ, ಅ.3–ತಾಲೂಕಿನ ಶಿವಪುರ ಬಳಿಯ ಜಮೀನಿನೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಭಾರೀ ಪ್ರಮಾಣದ ರಸಗೊಬ್ಬರವನ್ನು ಪೊಲೀಸ್ ಹಾಗೂ ಕೃಷಿ ಅಧಿಕಾರಿಗಳು ಜಂಟಿ ಕಾರ್ಯಾ ಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ.

ತಾಲೂಕಿನ ಶಿವಪುರದಿಂದ ಗ್ರಾಮದಿಂದ ಕಲಿಗೌಡನಹಳ್ಳಿ ರಸ್ತೆಯಲ್ಲಿರು ಮಂಗಲದ ಗ್ರಾಮದ ನಿವಾಸಿ ಗೌರಮ್ಮ ಅವರಿಗೆ ಜಮೀನಿನಲ್ಲಿ 510 ಚೀಲ ರಸಗೊಬ್ಬರ ಪತ್ತೆಯಾಗಿದೆ. ವಿವಿಧ ಕಂಪನಿಯ ರಸಗೊಬ್ಬರವನ್ನು ತಂದು ಕೇರಳಕ್ಕೆ ಮಾರಾಟ ಮಾಡಲು ಪ್ಯಾರಾಥಿನ್ ಬ್ರಾಂಡ್‌ನಲ್ಲಿ ಬೇರೆ ಚೀಲಗಳಿಗೆ ಗೊಬ್ಬರ ಹಾಕಿ ಲಾರಿಗೆ ತುಂಬಿಸುತ್ತಿದ್ದರು.



ಜಮೀನಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ರಸಗೊಬ್ಬರವನ್ನು ಪೊಲೀಸ್ ಹಾಗೂ ಕೃಷಿ ಅಧಿಕಾರಿಗಳು ವಶಕ್ಕೆ ಪಡೆದರು.

ಖಚಿತ ಮಾಹಿತಿ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಮುದ್ದರಾಜ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರವೀಣ್ ಜಂಟಿ ಕಾರ್ಯಾಚರಣೆ ನಡೆಸಿದಾಗ ರಾಜ್ಯದ ಉಜಾಲಾ, ನಾಗಾರ್ಜುನ, ಸ್ಪಿಕ್ ಮುಂತಾದ ಕಂಪನಿಗಳ ಯೂರಿಯಾ ಗೊಬ್ಬರ ಪತ್ತೆಯಾಗಿದೆ. ಪೊಲೀಸರನ್ನು ಕಂಡ ಕೂಡಲೇ ತೋಟದ ಮನೆಯಲ್ಲಿದ್ದವರು ಪರಾರಿಯಾಗಿದ್ದಾರೆ.

ರಸಗೊಬ್ಬರ ಸಂಗ್ರಹಿಸಲು ಜಮೀನು ನೀಡಿದ್ದ ಮಾಲೀಕ, ಕೇರಳ ಹಾಗೂ ತಮಿಳುನಾಡಿನ ಏಜೆಂಟರು ಹಾಗೂ ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಮುದ್ದುರಾಜ್ ತಿಳಿಸಿದ್ದಾರೆ.

ರಸಗೊಬ್ಬರ ಮಾದರಿ ಪ್ರಯೋಗಾಲಯಕ್ಕೆ...

ಕೆಲ ದಿನಗಳಿಂದ ರಸಗೊಬ್ಬರಕ್ಕೆ ಕೊರತೆ ಕಂಡು ಬಂದಿತ್ತು. ನಿನ್ನೆ ಮೂವರು ವಿತರಕರಿಗೆ ಗೊಬ್ಬರ ಸರಬರಾಜು ಮಾಡಿದ್ದರಿಂದ ರೈತರ ಕೊಬ್ಬರ ಕೊರತೆ ನೀಗಿದೆ. ಇಲ್ಲಿ ಪತ್ತೆಯಾಗಿರುವ ರಸಗೊಬ್ಬರ ಎಲ್ಲಿಂದ ಬಂದಿದೆ ಎಂಬುದನ್ನು ಪತ್ತೆ ಹಚ್ಚಬೇಕಾಗಿದೆ. ಕಾರ್ಮಿಕರು ತಮ್ಮನ್ನು ಕೂಲಿ ಕೆಲಸಕ್ಕೆ ಕರೆ ತಂದಿದ್ದು, ತಮಗೇನೂ ತಿಳಿದಿಲ್ಲ ಎಂದಿದ್ದಾರೆ. ಇಲ್ಲಿರುವ ಗೊಬ್ಬರವನ್ನು ತೆರಕಣಾಂಬಿಯ ಟಿಎಪಿಸಿಎಂಎಸ್ ಗೋದಾಮಿಗೆ ಕಳಿಸಲಾಗುವುದು. ನಂತರ ಆ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗುವುದು. ಈ ಚೀಲಗಳ ಮೇಲೆ ನಮೂದಿಸಿದ ಬ್ಯಾಚ್ ಸಂಖ್ಯೆ ಆಧರಿಸಿ ಎಲ್ಲಿಂದ ಗೊಬ್ಬರ ಖರೀದಿಸಲಾಗಿದೆ ಎಂಬುದನ್ನು ಪತ್ತೆ ಹಚ್ಚಲಾಗುವುದು. ಈ ಬಗ್ಗೆ ಪ್ರಕರಣ ದಾಖಲಿಸಲಾಗುವುದು ಸಹಾಯಕ ಕೃಷಿ ನಿರ್ದೇಶಕ ಪ್ರವೀಣ್ ತಿಳಿಸಿದ್ದಾರೆ.

ಹನೂರು ಬಳಿ ಇಬ್ಬರು ಬೇಟೆಗಾರರ ಬಂಧನ



ಹನೂರು, ಅ.3–ಇಬ್ಬರು ಜಿಂಕೆ ಬೇಟೆಗಾರರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಘಟನೆ ಕೌದಳ್ಳಿ ವನ್ಯಜೀವಿ ವಲಯದಲ್ಲಿ ಬಂಧಿಸಿದ್ದಾರೆ.

ತಾಲೂಕಿನ ಹೊಸಳ್ಳಿ ಗ್ರಾಮದ ತಿಪ್ಪಬೋವಿ (55) ಇ ವಿಲೇಜ್ ಗ್ರಾಮದ ಸಿದ್ದರಾಜು(45) ಬಂಧಿತ ಆರೋಪಿಗಳು.

ಕಾವೇರಿ ವನ್ಯಜೀವಿ ಉಪವಿಭಾಗ ಕೌದಳ್ಳಿ ವನ್ಯಜೀವಿ ವಲಯ ವ್ಯಾಪ್ತಿಯ ಚೆನ್ನೂರು ಗಸ್ತಿನ ಸಿಪಿಟಿ–44 ಮೂಲೆನಜರು ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಜಿಂಕೆ ಬೇಟೆಯಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಕಾವೇರಿ ವನ್ಯಜೀವಿ ಉಪವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ನಂದೀಶ್.ಎಸ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಂಕರಾಜು ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಲೋಕೇಶ್ ಚೌಹಾಣ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ್ದ ಆಯುಧಗಳು, ಜಿಂಕೆ ಚರ್ಮ, ಮಾಂಸ ವಶಕ್ಕೆ ಪಡೆಯಲಾಗಿದೆ.

ದಾಳಿಯಲ್ಲಿ ಉಪ ವಲಯ ಅರಣ್ಯಾಧಿಕಾರಿ ಬಿ.ಅನಂತರಾಮು, ಅರಣ್ಯ ರಕ್ಷಕ ಮಲ್ಲಿಕಾರ್ಜುನ್ ಭೀಮಪ್ಪ ಹಂಗರಗಿ, ಮಹೇಂದ್ರ.ಎಸ್.ಎನ್, ಅಭಿಷೇಕ್ ಹಾಗೂ ಕ್ಷೇಮಾಭಿವೃದ್ಧಿ ನೌಕರ ನೀಲಶೆಟ್ಟಿ ಪಾಲ್ಗೊಂಡಿದ್ದರು.

ಯುವಪೀಳಿಗೆ ಪವಾಡ ಪುರುಷ ಮಹದೇಶ್ವರರ ಇತಿಹಾಸ ಅರಿಯಬೇಕು

• ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಿವಿಮಾತು • ಪ್ರೊ.ಎಸ್.ಶಿವರಾಜಪ್ಪರ 'ಮಹದೇಶ್ವರ ಸಾಹಿತ್ಯಿಕ ನೆಲಗಳ ಹುಡುಕಾಟ' ಕೃತಿ ಕುರಿತ ಕಾರ್ಯಕ್ರಮ

ಕೊಳ್ಳೇಗಾಲ, ಅ.3–ಶ್ರೀ ಮಲೆ ಮಹದೇಶ್ವರರು ಜನಪದ ಹಾಗೂ ಸಾಮಾಜಿಕ ನಾಯಕರು. ಮಹಾನ್ ಪವಾಡ ಮಾಡುವ ಮೂಲಕ ಕೋಟ್ಯಾಂತರ ಜನರ ಪಾಲಿಗೆ ದೇವರಾದವರು. ಅಂತಹ ಪವಾಡ ಪುರುಷರ ಇತಿಹಾಸವನ್ನು ಯುವ ಪೀಳಿಗೆ ಅರಿಯಬೇಕಿದೆ ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಿವಿಮಾತು ಹೇಳಿದರು.



ಚಾಮರಾಜನಗರ ಜಿಲ್ಲೆಗೆ 25 ವರ್ಷ ತುಂಬಿದ ಸಂಭ್ರಮದ ಹಿನ್ನೆಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಮಾನಸ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ 'ಅಮೃತ ವರ್ಷ–ಬೆಳ್ಳಿಯ ಸ್ಪರ್ಶ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಚಾಮರಾಜನಗರ 1997ರ ಆ.15 ರಂದು ಜಿಲ್ಲಾ ಕೇಂದ್ರವಾಗಿ ಉದ್ಘಾಟನೆಯಾಯಿತು. ಈಗ 25 ವರ್ಷಗಳು ಕಳೆದಿವೆ. ಇದು ಸಂಪದ್ಭರಿತ ಜಿಲ್ಲೆಯಾಗಿದ್ದು, ಇಲ್ಲಿ ಅತ್ಯಂತ ಸುಪ್ರಸಿದ್ಧ ಸ್ಥಳಗಳಿವೆ. ರಾಜ್ಯದಲ್ಲೇ ಅತಿ ಹೆಚ್ಚು ಆದಾಯ ಗಳಿಕೆಯ ಧಾರ್ಮಿಕ ಕ್ಷೇತ್ರ ಮಹದೇಶ್ವರಬೆಟ್ಟ ಇಲ್ಲಿದೆ. ಬಂಡೀಪುರ ಇಡೀ ಭಾರತದಲ್ಲೇ ಅತ್ಯಂತ ಹೆಚ್ಚು ಹುಲಿಗಳು ಹಾಗೂ ಆನೆಗಳಿರುವ ಪ್ರದೇಶ ಎಂದು ಖ್ಯಾತಿ ಗಳಿಸಿದೆ. ಇವಷ್ಟೇ ಅಲ್ಲದೆ ಅನೇಕ ಐತಿಹ್ಯಗಳನ್ನು ಜಿಲ್ಲೆಯಲ್ಲಿ ಕಾಣಬಹುದು ಎಂದರು.

ಓದು, ಬರವಣಿಗೆ ಮುಂದೆ ಗೂಗಲ್ ಶೂನ್ಯ: ಸೃಜನಾತ್ಮಕ ಬರವಣಿಗೆ ಓದು ಮತ್ತು ಬರಹ ವಿದ್ಯಾರ್ಥಿಗಳ ಭವಿಷ್ಯಕ್ಕೆ ಪೂರಕ ಅನುಕೂಲ ಮಾಡಿಕೊಡಲಿದೆ. ನಿರಂತರ ಓದಿನ ಮುಂದೆ ಸಾಮಾಜಿಕ ಜಾಲತಾಣಗಳು ಏನೂ ಮಾಡಲಾಗದು. ಮೊಬೈಲ್, ಟಿವಿ ಬಂದ ನಂತರ ಪತ್ರಿಕೆ ಓದುವವರ ಆಸಕ್ತಿ ಕ್ಷೀಣಿಸಿದೆ. ಗ್ರಂಥಾಲಯಕ್ಕೆ ತೆರಳುತ್ತಿದ್ದವರ ಸಂಖ್ಯೆಯಲ್ಲೂ ಇಳಿಮುಖ ಕಾಣುತ್ತಿದ್ದೇವೆ. ಯುವ ಪೀಳಿಗೆ ಮೊಬೈಲ್ ಟಿವಿ ಬಳಕೆ ಕಡಿಮೆ ಮಾಡಿ ಗ್ರಂಥಾಲಯಕ್ಕೆ ಭೇಟಿ ನೀಡಿ ಜ್ಞಾನ ಬೆಳೆಸಿಕೊಳ್ಳಿ, ಸ್ಪರ್ಧಾತ್ಮಕ ಯುಗದಲ್ಲಿ ಓದಿಗೆ ಹೆಚ್ಚಿನ ಆದ್ಯತೆ ನೀಡಿ. ಆ ಮೂಲಕ ನಿಮ್ಮ ಜ್ಞಾನ ಭಂಡಾರ ಹೆಚ್ಚಿಸಿಕೊಂಡು ಮೌಲ್ಯಯುತ ಜೀವನ ರೂಪಿಸಿಕೊಳ್ಳಿ ಎಂದರು.

ಸಾಹಿತಿ ಪ್ರೊ.ಶಿವರಾಜಪ್ಪ ಮಾತನಾಡಿ, ಮಹದೇಶ್ವರರು ಮೂಡನಂಬಿಕೆ ಬದಿಗೊತ್ತಿ, ಅವರು ಕಾವ್ಯಮಯವಾಗಿ ಹೊರಹೊಮ್ಮಿದ ಸಾಂಸ್ಕೃತಿಕ ನಾಯಕರು ಎಂದರು. ಮಾನಸ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್ ಮಾತನಾಡಿ, ಕಸಾಪ ಜಿಲ್ಲಾಧ್ಯಕ್ಷ ಶೈಲಕುಮಾರ್, ತಾಲೂಕು ಅಧ್ಯಕ್ಷ ಕೊಂಗರಹಳ್ಳಿ ನಾಗರಾಜು, ಸಂಘದ ಪದಾಧಿಕಾರಿಗಳಾದ ಚಿಕ್ಕರಾಜು, ಉಮೇಶ್, ನಾಗರಾಜು, ಶಿವಣ್ಣ, ಮದ್ದೂರು ದೊರೆಸ್ವಾಮಿ, ಶಿವಸ್ವಾಮಿ, ದಿಲೀಪ್ ಕುಮಾರ್, ಪುಟ್ಟರಸಶೆಟ್ಟಿ, ಸೋಮಣ್ಣ, ಶಿವಶಂಕರ್, ಮರಿ ಬಸವಣ್ಣ, ಚನ್ನಶೆಟ್ಟಿ, ಧನಂಜಯ ಇನ್ನಿತರರಿದ್ದರು.

ಕೊಳ್ಳೇಗಾಲ ನಗರಸಭೆಯ 7 ಸ್ಥಾನಗಳಿಗೆ ಉಪ ಚುನಾವಣೆ

ವೇಳಾಪಟ್ಟಿ ಪ್ರಕಟ

ಚಾಮರಾಜನಗರ.ಅ.3–ಜಿಲ್ಲೆಯ ಕೊಳ್ಳೇಗಾಲ ನಗರಸಭೆಯಲ್ಲಿ ತೆರವಾಗಿರುವ 7 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.

ಕೊಳ್ಳೇಗಾಲ ನಗರಸಭೆಯ 2,6,7,13,21,25 ಹಾಗೂ 26ನೇ ವಾರ್ಡ್ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಿಗದಿಯಾಗಿದ್ದು, ಅ.10ರಂದು ಜಿಲ್ಲಾಧಿಕಾರಿಯವರು ಚುನಾವಣಾ ಅಧಿಸೂಚನೆ ಹೊರಡಿಸಲಿದ್ದಾರೆ.

ನಾಮಪತ್ರ ಸಲ್ಲಿಸಲು ಅ. 17 ಕಡೆಯ ದಿನ. ಅ. 18ರಂದು ನಾಮಪತ್ರಗಳ ಪರಿಶೀಲನೆ, ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಅ.20 ಕಡೆಯ ದಿನ. ಅವಶ್ಯವಿದ್ದರೆ ಅ.28 ರಂದು ಬೆಳಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದೆ. ಮರು ಮತದಾನ ಅವಶ್ಯವಿದ್ದಲ್ಲಿ ಅ.30 ರಂದು ಬೆಳಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುತ್ತದೆ. ಮತಗಳ ಎಣಿಕೆ ಕಾರ್ಯವು ತಾಲೂಕಿನ ಕೇಂದ್ರ ಸ್ಥಳದಲ್ಲಿ ಅ.31 ರಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದೆ. ಅ.31ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗಲಿದೆ.

ಸದಾಚಾರ ಸಂಹಿತೆಯು ಉಪ ಚುನಾವಣಾ ನಡೆಯುವ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಮಾತ್ರ ಅ.10ರಿಂದ 31 ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಎಂದು ಚುನಾವಣಾ ಆಯೋಗ ತಿಳಿಸಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ತಿಳಿಸಿದ್ದಾರೆ.



ದಸರಾ ವಸ್ತು ಪ್ರದರ್ಶನದಲ್ಲಿ 'ನಂದಿನಿ ಮಳಿಗೆ' ಉದ್ಘಾಟನೆ



ಮೈಸೂರು, ಅ.3(ಎಂಕೆ)– ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಮೈಮುಲ್ (ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ.) ವತಿಯಿಂದ ಸ್ಥಾಪಿಸಿರುವ 'ನಂದಿನಿ ಮಳಿಗೆ'ಯನ್ನು ಸೋಮವಾರ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ದೀಪ ಬೆಳಗಿಸಿ, ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಪ್ರತಿವರ್ಷದಂತೆ ದಸರಾ ವಸ್ತು ಪ್ರದರ್ಶನದಲ್ಲಿ 'ನಂದಿನಿ ಮಳಿಗೆ' ಸ್ಥಾಪಿಸಲಾಗಿದ್ದು, ನಂದಿನಿ ಹಾಲಿನ ಎಲ್ಲಾ ಬಗೆಯ ತಿನಿಸುಗಳ ಮಾರಾಟ ಹಾಗೂ ಅವುಗಳ ತಯಾರಿಕೆ ಕುರಿತು ಮಾಹಿತಿ ನೀಡಲಾಗುತ್ತಿದೆ. ಗ್ರಾಹಕರಿಗೆ ಮಾಹಿತಿ ನೀಡುವುದಕ್ಕಾಗಿಯೇ ಈ ಬಾರಿ ಎಲ್‌ಇಡಿ ಪರದೆ ಅಳವಡಿಸಲಾಗಿದೆ ಎಂದರು. ಜನರ ಆರೋಗ್ಯ ಕಾಳಜಿ ಜೊತೆಗೆ ರೈತರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಳಿಗೆ ತೆರೆಯಲಾಗಿದೆ. ಹೈನುಗಾರಿಕೆ, ಹಸುಗಳ ವಿವಿಧ ತಳಿಗಳ ಮಾಹಿತಿ, ರೈತರಿಂದ ಖರೀದಿ ಮಾಡುವ ಹಾಲನ್ನು ಹೇಗೆ ವಿವಿಧ ಪದಾರ್ಥಗಳ ತಯಾರಿಕೆಗೆ ಬಳಸಲಾಗುವುದು ಎಂಬುದನ್ನು ತಿಳಿಸಿಕೊಡಲಾಗುವುದು ಎಂದರಲ್ಲದೆ ನೂತನ ಮಳಿಗೆಯ ಸದುಪಯೋಗವನ್ನು ಗ್ರಾಹಕರು ಪಡೆದುಕೊಳ್ಳುವಂತೆ ಮನವಿ ಮಾಡಿದರು. ಮೈಮುಲ್ ಮಾಜಿ ಅಧ್ಯಕ್ಷ ಉಮಾಶಂಕರ್ ಸೇರಿದಂತೆ ಮೈಮುಲ್ ಪದಾಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಯುವ ದಸರಾದಲ್ಲಿ ಕರ್ತವ್ಯನಿರತ ಮಹಿಳಾ ಪಿಎಸ್‌ಐಗೆ ಅವಾಚ್ಯ ಪದಗಳಿಂದ ನಿಂದನೆ, ಬೆದರಿಕೆ ಆರೋಪ

ಬಿಜೆಪಿ ಮುಖಂಡ ಅಪ್ಪಣ್ಣ ವಿರುದ್ಧ ಕೇಸ್ ದಾಖಲು

ಮೈಸೂರು, ಅ.3– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಯುವ ದಸರಾ ಕಾರ್ಯಕ್ರಮದಲ್ಲಿ ಕರ್ತವ್ಯನಿರತ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಕೈ ಹಿಡಿದು ಎಳೆದಾಡಿ, ಅವಾಚ್ಯ ಪದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ ಆರೋಪದಡಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಅಪ್ಪಣ್ಣ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

ಅಶೋಕಪುರಂ ಠಾಣೆ ಸಬ್‌ಇನ್ಸ್‌ಪೆಕ್ಟರ್ ಎಸ್.ಕೆ.ಸ್ಮಿತಾ (30), ಅಪ್ಪಣ್ಣ ಅವರಿಂದ ಕಿರುಕುಳಕ್ಕೊಳಗಾದವರಾಗಿದ್ದು, ಅವರು ಭಾನುವಾರ ರಾತ್ರಿ 11.30ರಲ್ಲಿ ಲಕ್ಷ್ಮೀಪುರಂ ಠಾಣೆಗೆ ಲಿಖಿತ ದೂರು ಸಲ್ಲಿಸಿದ್ದರಾದರೂ, ಪೊಲೀಸರು ಇಂದು ಬೆಳಗ್ಗೆ ಕೇಸ್ ದಾಖಲಿಸಿದ್ದಾರೆ. ಸ್ಮಿತಾ ಅವರು ದೂರು ನೀಡಿದಾಗ ಠಾಣೆಯಲ್ಲಿ ತಾಂತ್ರಿಕ ದೋಷದಿಂದ ಪೊಲೀಸ್ ಐಟಿ ಕಾರ್ಯನಿರ್ವಹಿಸದ ಕಾರಣ ದೂರನ್ನು ದಾಖಲಿಸಲು ವಿಳಂಬವಾಯಿತು ಎಂದು ಎಫ್‌ಐಆರ್‌ನಲ್ಲಿ ನಮೂದಿಸಿದ್ದಾರೆ.

ವಿವರ: ಅಶೋಕಪುರಂ ಠಾಣೆ ಸಬ್‌ಇನ್ಸ್‌ಪೆಕ್ಟರ್ ಎಸ್.ಕೆ. ಸ್ಮಿತಾ ಅವರನ್ನು ಭಾನುವಾರ ರಾತ್ರಿ ಯುವ ದಸರಾ ಕಾರ್ಯಕ್ರಮಕ್ಕೆ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ವಿವಿಐಪಿಗಳು ಕುಳಿತುಕೊಳ್ಳುವ ಸ್ಥಳ ಹಾಗೂ ವೇದಿಕೆ ಮುಂಭಾಗದ 'ಡಿ' ಝೋನ್ ನಡುವಿನ ಗ್ಯಾಂಗ್‌ವೇನಲ್ಲಿ ಅವರು ಕರ್ತವ್ಯ ನಿರ್ವಹಿಸುತ್ತಿದ್ದರು.

ರಾತ್ರಿ 9 ಗಂಟೆ ಸುಮಾರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇತರ ಗಣ್ಯರು ಆಗಮಿಸಿದಾಗ ಸ್ಮಿತಾ ಅವರು ಗಣ್ಯರು ಆಸೀನರಾಗಬೇಕಾದ ಸ್ಥಳವನ್ನು ಸೂಚಿಸಿ, ಅವರನ್ನು ಕೂರಿಸಿದರು. ಇದೇ ವೇಳೆ ಅಪ್ಪಣ್ಣ ಹಾಗೂ ಇತರರು ಗಣ್ಯರಿಗೆ ಮೀಸಲಾದ ಸ್ಥಳಕ್ಕೆ ತೆರಳಲು ಮುಂದಾದಾಗ ಸ್ಮಿತಾ ಅವರು ತಡೆದು, ಅಪ್ಪಣ್ಣ ಮತ್ತಿತರರು ಆಸೀನರಾಗಬೇಕಾದ ಸ್ಥಳವನ್ನು ತೋರಿಸಿದ್ದಾರೆ. ಆಗ ಆಕ್ರೋಶಗೊಂಡ ಅಪ್ಪಣ್ಣ ಸ್ಮಿತಾ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೈ ಹಿಡಿದು ಎಳೆದಾಡಿ, ಯೂನಿಫಾರಂ ಕಾಲರ್ ಪಟ್ಟಿಯನ್ನು ಹಿಡಿದು 'ನನಗೆ ಜಾಗ ತೋರಿಸಲು ನೀನ್ಯಾವಳು? ಎಂದು ಏಕವಚನದಲ್ಲಿ ಪ್ರಶ್ನಿಸಿದ್ದಲ್ಲದೆ, ರಾಷ್ಟ್ರಪತಿ ಬಂದೋಬಸ್ತ್‌ನಲ್ಲಿ ನಿನ್ನನ್ನು ನೋಡಿದ್ದೇನೆ. ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. ನೀರು, ನೆರಳಿಲ್ಲದ ಜಾಗಕ್ಕೆ ಎತ್ತಂಗಡಿ ಮಾಡಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾರೆ. ಇದೇ ವೇಳೆ ಅವರೊಂದಿಗೆ ಬಂದಿದ್ದ ಬೆಂಬಲಿಗರೂ ಕೂಡ ಸ್ಮಿತಾ ಅವರನ್ನು ಸುತ್ತುವರಿದು ಭಯ ಹುಟ್ಟಿಸಿದಾಗ ಅದೇ ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ವಿದ್ಯಾರಣ್ಯಪುರಂ ಠಾಣೆ ಸಬ್‌ಇನ್ಸ್‌ಪೆಕ್ಟರ್ ರಂಗಸ್ವಾಮಿ, ರಾಮನಗರ ಡಿಸಿಆರ್‌ಬಿ ಇನ್ಸ್‌ಪೆಕ್ಟರ್ ನವೀನ್, ಅಶೋಕಪುರಂ ಠಾಣೆಯ ಮಹಿಳಾ ಸಿಬ್ಬಂದಿಗಳಾದ ಶೈಲಜಾ ಮತ್ತು ಸುಮಾ ಅವರು ಸ್ಮಿತಾ ಅವರನ್ನು ರಕ್ಷಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಲಕ್ಷ್ಮೀಪುರಂ ಠಾಣೆ ಪೊಲೀಸರು ಅಪ್ಪಣ್ಣ ಮತ್ತಿತರರ ವಿರುದ್ಧ ಭಾರತೀಯ ದಂಡ ಸಂಹಿತೆ 353, 354, 341, 332, 509, 504, 506, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸೆ.26ರಂದು ಬೆಳಗ್ಗೆ ಚಾಮುಂಡಿಬೆಟ್ಟದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದಸರಾ ಮಹೋತ್ಸವವನ್ನು ಉದ್ಘಾಟಿಸಿದ ಕಾರ್ಯಕ್ರಮದಲ್ಲಿ ಸಬ್‌ಇನ್ಸ್‌ಪೆಕ್ಟರ್ ಸ್ಮಿತಾ ಅವರನ್ನು ವಿವಿಐಪಿ ಗ್ಯಾಲರಿ ಬಳಿ ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ಆಗ ಬಿಜೆಪಿ ಮುಖಂಡ ಕಾ.ಪು. ಸಿದ್ದಲಿಂಗಸ್ವಾಮಿ ಅವರು ತಮ್ಮ ಬೆಂಬಲಿಗರೊಂದಿಗೆ ವಿವಿಐಪಿ ಗ್ಯಾಲರಿ ಪ್ರವೇಶಿಸಲು ಮುಂದಾದಾಗ ಸ್ಮಿತಾ ಅವರು ಯಾವುದೇ ಮುಲಾಜಿಲ್ಲದೆ ಅವರನ್ನು ತಡೆದಿದ್ದರು. ಅಪ್ಪಣ್ಣ ಅವರು ತನ್ನನ್ನು ತಡೆದ ಸ್ಮಿತಾ ಅವರನ್ನು ನಿಂದಿಸುವ ವೇಳೆ ಅಪ್ಪಣ್ಣ ಚಾಮುಂಡಿಬೆಟ್ಟದಲ್ಲಿ ಕಾ.ಪು. ಸಿದ್ದಲಿಂಗಸ್ವಾಮಿ ಅವರನ್ನು ತಡೆದ ಘಟನೆಯನ್ನೂ ಕೂಡ ಉಲ್ಲೇಖಿಸಿ, ಅವರನ್ನು ನೀರು, ನೆರಳಿಲ್ಲದ ಜಾಗಕ್ಕೆ ಎತ್ತಂಗಡಿ ಮಾಡಿಸುವುದಾಗಿ ಬೆದರಿಸಿದ್ದಾರೆ.

ಮೂರನೇ ಪುಟದಿಂದ

ನಾಳೆ ಜಂಬೂ ಸವಾರಿ

ವಿ.ಸುನೀಲ್‌ಕುಮಾರ್ ಹಾಗೂ ಶಾಸಕ ಎಸ್.ಎ. ರಾಮದಾಸ್ ಪುಷ್ಪಾರ್ಚನೆ ವೇಳೆ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ನಂದಿಧ್ವಜಕ್ಕೆ ಮುಖ್ಯಮಂತ್ರಿಗಳು ಪೂಜೆ ಸಲ್ಲಿಸುತ್ತಿದ್ದಂತೆಯೇ ನಂದಿಧ್ವಜ ತಂಡ, ಮಂಗಳವಾದ್ಯ, ಆನೆ ಗಾಡಿ, ಕುದುರೆ ಆನೆ, ನಾದಸ್ವರ ವೃಂದ, ಪೊಲೀಸ್ ಬ್ಯಾಂಡ್ ತಂಡ, ಅಶ್ವಾರೋಹಿ ಪೊಲೀಸ್ ತುಕಡಿ, ಅಗ್ನಿಶಾಮಕ ದಳದ ಸಿಬ್ಬಂದಿ, ಸರ್ಕಾರದ ಯೋಜನೆ ಗಳು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರದರ್ಶಿಸುವ 43 ಸ್ತಬ್ಧಚಿತ್ರಗಳು, ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸುವ 50ಕ್ಕೂ ಹೆಚ್ಚು ಜಾನಪದ ತಂಡಗಳು, ಕೆಎಸ್‌ಆರ್‌ಪಿ, ಇಂಗ್ಲಿಷ್ ಬ್ಯಾಂಡ್ ತಂಡ ಗಳು ಮೆರವಣಿಗೆಯಲ್ಲಿ ಸಾಗಲಿವೆ.

ನಂತರ 750 ಕೆಜಿ ತೂಗುವ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನೊತ್ತ ಅಭಿಮನ್ಯು ವಿಜಯದಶಮಿ ಮೆರವಣಿಗೆಯಲ್ಲಿ ಗಜ ಗಾಂಭೀರ್ಯದಿಂದ ಹೆಜ್ಜೆ ಹಾಕಲಿದ್ದಾನೆ. ಬಳಿಕ ಕಾವೇರಿ, ಎಡಬಲ ಚೈತ್ರ ಆನೆಗಳು ಜಂಬೂ ಸವಾರಿಯಲ್ಲಿ ಅಭಿಮನ್ಯುಗೆ ಸಾಥ್ ನೀಡಲಿವೆ. ಬುಧವಾರ ಸಂಜೆ 7.30 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆಯಲಿರುವ ಟಾರ್ಚ್ ಲೈಟ್ ಪರೇಡ್ ನಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಕವಾಯತು ವೀಕ್ಷಿಸಿ ಗೌರವ ವಂದನೆ ಸ್ವೀಕರಿಸುವರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ರಾಜೀವ್ ಚಂದ್ರಶೇಖರ್, ಶೋಭಾ ಕರಂದ್ಲಾಜೆ, ಎ. ನಾರಾಯಣಸ್ವಾಮಿ, ಭಗವಂತ ಖೂಬಾ ಸೇರಿದಂತೆ ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಅದರೊಟ್ಟಿಗೆ 2022ರ ದಸರಾ ಮಹೋತ್ಸವ ಅಂತ್ಯಗೊಳ್ಳಲಿದ್ದು, ಈ ಐತಿಹಾಸಿಕ ಹಬ್ಬಕ್ಕೆ ಲಕ್ಷಾಂತರ ಮಂದಿ ಸಾಕ್ಷಿಯಾಗಲಿದ್ದಾರೆ. ಸೆಪ್ಟೆಂಬರ್ 26ರಂದು ಬೆಳಗ್ಗೆ 9.45ರಿಂದ 10.05ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡಿ ಬೆಟ್ಟದಲ್ಲಿ ಭಾರತದ ಘನತೆವೆತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಹಬ್ಬಕ್ಕೆ ವಿಧ್ಯುಕ್ತ ಚಾಲನೆ ನೀಡಿದ ನಂತರ ನವರಾತ್ರಿ ಉತ್ಸವ ಆರಂಭಗೊಂಡಿತ್ತು.

ನಂತರ ಚಲನಚಿತ್ರೋತ್ಸವ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ವಸ್ತುಪ್ರದರ್ಶನ, ಯೋಗ, ವಿದ್ಯುದ್ದೀಪಾಲಂಕಾರಗಳಿಗೂ ಅಂದೇ ಚಾಲನೆ ನೀಡಲಾಗಿತ್ತು. ಯುವ ಸಂಭ್ರಮ, ಯುವ ದಸರಾ, ದಸರಾ ದರ್ಶನ, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ, ಮಕ್ಕಳ ದಸರಾ, ಗ್ರಾಮೀಣ ದಸರಾ, ದಸರಾ ಕ್ರೀಡಾಕೂಟ, ಕೈಗಾರಿಕಾ ದಸರಾ, ರೈತ ದಸರಾ, ಮಹಿಳಾ ಮತ್ತು ಮಕ್ಕಳ ದಸರಾ, ಆರೋಗ್ಯ ದಸರಾ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳಿಗೆ ಮೈಸೂರು ದಸರಾ ಮಹೋತ್ಸವ ಸಾಕ್ಷಿಯಾಯಿತು.

ನಾಡಹಬ್ಬಕ್ಕೆ ಈ ಬಾರಿ ಇನ್ನಿಲ್ಲದ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ಹೊರ ಜಿಲ್ಲೆಗಳಿಂದ 3,250 ಮಂದಿ ಹೆಚ್ಚುವರಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿದೆ. ವಿಜಯದಶಮಿ ಮೆರವಣಿಗೆ ನಡೆಯುವ ಅರಮನೆ ಆವರಣ, ಸುತ್ತಲಿನ ಪ್ರದೇಶ, ರಾಜಮಾರ್ಗ ಹಾಗೂ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಸುತ್ತಲಿನ ಪ್ರದೇಶದಲ್ಲಿ ಹೆಚ್ಚುವರಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿರುವುದಲ್ಲದೆ, ಡ್ರೋಣ್ ಕ್ಯಾಮರಾಗಳಿಂದ ದೃಶ್ಯ ಸೆರೆಹಿಡಿದು ಕಟ್ಟೆಚ್ಚರ ವಹಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಕೆಆರ್ ಆಸ್ಪತ್ರೆ, ಜೆಎಸ್‌ಎಸ್ ಸೇರಿದಂತೆ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿ, ಹಾಸಿಗೆ, ವಾರ್ಡ್‌ಗಳನ್ನು ಮೀಸಲಾಗಿರಿಸಿದ್ದು, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಬಾರಿ ಸರಳ ಹಾಗೂ ಸಾಂಪ್ರದಾಯಿಕವಾಗಿ ದಸರಾ ಆಚರಿಸಲಾಗಿತ್ತು. ಜಂಬೂ ಸವಾರಿ ಮೆರವಣಿಗೆಯು ಅರಮನೆ ಆವರಣಕ್ಕೆ ಮಾತ್ರ ಸೀಮಿತವಾಗಿ ನೂರಾರು ಮಂದಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಲಾಗಿದ್ದನ್ನು, ಇಲ್ಲಿ ಸ್ಮರಿಸಬಹುದು.

ಚಿನ್ನದ ಅಂಬಾರಿಗೆ ಈ ಬಾರಿ ನಂದಿ ಬಟ್ಲು ಹೂವಿನ ಅಲಂಕಾರ

- ಅಂಬಾರಿಗೆ ಪುಷ್ಪಾರ್ಚನೆ ಮುಹೂರ್ತ ಸಂಜೆಯಾಗಿದ್ದರಿಂದ ಈ ತೀರ್ಮಾನ
- ಮಲ್ಲಿಗೆ ಬಳಸಿದರೆ ಸಂಜೆ ವೇಳೆಗೆ ಬಾಡುವ ಸಂಭವವಿದೆ
- ಸೇಲಂನಿಂದ ಗುಣಮಟ್ಟದ, ತಾಜಾ ಹೂವು ತರಲು ನಿರ್ಧಾರ
- 75ನೇ ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ ಅಲಂಕಾರದ ವಿನ್ಯಾಸದಲ್ಲಿ ಮಾರ್ಪಾಡು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಅ.3– ಜಂಬೂಸವಾರಿ ಮೆರವಣಿಗೆಯ ಪ್ರಮುಖ ಆಕರ್ಷಣೆ ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವಮೂರ್ತಿ 750 ಕೆಜಿ ತೂಕದ ಚಿನ್ನದ ಅಂಬಾರಿಗೆ ಈ ಬಾರಿ ನಂದಿ ಬಟ್ಲು ಹೂವಿನಿಂದ ಅಲಂಕಾರ ಮಾಡಲಾಗುತ್ತಿದ್ದು, 75ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಅಲಂಕಾರದ ವಿನ್ಯಾಸದಲ್ಲಿ ಮಾರ್ಪಾಡು ಮಾಡಲು ನಿರ್ಧರಿಸಲಾಗಿದೆ.

ಈ ಸಾಲಿನ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಮುಹೂರ್ತ ಸಂಜೆ 5.07ರ ನಂತರ ನಿಗದಿಯಾಗಿರುವುದರಿಂದ ಚಿನ್ನದ ಅಂಬಾರಿಗೆ ಮಲ್ಲಿಗೆ ಹೂವಿನ ಅಲಂಕಾರ ಮಾಡಿದರೆ, ಅಂಬಾರಿಗೆ ಪುಷ್ಪಾರ್ಚನೆ ಸಮಯದೊಳಗೆ ಅಲಂಕಾರದ ಹೂವು ಬಾಡುವ ಸಾಧ್ಯತೆ ಇರುವುದರಿಂದ ಅಂಬಾರಿಯ ಅಲಂಕಾರದ ತಾಜಾತನ ಕಾಪಾಡಲು ಈ ಬಾರಿ ನಂದಿ ಬಟ್ಲು ಹೂವಿನ ಅಲಂಕಾರ ಮಾಡಲಾಗುತ್ತದೆ. ಈ ಹೂವು ಎರಡು ದಿನದವರೆಗೂ ಬಾಡದ ಕಾರಣ ಜಂಬೂಸವಾರಿ ಮೆರವಣಿಗೆಯುದ್ದಕ್ಕೂ ಅಲಂಕಾರದ ಸೊಬಗು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದರೊಂದಿಗೆ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಸಂದ ಹಿನ್ನೆಲೆಯಲ್ಲಿ ಅಲಂಕಾರವನ್ನು ವಿಶೇಷವಾಗಿ ಮಾಡಲು ಉದ್ದೇಶಿಸಲಾಗಿದೆ.

ಯಾವ ಯಾವ ಹೂವು: ಅಂಬಾರಿಯ ಅಲಂಕಾರಕ್ಕೆ ನಾಲ್ಕು ಬಗೆಯ ಹೂವುಗಳನ್ನು ಬಳಸಲಾಗುತ್ತದೆ. 15 ಕೆಜಿ ನಂದಿ ಬಟ್ಲು(ಊಟಿ ಮಲ್ಲಿಗೆ) ಹೂವು, ಕನಕಾಂಬರ 1.5ಕೆಜಿ, ನೀಲಿ ಬಣ್ಣದ ಸೇವಂತಿಗೆ ಹೂವು 4 ಕೆಜಿ, ಪರ್ಪಲ್ ಬಣ್ಣದ 8 ಕಟ್ ಆರ್ಕಿಡ್ ಹೂವು ಹಾಗೂ ಪನ್ನೀರ್ ಎಲೆಯನ್ನೂ ಬಳಸಲಾಗುತ್ತದೆ. ಅಲ್ಲದೇ ಅಂಬಾರಿಯಲ್ಲಿ ವಿರಾಜಮಾನರಾಗುವ ನಾಡದೇವಿ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಮೈಸೂರು ಮಲ್ಲಿಗೆಯಿಂದ ತಯಾರಿಸಿರುವ 4 ಅಡಿಯ ಹಾರ ಹಾಕಲಾಗುತ್ತದೆ. ಅಂಬಾರಿ ಅಲಂಕಾರಕ್ಕೆ ಪ್ರಮುಖವಾಗಿ ತಮಿಳುನಾಡಿನ ಸೇಲಂನಿಂದ 20 ಕೆಜಿ ತಾಜಾತನದ ನಂದಿ ಬಟ್ಲು ಹೂವನ್ನು ತರಲಾಗುತ್ತಿದೆ. ಅದರೊಂದಿಗೆ ಮೈಸೂರು, ಬೆಂಗಳೂರಿನ ಇತರೆ ಹೂವುಗಳನ್ನು ಅಲಂಕಾರಕ್ಕೆ ಬಳಸಲಾಗುತ್ತಿದೆ. ಬೆಳಗ್ಗೆ 10ರಿಂದ 11ಗಂಟೆಯೊಳಗೆ ಅಂಬಾರಿ ಅಲಂಕಾರದ ಹೂವಿನ ತೋರಣವನ್ನು ಅರಮನೆಗೆ ತಂದು, 1ರಿಂದ 1.30ರೊಳಗೆ ಅಂಬಾರಿಗೆ ಹೂವಿನ ತೋರಣ ಕಟ್ಟಿ, ಅಲಂಕಾರ ಕಾರ್ಯ ಆರಂಭಿಸಲಾಗುತ್ತದೆ.



ಕಳೆದ ವರ್ಷ ಅಂಬಾರಿಗೆ ಅಲಂಕಾರ ಮಾಡುತ್ತಿರುವ ಹೂವಿನ ವ್ಯಾಪಾರಿ ಎನ್.ಮಂಜುನಾಥ್

ವಿಶೇಷ ಅಲಂಕಾರ: ಚಿನ್ನದ ಅಂಬಾರಿಗೆ ಕಳೆದ 25 ವರ್ಷದಿಂದ ಹೂವಿನ ಅಲಂಕಾರ ಮಾಡುತ್ತಿರುವ ಮೈಸೂರಿನ ದೇವರಾಜ ಮಾರುಕಟ್ಟೆಯ ಗಾಯತ್ರಿ ಫ್ಲವರ್ಸ್ ಸ್ಟಾಲ್ ಮಳಿಗೆಯ ಮಾಲೀಕ ಎನ್.ಮಂಜುನಾಥ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈ ಬಾರಿ ಜಂಬೂಸವಾರಿ ಮೆರವಣಿಗೆ ಬನ್ನಿಮಂಟಪ ತಲುಪುವ ಮುನ್ನವೇ ಕತ್ತಲಾಗಲಿದೆ. ಪುಷ್ಪಾರ್ಚನೆ ಮುಹೂರ್ತ ತಡವಾಗಿರುವುದರಿಂದ ಅಂಬಾರಿ ಅಲಂಕಾರದ ತಾಜಾತನ ಕಾಪಾಡಲು ನಂದಿ ಬಟ್ಲು ಹೂವನ್ನು ಬಳಸಲಾಗುತ್ತಿದೆ ಇದರಿಂದ ಅಂಬಾರಿ ಅಂದ ಕತ್ತಲೆಯಲ್ಲೂ ವಿದ್ಯುತ್ ದೀಪಾಲಂಕಾರದಲ್ಲಿ ಇನ್ನಷ್ಟು ಕಂಗೊಳಿಸಲಿದೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷ ಸಂದಿದ ಹಿನ್ನೆಲೆಯಲ್ಲಿ ವಿಶೇಷವಾದ ಅಲಂಕಾರ ಮಾಡಲಾಗುತ್ತಿದೆ.

ಅಂಬಾರಿ ಅಳತೆ ತಮ್ಮ ಬಳಿ ಇದ್ದು, ಆಯುಧ ಪೂಜೆಯ ದಿನದಂದು ಸಂಜೆಯೊಳಗೆ ಹೂವನ್ನು ತಂದಿಟ್ಟುಕೊಂಡು ರಾತ್ರಿ ತಮ್ಮ ಅಂಗಡಿಯಲ್ಲಿಯೇ 10–15 ಮಂದಿ ಸಹಾಯಕರೊಂದಿಗೆ ಕಟ್ಟುತ್ತೇವೆ. ಮಧ್ಯರಾತ್ರಿಯೊಳಗೆ ಅಂಬಾರಿಯ ಅಲಂಕಾರಕ್ಕೆ ಬೇಕಾದ ಹೂವುಗಳ ಸರಮಾಲೆ ಸಿದ್ದಪಡಿಸಲಾಗುತ್ತದೆ. ಜಂಬೂಸವಾರಿಯ ದಿನ ಅರಮನೆಯ ವೇದಿಕೆಗೆ ಅಲಂಕಾರ ಮಾಡಲಾಗುತ್ತದೆ. ಆನೆ ಮೇಲೆ ಕಟ್ಟುವುದಕ್ಕೆ ಮುಂಚಿತವಾಗಿ ಚಿನ್ನದ ಅಂಬಾರಿಗೆ ಅಲಂಕಾರ ಮಾಡಲಾಗುತ್ತದೆ. ಸೂಕ್ಷ್ಮವಾಗಿ ಅಲಂಕಾರ ಮಾಡಬೇಕು. ಇಲ್ಲದಿದ್ದರೆ ಹೂವಿನ ತೋರಣ ಕೆಳಕ್ಕೆ ಬಾಗಿದರೆ ಉತ್ಸವ ಮೂರ್ತಿ ಜನರಿಗೆ ಕಾಣಿಸುವುದಿಲ್ಲ. ಹಾಗಾಗಿ ಎಚ್ಚರಿಕೆಯಿಂದ ಅಲಂಕಾರ ಮಾಡುತ್ತೇವೆ. ಈ ವರ್ಷ ನಮ್ಮ ಸೇವೆಗೆ 25 ವರ್ಷ ಪೂರೈಸುತ್ತಿರುವುದು ಪುಣ್ಯದ ಕೆಲಸವೆಂದು ಭಾವಿಸುತ್ತೇವೆ ಎಂದರು.

ಪಾರಂಪರಿಕ ನೃತ್ಯ ಸಮ್ಮಿಲನದ ಮೂಲಕ ಅರಮನೆ ವೇದಿಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತೆರೆ



ಮೈಸೂರಿನ ವಿವಿಧ ನೃತ್ಯ ಶಾಲೆಗಳ ಕಲಾವಿದರು 'ಪಾರಂಪರಿಕ ನೃತ್ಯ ಸಮ್ಮಿಲನ' ಕಾರ್ಯಕ್ರಮ ಪ್ರಸ್ತುತಪಡಿಸಿದರು.

ಮೈಸೂರು, ಅ.3(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಅಂಬಾ ವಿಲಾಸ ಅರಮನೆ ಅಂಗಳದ ಪ್ರಧಾನ ವೇದಿಕೆಯಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸೋಮವಾರ ವೈಭವದ ತೆರೆ ಬಿದ್ದಿತು.

ನೃತ್ಯ ವಿದ್ಯಾಪೀಠ, ನಂದನ ಸಂಸ್ಥೆ, ನಾದ ವಿದ್ಯಾಲಯ, ಶ್ರೀ ದುರ್ಗಾ ಅಕಾಡೆಮಿ ಸೇರಿದಂತೆ ಮೈಸೂರಿನ ಹಲವು ತಂಡಗಳ ಕಲಾವಿದರು 'ಪಾರಂಪರಿಕ ನೃತ್ಯ ಸಮ್ಮಿಲನ' ಕಾರ್ಯಕ್ರಮದ ಮೂಲಕ ಈ ಬಾರಿಯ ಅರಮನೆ ವೇದಿಕೆಯ ಸಾಂಸ್ಕೃತಿಕ ವೈಭವ ತೆರೆ ಕಂಡಿತು. 'ಸಂಸ್ಕೃತಿ ನೃತ್ಯ ಶಾಲೆ'ಯ ವಿದುಷಿ ಭುವನೇಶ್ವರಿ ಶಿಷ್ಯ ವೃಂದ ಪ್ರಸ್ತುತಪಡಿಸಿದ 'ಭರತನಾಟ್ಯ' ಆಕರ್ಷಕವಾಗಿತ್ತು. ವಿವಿಧ ನೃತ್ಯ ಸಂಸ್ಥೆಗಳ ಕಲಾವಿದರು ವಿಭಿನ್ನ ನೃತ್ಯ ಪ್ರಸ್ತುತಿಯೊಂದಿಗೆ ಪ್ರೇಕ್ಷಕರಿಗೆ ಮುದ ನೀಡಿದರು.

ಭಾರತದ ಬಣ್ಣಗಳ ಸೊಬಗು: ಇದಕ್ಕೂ ಮೊದಲು ಪುಣೆಯಲ್ಲಿ ನೆಲೆಸಿರುವ ನಂದಿನಿ ರಾವ್ ಗುಜರ್ ಅವರು ಸಹ ಗಾಯಕರೊಂದಿಗೆ ಪ್ರಸ್ತುತಪಡಿಸಿದ 'ಕಲರ್ಸ್ ಆಫ್ ಇಂಡಿಯಾ' ವಿಶೇಷ ಸಂಗೀತ ಕಾರ್ಯಕ್ರಮ ಪ್ರೇಕ್ಷಕರಿಗೆ ಕರ್ಣಾನಂದದ ಜೊತೆಗೆ ಮನಸ್ಸನ್ನು ಹಗುರಾಗಿಸಿದಂತೆ ಕಂಡುಬಂತು. ನಂದಿನಿ ರಾವ್ ಅವರ ಸವಿರಾದ ಕಂಠದಲ್ಲಿ ಮೂಡಿಬಂದ ಪ್ರತಿಯೊಂದು ಹಾಡುಗಳನ್ನು ಅತೀವ ಆಸಕ್ತಿಯಿಂದ ಆಸ್ವಾಧಿಸಿ, ಚಪ್ಪಾಳೆ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. 'ಶಾರದೆ ಗಾನ ಶೃಂಗೇರಿಯ ಧ್ಯಾನ...' ಕೃತಿಯನ್ನು ಹಾಡಿದ ನಂದಿನಿ ರಾವ್, ಮಹಾರಾಷ್ಟ್ರದಲ್ಲಿ ಶಾರದೆಯನ್ನು ಧ್ಯಾನಿಸುವ ಪರಿಯನ್ನು 'ಆಶಾ ಭೋಸ್ಲೆ' ಅವರು ಹಾಡಿರುವ 'ಜಯಶಾರದೆ...' ಗೀತೆ ಮೂಲಕ ಪ್ರೇಕ್ಷಕರಿಗೆ ತಿಳಿಸಿದರು.


ಗಣಪತಿ ಸಚ್ಚಿದಾನಂದ ಶ್ರೀಗಳ ರಚನೆ 'ಶ್ರೀ ಲಲಿತಾ ಧೀ ದೀನಿತಾ...' ಕೃತಿಯನ್ನು ಹಾಡುವಾಗ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಆದಿಯಾಗಿ ಎಲ್ಲಾ ಗಣ್ಯರು, ಪ್ರೇಕ್ಷಕರು ಚಪ್ಪಾಳೆ ಮೂಲಕ ದೇವಿ ಸ್ಮರಣೆಯಲ್ಲಿ ಭಾಗಿಯಾದರು. ಇದೇ ವೇಳೆ ನಂದಿನಿ ರಾವ್ ಸಂಸ್ಕೃತದ 'ಲಲಿತಾ ಲಲಿತಾ ಶ್ರೀ ಲಲಿತಾ...' ಸರಳ ಸ್ತೋತ್ರವನ್ನು ಪ್ರೇಕ್ಷಕರಿಗೆ ಹೇಳಿಕೊಟ್ಟು ತಾಳದೊಂದಿಗೆ ಹಾಡಿಸಿದರು. 'ಸ್ವಾಗತಂ ಕೃಷ್ಣ... ಶರಣಾಗತಂ ಕೃಷ್ಣ...' ಗೀತೆಯನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರಲ್ಲದೆ, ಕಾಶ್ಮೀರಿ ಆರತಿ, ಬೆಂಗಾಲಿ ಆರತಿ, ಮಹಾರಾಷ್ಟ್ರ ಆರತಿ ಹೀಗೆ ವಿವಿಧೆಡೆಯ ದೇವಿ ಆರತಿ ಗೀತೆಯ ತುಣುಕನ್ನು ಹಾಡಿದರು. ಈ ವೇಳೆ ಎಲ್ಲರೂ ಮೊಬೈಲ್ ಟಾರ್ಚ್ ಆನ್ ಮಾಡಿ, ಆರತಿ ಹಾಡಿಗೆ ತಲೆದೂಗಿದರು. ಮೈಸೂರು ಸಂಸ್ಥಾನದ ಗೀತೆಯಾಗಿದ್ದ 'ಕಾಯೌ ಶ್ರೀ ಗೌರಿ, ಶಂಕರಿ...' ಗೀತೆಯೊಂದಿಗೆ ಸಂಗೀತ ರಸದೌತಣಕ್ಕೆ ವಿರಾಮ ನೀಡಿದರು.

ಭಜನ್ ಸಾಮ್ರಾಟ್ ಗಜ಼ಲ್ ಮೋಡಿ: ಭಜನ್ ಸಾಮ್ರಾಟ್ ಎಂದೇ ಪ್ರಸಿದ್ಧರಾಗಿರುವ ಪದ್ಮಶ್ರೀ ಅನೂಪ್ ಜಲೋಟ ಅವರು ಗಜ಼ಲ್ ಮೂಲಕ ನೆರೆದಿದ್ದವರ ಮೋಡಿ ಮಾಡಿದರು. ಸಹ ಗಾಯಕಿ, ಪಕ್ಕ ವಾದ್ಯಗಳ ಸಹಕಾರದೊಂದಿಗೆ 'ಇತ್ನೀ ಶಕ್ತಿ ಹಮೇ ದೇನಾ ದಾತಾ...', 'ದಾಮಾ ದಮ್ ಮಸ್ತ್ ಕಲಂದರ್...', 'ಪ್ರಭುಜೀ...ಪ್ರಭುಜೀ...' ಸೇರಿದಂತೆ ಹಲವು ಭಜನಾ ಗೀತೆಗಳನ್ನು ಭಾವಪೂರ್ಣವಾಗಿ ಪ್ರಸ್ತುತಪಡಿಸಿದರು.



ಪುಣೆಯ ನಂದಿನಿ ರಾವ್ ಗುಜರ್ ಹಾಗೂ ತಂಡದವರು ಪ್ರಸ್ತುತಪಡಿಸಿದ 'ಕಲರ್ಸ್ ಆಫ್ ಇಂಡಿಯಾ' ಸಂಗೀತ ಕಾರ್ಯಕ್ರಮ.

ವಿಶೇಷ ಪ್ರತಿಭೆ ಅನಾವರಣ: ಪ್ರಧಾನ ವೇದಿಕೆಯಲ್ಲಿ ಕಾರ್ಯಕ್ರಮ ಆರಂಭವಾಗುವ ಮುನ್ನ ಪಕ್ಕದ ಕಿರು ವೇದಿಕೆಯಲ್ಲಿ ವಿಶೇಷ ಚೇತನ ಕಲಾವಿದರು ಸೃಷ್ಟಿಸಿದ 'ಸಂಗೀತ–ನೃತ್ಯ ವೈಭವ'ವನ್ನು ಕಂಡು ನೆರೆದಿದ್ದವರು ನಿಬ್ಬೆರಗಾದರು. ಅಂಗ ವೈಕಲ್ಯತೆ ಎಂದಿಗೂ ಪ್ರತಿಭೆಯನ್ನು ತುಳಿಯುವುದಿಲ್ಲ ಎನ್ನುವುದನ್ನು ತಮ್ಮ ಕಲಾಪ್ರತಿಭೆ ಮೂಲಕ ಸಾಬೀತುಪಡಿಸಿದರು. ಶಾಸ್ತ್ರೀಯ ಸಂಗೀತ, ಚಿತ್ರಗೀತೆ, ಭರತನಾಟ್ಯ, ಸುಗಮ ಸಂಗೀತ ಹೀಗೆ ಹಲವು ಸಾಂಸ್ಕೃತಿಕ ಪ್ರಕಾರಗಳಲ್ಲಿ ಸಾಧಿಸುವ ಪ್ರಾವೀಣ್ಯತೆಯನ್ನು ಕಣ್ಣಿಗೆ ಕಟ್ಟಿದರು. 'ನಿನ್ನ ಕಂಗಳಾ ಬಿಸಿಯ ಹನಿಗಳು...', 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೆ ರಾಜಕುಮಾರ...' ಎಂದು ಹಾಡುವ ಮೂಲಕ ಪುನೀತ್ ರಾಜ್ ಕುಮಾರ್ ಅವರನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಪ್ರೇಕ್ಷಕರನ್ನೂ ಭಾವುಕಗೊಳಿಸಿದರು.



ಭಜನ್ ಸಾಮ್ರಾಟ್ ಖ್ಯಾತಿಯ ಪದ್ಮಶ್ರೀ ಅನೂಪ್ ಜಲೋಟ ಅವರು 'ಗಜ಼ಲ್' ಮೋಡಿ ಮಾಡಿದರು.

8 ದಿನ ರಸದೌತಣ: ದಸರಾ ಉತ್ಸವಕ್ಕೆ ಚಾಲನೆ ದೊರೆತ ಸೆ.26ರಿಂದಲೇ ಅರಮನೆ ವೇದಿಕೆ ಸೇರಿದಂತೆ ವಿವಿಧ 9 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆರಂಭವಾಗಿತ್ತು. 8 ದಿನಗಳ ಕಾಲ ನಾದಸ್ವರ, ವೀರಭದ್ರ ಕುಣಿತ, ಕಂಸಾಳೆ, ಸುಗಮ ಸಂಗೀತ, ನೃತ್ಯ ರೂಪಕ, ಭಕ್ತಿ ಸಂಗೀತ, ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಭರತ ನಾಟ್ಯ, ದಾಸರಪದ, ಜಾನಪದ ಗಾಯನ, ಪೊಲೀಸ್ ಸಮೂಹ ವಾದ್ಯ ಮೇಳ, ವಚನ ಗಾಯನ, ವಿಶ್ವ ಸಂಗೀತ, ಒಡೆಯರ್ ಕೃತಿಗಳ ಗಾನ ವಾದ್ಯ ವೈಭವ, ರಂಗ ಗೀತೆ, ನವಶಕ್ತಿ ನೃತ್ಯ ರೂಪಕ, ಒಡಿಸ್ಸಿ ನೃತ್ಯ ಸೇರಿದಂತೆ ವೈವಿದ್ಯಮಯ ಕಾರ್ಯಕ್ರಮಗಳು ಅರಮನೆ ವೇದಿಕೆಯಲ್ಲಿ ಮೇಳೈಸಿತ್ತು. ಕಳೆದ ಭಾನುವಾರ 'ಸೂರ್ಯೋದಯದಿಂದ ಸೂರ್ಯಾಸ್ತ'ದವರೆಗೆ ನಡೆದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು ಈ ಬಾರಿ ಕೆಲ ವರ್ಷಗಳಿಂದ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸದ ಕಲಾವಿದರಿಗೆ ಅವಕಾಶ ನೀಡಲಾಗಿತ್ತು ಅದರಲ್ಲೂ ಬಹುತೇಕ ಕಲಾವಿದರು ಮೊದಲ ಬಾರಿ ಪಾಲ್ಗೊಂಡಿದ್ದರಿಂದ ಕಾರ್ಯಕ್ರಮಗಳಲ್ಲಿ ನವೀನತೆ ಹಾಗೂ ವಿಭಿನ್ನತೆ ಕಂಡುಬಂದಿತು.

'ಆಯುಧಪೂಜೆ ಹಿನ್ನೆಲೆಯಲ್ಲಿ ಅರಮನೆ ವೇದಿಕೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಾತ್ರ ತೆರೆ ಬಿದ್ದಿದ್ದು, ಜಗನ್ಮೋಹನ ಅರಮನೆ, ಕಲಾಮಂದಿರ, ಪುರಭವನ, ಚಿಕ್ಕಗಡಿಯಾರ ಸೇರಿದಂತೆ ಉಳಿದೆಲ್ಲಾ ವೇದಿಕೆಗಳಲ್ಲಿ ಮಂಗಳವಾರವೂ ಕಾರ್ಯಕ್ರಮಗಳನ್ನು ಸವಿಯಬಹುದು.



ಪ್ರೇಕ್ಷಕರ ನಿಬ್ಬೆರಗಾಗಿಸಿದ ವಿಶೇಷ ಚೇತನ ಕಲಾವಿದರ 'ಸಂಗೀತ–ನೃತ್ಯ ವೈಭವ'

'ಐ ಲವ್ ಯಾದವಗಿರಿ' ಆಕರ್ಷಕ ಸೆಲ್ಫಿ ಸ್ಪಾಟ್



ಮೈಸೂರು, ಅ.3(ಎಂಕೆ)– ಮೈಸೂರಿನ ಆಕಾಶವಾಣಿ ವೃತ್ತದಲ್ಲಿ 'ಐ ಲವ್ ಯಾದವಗಿರಿ' ಸೆಲ್ಫಿ ಸ್ಪಾಟ್ ಅನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ನಗರ ಪಾಲಿಕೆ ವತಿಯಿಂದ 5 ಲಕ್ಷ ರೂ. ಹಾಗೂ ಸ್ಥಳೀಯ ಸಂಸ್ಥೆ ಸಹಕಾರದೊಂದಿಗೆ ಈ ಸೆಲ್ಫಿ ಸ್ಪಾಟ್ ನಿರ್ಮಾಣ ಮಾಡಲಾಗಿದೆ ಎಂದರು. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಈ ರೀತಿಯ ಸೆಲ್ಫಿ ಸ್ಪಾಟ್‌ಗಳು ಹೆಚ್ಚಾಗಬೇಕು. ಸಂಜೆ ವೇಳೆ ಇಲ್ಲಿನ ನಿವಾಸಿಗಳು ವಾಯು ವಿಹಾರದ ಬಳಿಕ ವಿಶ್ರಾಂತಿ ಪಡೆದು, ಫೋಟೋ ಕ್ಲಿಕ್ಕಿಸಿಕೊಳ್ಳಬಹುದು. ಐ ಲವ್ ಯಾದವಗಿರಿಯಂತೆ ಎಲ್ಲಾ ಬಡಾವಣೆಗಳನ್ನು ಆಯಾ ಬಡಾವಣೆ ನಿವಾಸಿಗಳು ಪ್ರೀತಿಯಿಂದ ಶುಚಿಯಾಗಿ ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಮೇಯರ್ ಶಿವಕುಮಾರ್, ಉಪ ಮೇಯರ್ ಜಿ. ರೂಪ, ಪಾಲಿಕೆ ಸದಸ್ಯ ರವೀಂದ್ರ, ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ ಮತ್ತಿತರರು ಇದ್ದರು.



ಯಶಸ್ವಿಯಾಗಿ ನೆರವೇರಿದ ಜಂಬೂ ಸವಾರಿ ಅಂತಿಮ ತಾಲೀಮು...

● ಸಿಡಿಮದ್ದು ಸದ್ದಿಗೆ ಜಗ್ಗದ ಗಜ, ಅಶ್ವ ಪಡೆ ● ಶಿಸ್ತಿನಿಂದ ಸಾಗಿ ಅಧಿಕಾರಿಗಳಲ್ಲಿ ವಿಶ್ವಾಸ ಮೂಡಿಸಿದ ಮೆರವಣಿಗೆ

ಮೈಸೂರು,ಅ.3(ಎಂಟಿವೈ)– ನಾಡಹಬ್ಬ ದಸರಾ ಜಂಬೂಸವಾರಿಗೆ ಇನ್ನೊಂದು ದಿನ ಬಾಕಿ ಇರುವಂತೆ ಸೋಮವಾರ ಗಜಪಡೆ ಹಾಗೂ ಅಶ್ವಪಡೆಗಳೊಂದಿಗೆ ಅಂತಿಮ ಹಂತದ ಅಂಬಾರಿಯ ಪುಷ್ಪಾರ್ಚನೆ ತಾಲೀಮು ಯಶಸ್ವಿಯಾಗಿ ನೆರವೇರಿಸಲಾಯಿತು.

ಜಂಬೂಸವಾರಿಗೆ ಕ್ಷಣಗಣನೆ ಆರಂಭವಾಗಿದ್ದು, ಅಂತಿಮ ಹಂತದ ಸಿದ್ಧತಾ ಕಾರ್ಯ ಭರದಿಂದ ಸಾಗುತ್ತಿರುವ ಬೆನ್ನಲ್ಲೇ ಜಂಬೂಸವಾರಿ ಮೆರವಣಿಗೆಗೆ ಗಜಪಡೆ ಹಾಗೂ ಅಶ್ವಪಡೆಯನ್ನು ಸಜ್ಜುಗೊಳಿಸಲು ಇಂದು ನಡೆಸಿದ ಅಂತಿಮ ತಾಲೀಮು ಪ್ರಮುಖ ಪಾತ್ರವಹಿಸಿದ್ದು, ಪುಷ್ಪಾರ್ಚನೆ ವೇಳೆ ಗಜ ಹಾಗೂ ಅಶ್ವಪಡೆ ಸಾಗುವ ದಿಕ್ಕು ದೆಸೆ ನಿರ್ಧರಿಸಲಾಯಿತು. ಅರಮನೆಯ ಮುಂಭಾಗದ ಆವರಣದಲ್ಲಿ ನಡೆದ ಜಂಬೂಸವಾರಿಯ ಅಂತಿಮ ಹಂತದ ಪೂರ್ಣ ಪ್ರಮಾಣದ ತಾಲೀಮಿನಲ್ಲಿ ಶಾಸಕ ಎಲ್.ನಾಗೇಂದ್ರ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ಕಾವೇರಿ, ಚೈತ್ರಳ ಮೇಲೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಪೊಲೀಸ್ ಬ್ಯಾಂಡ್ ತಂಡ ರಾಷ್ಟ್ರಗೀತೆಯನ್ನು ನುಡಿಸಿದರೆ, ಕೋಟೆ ಮಾರಮ್ಮ ದೇವಾಲಯದ ಬಳಿ ಪಾರ್ಕಿಂಗ್ ಸ್ಥಳದಲ್ಲಿ ಫಿರಂಗಿ ದಳದ ಸಿಬ್ಬಂದಿ ಒಂದೇ ನಿಮಿಷದಲ್ಲಿ 21 ಸುತ್ತು ಕುಶಾಲ ತೋಪು ಸಿಡಿಸಿದರು. ತಾಲೀಮಿನಲ್ಲಿ 11 ಆನೆ, ಅಶ್ವಾರೋಹಿ ದಳದ 34 ಕುದುರೆ, ಪೊಲೀಸ್ ಬ್ಯಾಂಡ್ ವಾದನದ ತಂಡ, 240 ಮಂದಿ ಪೊಲೀಸ್ ಪೇದೆಯುಳ್ಳ





8 ಪೊಲೀಸ್ ತುಕಡಿಗಳು ಪಾಲ್ಗೊಂಡು, ಜಂಬೂಸವಾರಿ ದಿನ ಕ್ರಮಬದ್ಧವಾಗಿ ಸಾಗುವಂತೆ ಹೆಜ್ಜೆ ಹಾಕಿದವು.

ಅರಮನೆಯ ಆವರಣದಲ್ಲಿರುವ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರ ನಿವಾಸದ ಬಳಿಯಿರುವ ಅಂಬಾರಿ ಕಟ್ಟುವ ಸ್ಥಳದಿಂದ ಪೊಲೀಸ್ ತುಕಡಿಯೊಂದಿಗೆ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಸ್ಥಳಕ್ಕೆ ಗಜಪಡೆಯನ್ನು ಕರೆತರಲಾಯಿತು. ಅಂಬಾರಿ ಆನೆ ಅಭಿಮನ್ಯುವಿನ ಮೇಲೆ ಪುಷ್ಪಾರ್ಚನೆ ಮಾಡಲು ಮುಂದಾಗುತ್ತಿದ್ದಂತೆ ಪೊಲೀಸ್ ಬ್ಯಾಂಡ್ ತಂಡವು ರಾಷ್ಟ್ರಗೀತೆ ನುಡಿಸುತ್ತಿದ್ದಂತೆಯೇ ಕೋಟೆ ಮಾರಮ್ಮ ದೇವಾಲಯದ ಬಳಿ ಫಿರಂಗಿ ದಳದ ಸಿಬ್ಬಂದಿ ಕುಶಾಲತೋಪು ಸಿಡಿಸಿದರು. ಈ ವೇಳೆ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗುವ ಎಲ್ಲಾ ಆನೆ ಹಾಗೂ ಅಶ್ವಪಡೆ ಜಗ್ಗದೇ ಶಾಂತ ರೀತಿಯಲ್ಲಿ ಹೆಜ್ಜೆ ಹಾಕುವ ಮೂಲಕ ಜಂಬೂಸವಾರಿಗೆ ನಾವ್ ರೆಡಿ ಸಂದೇಶ ರವಾನಿಸಿದವು. ಇಂದು ನಡೆದ ಪೂರ್ಣ ಪ್ರಮಾಣದ ತಾಲೀಮಿನಲ್ಲಿ ಪುಷ್ಪಾರ್ಚನೆ ಬಳಿಕ ಕೋಟೆ ಆಂಜನೇಯಸ್ವಾಮಿ ದೇವಾಲಯದ ದ್ವಾರದವರೆಗೆ ಸರದಿ ಸಾಲಿನಲ್ಲಿ ಗಜ, ಅಶ್ವ ಪಡೆ ಸಾಗಿದವು. ಹೀಗೆ ಇಂದು ಎರಡು ಬಾರಿ ತಾಲೀಮು ನಡೆಸಲಾಯಿತು.


ಈ ಸಂದರ್ಭದಲ್ಲಿ ಡಿಸಿಎಫ್ ಡಾ.ವಿ.ಕರಿಕಾಳನ್, ಸಿಎಆರ್ ಡಿಸಿಪಿ ಶಿವರಾಜು, ಅರಮನೆಯ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಆನೆಗಳು ಆರೋಗ್ಯದಿಂದಿವೆ: ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ಜಂಬೂಸವಾರಿ ಮೆರವಣಿಗೆಯ ಅಂತಿಮ ಹಂತದ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ. 11 ಆನೆಗಳು ತಾಲೀಮಿನಲ್ಲಿ ಪಾಲ್ಗೊಂಡಿದ್ದವು. ಇಂದು ನಡೆದ ಪುಷ್ಪಾರ್ಚನೆ ವೇಳೆ ಒಂದೇ ನಿಮಿಷದಲ್ಲಿ 21 ಬಾರಿ ಸಿಡಿಮದ್ದು ಸಿಡಿಸಲಾಗಿದೆ. ಇದರಿಂದ ಜಂಬೂಸವಾರಿ ದಿನದ ಶಬ್ದದ ಬಗ್ಗೆ, ಅದಕ್ಕೆ ಹೊಂದಿಕೊಳ್ಳಲು ಅಣಿಗೊಳಿಸಲಾಗಿದೆ. ಹಾಗಾಗಿ ಇಂದು ನಡೆದ ಯಶಸ್ವಿ ತಾಲೀಮು ಗಜಪಡೆ ಸಜ್ಜಾಗಿಸಲು ಸಹಾಯಕಾರಿಯಾಗಿದೆ ಎಂದರು. ಜಂಬೂಸವಾರಿಯಲ್ಲಿ 9 ರಿಂದ 10 ಆನೆಗಳನ್ನು ಕಳುಹಿಸಲು ನಿರ್ಧರಿಸಲಾಗಿದೆ. ನಿಶಾನೆ ಆನೆಯಾಗಿ ಅರ್ಜುನ, ನೌಪತ್ ಆನೆಗಳಾಗಿ ಮಹೇಂದ್ರ, ಭೀಮಾ, ಪಾರ್ಥಸಾರಥಿ, ಸಾಲಾನೆಯಾಗಿ ಗೋಪಿ, ಗೋಪಾಲಸ್ವಾಮಿ, ಧನಂಜಯ ಸಾಗುತ್ತದೆ. ಆನೆಗಳು ಮೆರವಣಿಗೆಗೆ ಸಜ್ಜಾಗಿದ್ದು, ಎಲ್ಲವೂ ಆರೋಗ್ಯದಿಂದ ಕೂಡಿವೆ. ಅರಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯ ಬೆಳಗ್ಗೆ 11 ಗಂಟೆಗೆ ಮುಗಿಯುವುದರಿಂದ ಪಟ್ಟದ ಆನೆ ಧನಂಜಯ, ನಿಶಾನೆ ಆನೆ ಭೀಮಾನನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಗುತ್ತಿದೆ. ಭಾರಿ ಶಬ್ದ, ಜನಜಂಗುಳಿ ನಡುವೆ ಅಳುಕಿಲ್ಲದೇ ಸಾಗುವ ಆನೆಗಳನ್ನೇ ಆಯ್ಕೆ ಮಾಡಲಾಗಿದೆ ಎಂದರು.

ಯಶಸ್ವಿಯಾಗಿ ನೆರವೇರಲಿದೆ..

ದಸರಾ ಮಹೋತ್ಸವದ ಸಿದ್ಧತಾ ಕಾರ್ಯ ಅಂತಿಮವಾಗಿದೆ. ಮುಖ್ಯಮಂತ್ರಿಗಳ ಆಗಮನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಜಂಬೂಸವಾರಿಯ ಯಶಸ್ಸಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಇಂದು ಅಂತಿಮ ಹಂತದ ಪುಷ್ಪಾರ್ಚನೆಯ ತಾಲೀಮು ನಡೆಸಲಾಗಿದೆ. ಈ ಬಾರಿ ದಸರಾ ಅದ್ಧೂರಿಯಾಗಿ ನೆರವೇರುತ್ತಿದೆ.

– **ಎಲ್.ನಾಗೇಂದ್ರ,** ಶಾಸಕ



ಚಾಮುಂಡಿಬೆಟ್ಟದಲ್ಲಿ ಯೋಗ ಚಾರಣ, ದುರ್ಗಾ ನಮಸ್ಕಾರ

ಮೈಸೂರು, ಅ. 3(ಆರ್‌ಕೆ)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನೂರಾರು ಮಂದಿ ಯೋಗ ಪ್ರದರ್ಶನ ಮಾಡಿ ದುರ್ಗಾ ದೇವಿಗೆ ನಮಸ್ಕರಿಸಿದರು.

ಆಯುಷ್ ಇಲಾಖೆ, ದಸರಾ ಯೋಗ ಉಪ ಸಮಿತಿ, ಪತಂಜಲಿ ಯೋಗ ಶಿಕ್ಷಣ ಸಂಸ್ಥೆ ಹಾಗೂ ಯೋಗ ಫೆಡರೇಷನ್ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಿದ್ದ ಯೋಗ ಚಾರಣ ಕಾರ್ಯಕ್ರಮವನ್ನು ಚಾಮುಂಡೇಶ್ವರಿ ದೇವಸ್ಥಾನದ ಸನ್ನಿಧಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಮೆಟ್ಟಿಲು ಹತ್ತಿದ ನೂರಾರು ಮಂದಿ ವಿವಿಧ ಭಂಗಿಯ ಯೋಗ ಪ್ರದರ್ಶನ ಮಾಡಿ ದುರ್ಗಾ ನಮಸ್ಕಾರದೊಂದಿಗೆ ಅಂತ್ಯಗೊಳಿಸಿದರು. ಈ ಸಂದರ್ಭ ಮಾತನಾಡಿದ ಸಚಿವರು, ಕಳೆದ ಎರಡು ವರ್ಷಗಳಿಂದ ಕೋವಿಡ್‌ನಿಂದಾಗಿ ಸರಳ ದಸರಾ ಆಚರಿಸಬೇಕಾಯಿತು. ಈ ಬಾರಿ ದಸರಾ ಕಳೆಗಟ್ಟಿದೆ. ಎಲ್ಲಾ ಕಾರ್ಯಕ್ರಮಗಳೂ ಅಚ್ಚುಕಟ್ಟಾಗಿ ನಡೆದಿವೆ.



ಅದಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.

ವಿಜಯದಶಮಿ ಮೆರವಣಿಗೆಗೆ ಸಕಲ ಸಿದ್ಧತೆ ಮಾಡಲಾಗಿದೆ. ಮುಖ್ಯಮಂತ್ರಿಗಳು ನಾಳೆ (ಅ. 4)ಯೇ ಮೈಸೂರಿಗೆ ಆಗಮಿಸಲಿದ್ದು, ನಿಗದಿಯಂತೆ ಮೆರವಣಿಗೆಗೆ ಚಾಲನೆ ನೀಡುವರು. ಇಂದು ದಸರಾ ಮಹೋತ್ಸವದ ಬಹುತೇಕ ಎಲ್ಲಾ ಕಾರ್ಯಕ್ರಮಗಳೂ ಅಂತ್ಯವಾಗಿವೆ ಎಂದು ಅವರು ನುಡಿದರು.

ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಮಾಜಿ ಅಧ್ಯಕ್ಷ ಅಪ್ಪಣ್ಣ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ದಸರಾ ವಿಶೇಷ ರೈಲುಗಳು

ಕ್ರಮ ಸಂಖ್ಯೆ	ರೈಲು ನಂ.	ನಿಲ್ದಾಣ		ಹೊರಡುವ ವೇಳೆ	ದಿನಗಳು		ಟ್ರಿಪ್‌ಗಳ ಸಂಖ್ಯೆ
		ಇಂದ	ಗೆ		ಇಂದ	ಗೆ	
1	07302	ಮೈಸೂರು	ಚಾಮರಾಜನಗರ	8.20	30.9.22	6.10.22	7
	07301	ಚಾಮರಾಜನಗರ	ಮೈಸೂರು	10.55	30.9.22	6.10.22	7
2	06276	ಮೈಸೂರು	ಚಾಮರಾಜನಗರ	12.15	7.10.22	7.10.22	1
	06275	ಚಾಮರಾಜನಗರ	ಮೈಸೂರು	18.35	7.10.22	7.10.22	1
3	06247	ಮೈಸೂರು	ಚಾಮರಾಜನಗರ	23.30	5.10.22	5.10.22	1
	06248	ಚಾಮರಾಜನಗರ	ಮೈಸೂರು	5.00	6.10.22	6.10.22	1
4	06300	ಮೈಸೂರು	ನಂಜನಗೂಡು	8.20	7.10.22	7.10.22	1
	06299	ನಂಜನಗೂಡು	ಮೈಸೂರು	11.00	7.10.22	7.10.22	1
5	06281	ಮೈಸೂರು	ಚಾಮರಾಜನಗರ	23.30	5.10.22	5.10.22	1
6	06215	ಮೈಸೂರು	ಕೆಎಸ್‌ಆರ್ ಬೆಂಗಳೂರು	23.30	1.10.22	5.10.22	5
	06216	ಕೆಎಸ್‌ಆರ್ ಬೆಂಗಳೂರು	ಮೈಸೂರು	3.00	2.10.22	6.10.22	5
7	06522	ಮೈಸೂರು	ಬೆಂಗಳೂರು ಕ್ಯಾಂಟ್	15.30	30.9.22	6.10.22	7
	06521	ಬೆಂಗಳೂರು ಕ್ಯಾಂಟ್	ಮೈಸೂರು	11.30	30.9.22	6.10.22	7
8	06279	ಮೈಸೂರು	ಕೆಎಸ್‌ಆರ್ ಬೆಂಗಳೂರು	20.40	5.10.22	5.10.22	1
9	06251	ಮೈಸೂರು	ಮಹಿಲಾದುತುರೈ	23.45	30.9.22	30.9.22	2
					21.10.22	21.10.22	2
	06252	ಮಹಿಲಾದುತುರೈ	ಮೈಸೂರು	18.45	22.10.22	22.10.23	1

——— ಪ್ರಪಂಚದ ಎಲ್ಲಾ ಭಾಷೆಗಳ ಸಾಹಿತ್ಯದ ಪೈಕಿ ———

ಮುಂಚೂಣಿಯಲ್ಲಿ ಕನ್ನಡ, ಭಾರತೀಯ ಭಾಷೆಗಳ ಸಾಹಿತ್ಯ

ದಸರಾ ಪ್ರಧಾನ ಕವಿಗೋಷ್ಠಿ ಉದ್ಘಾಟಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ದಸರಾ ಅಂಗವಾಗಿ ಕವಿಗೋಷ್ಠಿ ಉಪಸಮಿತಿ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಪ್ರಧಾನ ಕವಿಗೋಷ್ಠಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಉದ್ಘಾಟಿಸಿದರು.

ಮೈಸೂರು,ಅ.3(ಪಿಎಂ)– ಪ್ರಪಂಚದ ಎಲ್ಲಾ ಭಾಷೆಗಳ ಸಾಹಿತ್ಯದ ಪೈಕಿ ಕನ್ನಡ ಮತ್ತು ಭಾರತೀಯ ಭಾಷೆಗಳ ಸಾಹಿತ್ಯ ಮುಂಚೂಣಿಯಲ್ಲಿದೆ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆದ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ದಸರಾ ಅಂಗವಾಗಿ ಕವಿಗೋಷ್ಠಿ ಉಪಸಮಿತಿ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಪ್ರಧಾನ ಕವಿಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲಿ 28 ಲಿಪಿ ಹೊಂದಿರುವ ಭಾಷೆಗಳು ಇವೆ. ಕೆಲವು ದಿನಗಳ ಹಿಂದೆ ಪ್ರಪಂಚದ ಎಲ್ಲಾ ಭಾಷೆಗಳ ಕವಿಗಳು ಒಳಗೊಂಡ ಸಮ್ಮೇಳನ ಆಯೋಜಿಸಿದ್ದೆವು. ಈ ಸಮ್ಮೇಳನದಲ್ಲಿ ಕನ್ನಡ ಮತ್ತು ಭಾರತೀಯ ಭಾಷೆಗಳ ಸಾಹಿತ್ಯ ಉತ್ಕೃಷ್ಟವಾಗಿರುವ ಅಂಶ ಬೆಳಕಿಗೆ ಬಂದಿತು. ಅದರಲ್ಲೂ ಕನ್ನಡದ ಸಾಹಿತ್ಯ ಭಾರತದ ಯಾವುದೇ ಭಾಷೆಯ ಸಾಹಿತ್ಯಕ್ಕಿಂತಲೂ ವಿಶಿಷ್ಟವಾಗಿ ಬೆಳೆದಿದೆ ಎಂದು ತಿಳಿಸಿದರು.

ಇತಿಹಾಸ ಗಮನಿಸುವುದಾದರೆ ಸುಮಾರು 1833ರಲ್ಲಿ ಲಾರ್ಡ್ ಮೆಕಾಲೆ ಭಾರತದಲ್ಲಿ ಶಿಕ್ಷಣ ನೀತಿ ಜಾರಿಗೊಳಿಸಿದರು. ಇದಕ್ಕಾಗಿ ರಚಿಸಿದ್ದ ಸಮಿತಿಯಲ್ಲಿದ್ದ ನಾಲ್ವರು ಭಾರತೀಯರು ಇಂಗ್ಲಿಷ್ ಶಿಕ್ಷಣ ಕಲಿಸುವಂತೆ ಕೋರಿದರು. ಇದರ ಪರಿಣಾಮ ದೇಶದಲ್ಲಿ ಮೆಕಾಲೆ, ಇಂಗ್ಲಿಷ್ ಶಿಕ್ಷಣ ಕಡ್ಡಾಯಗೊಳಿಸಿದರು. ಅಲ್ಲಿಯತನಕ ವಿದ್ಯೆ ಪಡೆಯುವಲ್ಲಿ ನಮ್ಮಲ್ಲಿ ಮೊದಲು ದೊಡ್ಡ ನಿಘಂಟು ಅಧ್ಯಯನ ಮಾಡಿಸುವ ಪರಿಪಾಠವಿತ್ತು. ಅದೇ ವಿಧಾನ ನಮ್ಮದಾಗಿತ್ತು ಎಂದರು.

ನಮ್ಮ ಕಾಲಚಕ್ರ ಮಾನದಂಡದಲ್ಲಿ ವರ್ತಮಾನ ಕಾಲದಲ್ಲೂ ರಾಮ, ಸೀತೆ ಇದ್ದಾರೆ ಎಂಬ ನಂಬಿಕೆ ನಮ್ಮದು. ತಿರುಪತಿ ತಿಮ್ಮಪ್ಪ ತನ್ನ ಮದುವೆಗಾಗಿ ಸಾಲ ಮಾಡಿದ್ದಕ್ಕೆ ನಾವು ಈಗಲೂ ಸಾಲ ತೀರಿಸುತ್ತಿದ್ದೇವೆ. ನಮ್ಮಲ್ಲಿ ಕಾಲವೆಂದರೆ ಒಂದೇ, ಅದು ದೇವರ ಕಾಲ ಯಾವುದಿತ್ತೋ ಅದೇ. ಕೃಷ್ಣ ಈಗಲೂ ನಮ್ಮಲ್ಲಿ ಇದ್ದಾನೆ. ಈ ರೀತಿಯಲ್ಲಿ ನಮ್ಮ ಕಲ್ಪನೆ ಹಾಗೂ ಬ್ರಿಟಿಷರ ಕಲ್ಪನೆಗೂ ವ್ಯತ್ಯಾಸವಿದೆ ಅವರಲ್ಲಿ ಭೂತಕಾಲ, ವರ್ತಮಾನ ಕಾಲ ಹಾಗೂ ಭವಿಷ್ಯ ಕಾಲ ಎಂದಿದ್ದರೆ, ನಮ್ಮಲ್ಲಿ ಭೂತಕಾಲ ಮತ್ತು ವರ್ತಮಾನ ಕಾಲ ಎರಡೇ ಇದೆ. ಹೀಗಾಗಿಯೇ ನಮ್ಮ ಸಾಹಿತ್ಯದಲ್ಲಿ ವರ್ತಮಾನ ಕಾಲವೇ ಮತ್ತೆ ಮತ್ತೆ ಪ್ರತಿಬಿಂಬಿತವಾಗುತ್ತಿತ್ತು ಎಂದು ವಿವರಿಸಿದರು.

ಕಾವ್ಯಾಭಿವ್ಯಕ್ತಿ ಭಾಷೆಗೆ ಭವಿಷ್ಯ: ಅಧ್ಯಕ್ಷತೆ ವಹಿಸಿದ್ದ ಪ್ರಸಿದ್ಧ ಕವಿ ಡಾ.ಹೆಚ್.ಎಸ್. ಶಿವಪ್ರಕಾಶ್ ಮಾತನಾಡಿ, 20 ವರ್ಷಗಳ ಹಿಂದೆ ದಸರಾ ಕವಿಗೋಷ್ಠಿಯನ್ನು ಉದ್ಘಾಟಿಸಿದ್ದೆ ಅಂದಿಗಿಂತ ಇಂದು ಕವಿಗಳ ಸಂಖ್ಯೆ ಹೆಚ್ಚಳಗೊಂಡಿದೆ. ಇದು ಸಂತಸದ ವಿಷಯ. ಯಾವ ಭಾಷೆಯಲ್ಲಿ ಕಾವ್ಯಾಭಿವ್ಯಕ್ತಿ ಉತ್ತಮವಾಗಿರುತ್ತದೋ ಆ ಭಾಷೆಗೆ ಭವಿಷ್ಯ ಇದೆ. ಕನ್ನಡ ಭಾಷೆ, ಇಂಗ್ಲಿಷ್ ಹೊಡೆತಕ್ಕೆ ಸಿಕ್ಕಿ ತತ್ತರಿಸುತ್ತಿದೆ. ಈ ಸಂದರ್ಭದಲ್ಲಿ ಕನ್ನಡ ಭಾಷೆಗೆ ಹೊಸ ಶಕ್ತಿ, ಪುನಶ್ಚೇತನ ನೀಡಬೇಕಾದ ಹೊಣೆ ಕವಿಗಳ ಮೇಲಿದೆ ಎಂದು ನುಡಿದರು.

ಕನ್ನಡ ಕಾವ್ಯಕ್ಕೆ ಸುದೀರ್ಘ ಇತಿಹಾಸವಿದೆ. ಶಿಕ್ಷಣ ಸರ್ವರಿಗೂ ಲಭ್ಯವಿಲ್ಲದ ಸಂದರ್ಭದಲ್ಲೂ ನಮ್ಮಲ್ಲಿ ಜನಶಾಲೆಗಳಾಗಿ ಕೆಲಸ ಮಾಡಿದ ಕೀರ್ತಿ ನಮ್ಮ ಕವಿಗಳಿಗೆ ಸಲ್ಲುತ್ತದೆ. ಸರ್ವಜ್ಞ, ವಚನಕಾರರು ಹಾಗೂ ದಾಸರ ಸಾಹಿತ್ಯ ಓದಿದಾಗ, ಅದು ಕೇವಲ ಮನರಂಜನೆಗೆ ಸೀಮಿತವಾಗದೇ ಜನರಿಗೆ ತಿಳಿವು–ಬೆಳಕು ನೀಡಿವೆ. ಆ ಮೂಲಕ ಇದೇ ಶಿಕ್ಷಣ ಮಾಧ್ಯಮವಾಗಿತ್ತು. ಇಂತಹ ಕನ್ನಡ ಕವಿ ಪರಂಪರೆಗೆ ತಲೆಬಾಗಿ ವಂದಿಸುತ್ತೇನೆ ಎಂದರಲ್ಲದೆ, 'ಖಡ್ಗವಾಗಲಿ ಕಾವ್ಯ' ಶೀರ್ಷಿಕೆಯ ಕವಿತೆ ವಾಚಿಸಿದರು.

ಅತಿಥಿಯಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭಾಗವಹಿಸಿದ್ದರು. ನಾಡಿನ ವಿವಿಧ ಭಾಗಗಳ 30ಕ್ಕೂ ಹೆಚ್ಚು ಕವಿಗಳು ತಮ್ಮ ಕವಿತೆ ವಾಚಿಸಿದರು. ಕನ್ನಡ ಮಾತ್ರವಲ್ಲದೆ, ನಾಡಿನ ಇನ್ನಿತರ ಭಾಷೆಯ ಕವಿತೆ ವಾಚನಕ್ಕೂ ಅವಕಾಶ ಕಲ್ಪಿಸಲಾಗಿತ್ತು. ಹೆಚ್ಚು ಕನ್ನಡ ಕವಿತೆಗಳೇ ಹೊರಹೊಮ್ಮಿದವು. ಶಾಸಕ ಸಿ.ಎಸ್.ನಿರಂಜನಕುಮಾರ್, ಮೇಯರ್ ಶಿವಕುಮಾರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಬಿಜೆಪಿ ಮುಖಂಡರಾದ ಅಪ್ಪಣ್ಣ, ಬಿ.ಎಂ.ರಘು, ದಸರಾ ಕವಿಗೋಷ್ಠಿ ಉಪಸಮಿತಿ ಅಧ್ಯಕ್ಷ ಸಿ.ಬಿ.ಬಸವರಾಜಪ್ಪ, ಉಪಾಧ್ಯಕ್ಷರಾದ ರಾಜಮಣಿ, ಶಿವಣ್ಣ, ಉಪ ವಿಶೇಷಾಧಿಕಾರಿ ಡಾ.ಎಂ. ದಾಸೇಗೌಡ, ಕಾರ್ಯಾಧ್ಯಕ್ಷ ಡಾ.ಎಂ.ಜಿ. ಮಂಜುನಾಥ್ ಮತ್ತಿತರರು ಹಾಜರಿದ್ದರು.

ಕಾವ್ಯ ವಾಚಿಸಿದ ಕಂಬಾರರು...

ಉದ್ಘಾಟನಾ ಭಾಷಣದ ಬಳಿಕ ಡಾ.ಚಂದ್ರಶೇಖರ ಕಂಬಾರ ಅವರು ತಮ್ಮ 'ಜಲರಾಯ' ಶೀರ್ಷಿಕೆಯ ಪದ್ಯ ವಾಚಿಸಿದರು. 'ಜಲರಾಯ ಎಂಬೋದು ಮತ್ಸ್ಯ ರಾಜನ ಹೆಸರು... ಜಲಧಿಮಂಡಲಕವನೆ ರಾಜ... ಹುಟ್ಟಿದೊಡನೆಯೇ ಕಡಲ ಮೆಟ್ಟಿ ನೆಗೆದಾತನಿಗೆ ಜಲಚರ ಹೆದರುವುದು ಸಹಜ...' ಎಂಬ ಕಾವ್ಯವನ್ನು ಪೂರ್ಣ ವಾಚಿಸಿದರು.

ಪ್ರಧಾನ ಕವಿಗೋಷ್ಠಿಯ ವೇದಿಕೆಯಲ್ಲೇ ಕವಯಿತ್ರಿಯೊಬ್ಬರ ಅಸಮಾಧಾನ

ಆಹ್ವಾನಿಸದೇ ಅಗೌರವಿಸಿದ್ದಾರೆಂಬ ಆರೋಪ

ಮೈಸೂರು,ಅ.3(ಪಿಎಂ)– ಪ್ರಧಾನ ಕವಿಗೋಷ್ಠಿ ವೇದಿಕೆ, ಕವಯಿತ್ರಿಯೊಬ್ಬರ ಅಸಮಾಧಾನಕ್ಕೂ ವೇದಿಕೆಯಾದ ಪ್ರಸಂಗ ನಡೆಯಿತು.

ಅನುಮತಿ ಪಡೆಯದೇ ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರು ಮುದ್ರಿಸಲಾಗಿದೆ. ಕನಿಷ್ಠ ಪಕ್ಷ ಆಹ್ವಾನ ಸಹ ನೀಡಿಲ್ಲ ಎಂದು ಬೆಂಗಳೂರು ನಿವಾಸಿ, ಕವಿ ಪಿ.ಚಂದ್ರಿಕಾ ಕವಿತೆ ವಾಚಿಸುವ ಮುನ್ನ ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಂಪರೆಗೆ ಅಕ್ಷರ ಕೂಡಿಸುವ ಕವಿಗಳನ್ನು ಗೌರವದಿಂದ ನಡೆಸಿಕೊಳ್ಳಬೇಕು. ಅನಾರೋಗ್ಯವಿದ್ದರೂ ಕವಿತೆ ವಾಚಿಸಲು ಇಲ್ಲಿಗೆ ಬಂದಿದ್ದೇನೆ. ಕವಿಗೋಷ್ಠಿಗೆ ನನ್ನನ್ನು ಕರೆದಿರಲಿಲ್ಲ. ಕರೆಯನ್ನೂ ಮಾಡಿ ಆಹ್ವಾನಿಸಲಿಲ್ಲ. ಹೀಗಾಗಿ ಗೌರವಧನ, ಪ್ರಯಾಣ ಭತ್ಯೆ ಸ್ವೀಕರಿಸುವುದಿಲ್ಲ ಎಂದು ಹೇಳಿದರು.

ಅವರ ಕವನ ವಾಚನದ ಬಳಿಕ ವೇದಿಕೆ ಪ್ರವೇಶಿಸಿದ ಉಪಸಮಿತಿಯ ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್ ಮಾತನಾಡಿ, 'ವ್ಯಾಟ್ಸಪ್ ಮೂಲಕ ಆಹ್ವಾನ ನೀಡಿದ್ದೇವೆ. ತಪ್ಪಿದ್ದರೆ ಕ್ಷಮಿಸಿಬಿಡಿ. ನಾವು ಸಣ್ಣವರು. ನೀವೇ ದೊಡ್ಡವರು' ಎಂದು ನಯವಾಗಿಯೇ ತಿರುಗೇಟು ನೀಡುವ ಮೂಲಕ ಸಮಿತಿ ಕಡೆಯಿಂದ ಯಾವುದೇ ತಪ್ಪಾಗಿಲ್ಲ ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತ್ಯುತ್ತರ ನೀಡಿದ ಚಂದ್ರಿಕಾ, ಯಾರಿಗೆ ಆಹ್ವಾನ ನೀಡಿದ್ದೀರಿ ತಿಳಿಸಿ. ನಾನು ನನ್ನ ಪ್ರತಿಭಟನೆಯನ್ನು ದಾಖಲಿಸಿದ್ದೇನೆ. ಕವಿತೆಯನ್ನು ಓದಿದ್ದೇನೆ. ನೀವೇ ಮತ್ತಷ್ಟು ಬೆಳೆಸುತ್ತಿದ್ದೀರಿ ಎಂದು ಹೇಳಿ, ಸನ್ಮಾನವನ್ನೂ ಸ್ವೀಕರಿಸದೇ ವೇದಿಕೆಯಿಂದ ನಿರ್ಗಮಿಸಿದರು.

ಸಭಿಕರ ಸಾಲಿನಲ್ಲಿ ಕವಿಗೋಷ್ಠಿ ಆಲಿಸುತ್ತ ಆಸೀನರಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಹಾಗೂ ಪ್ರಸಿದ್ಧ ಕವಿ ಡಾ.ಹೆಚ್.ಎಸ್.ಶಿವಪ್ರಕಾಶ್ ಅವರ ಸಮ್ಮುಖದಲ್ಲೇ ಇಷ್ಟೆಲ್ಲಾ ನಡೆದಿದ್ದು ಕವಿಗೋಷ್ಠಿ ಉಪಸಮಿತಿಗೆ ಮುಜುಗರ ಉಂಟು ಮಾಡಿತು.

ಕವಿಗಳು ವಾಸ್ತವ್ಯಕ್ಕೆ ಪರದಾಡಿದ್ದಾರೆ: ಮಾಧ್ಯಮದವರೊಂದಿಗೆ ಮಾತನಾಡಿದ ಚಂದ್ರಿಕಾ, ಆಹ್ವಾನ ನೀಡಿಯೇ ಇಲ್ಲ. ಕರೆ ಮಾಡಿರುವುದಾಗಿ ಈಗ ಅವರು ಹೇಳುತ್ತಿದ್ದಾರೆ. ಹಾಗಿದ್ದರೆ ನನ್ನ ಮೊಬೈಲ್‌ನಲ್ಲಿ ದಾಖಲಾಗಿರಬೇಕಲ್ಲವೇ? ಆಹ್ವಾನ ಪತ್ರಿಕೆಯೇ ಬಂದಿಲ್ಲ. ನನಗೆ ಈ ವಿಚಾರ ಬೆಳೆಸಲು ಇಷ್ಟವಿರಲಿಲ್ಲ. ನನ್ನ ಅಭಿಪ್ರಾಯ–ಬೇಸರ ವ್ಯಕ್ತಪಡಿಸಿದ್ದೆ. ಆದರೆ ಅವರೇ ವಿಷಯವನ್ನು ಎಳೆದು ಮತ್ತಷ್ಟು ಸಮಸ್ಯೆ ಉಂಟು ಮಾಡಿದರು ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ನಿನ್ನೆ ಬಂದ ಎಷ್ಟೋ ಜನ ಕವಿಗಳು ವಾಸ್ತವ್ಯಕ್ಕಾಗಿ ಪರದಾಡಿದ್ದಾರೆ. ಎಷ್ಟೋ ಮಂದಿಗೆ ಇದೇ ರೀತಿಯಾಗಿದೆ. ಆದರೆ ನಾನು ಹೇಳಿದ್ದೇನೆ. ಅವರು ಹೇಳಿಲ್ಲವಷ್ಟೇ ಎಂದರು.

ಸುಮ್ಮನೇ ಆರೋಪ ಮಾಧ್ಯಮದವರೊಂದಿಗೆ ಮಾತನಾಡಿದ ಡಾ.ಎಂ.ಜಿ.ಮಂಜುನಾಥ್, ಅವರ ಪತಿ ರವಿಕುಮಾರ್ ಅವರಿಗೆ ಕರೆ ಮಾಡಿ ತಿಳಿಸಲಾಗಿದೆ. ಅಷ್ಟೇ ಅಲ್ಲ, ಆ ಬಳಿಕ ಇವರೊಂದಿಗೆ ಮಾತನಾಡಿದ್ದೇನೆ. ವಾಟ್ಸಪ್‌ನಲ್ಲೂ ಆಹ್ವಾನ ಪತ್ರಿಕೆ ಕಳುಹಿಸಲಾಗಿದೆ. ಸುಮ್ಮನೇ ಈ ರೀತಿ ಆರೋಪ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ತಾಯಿ ಚಾಮುಂಡಿ ಸ್ಮರಣೆ ಜೊತೆಗೆ ಸಮಾಜದ ಪ್ರಸ್ತುತ ತಲ್ಲಣಗಳ ಬಗೆಗಿನ ಆತಂಕ ಅನಾವರಣಗೊಳಿಸಿದ ಪ್ರಧಾನ ಕವಿಗೋಷ್ಠಿ

ಬುದ್ಧನ ಶಾಂತಿ ಸಂದೇಶದ ಕನವರಿಕೆಯೊಂದಿಗೆ ಅನೇಕ ಅಂಶಗಳ ಮೇಲೆ ಬೆಳಕು ಚೆಲ್ಲಿದ ಕವಿ ಸಮೂಹ ; ದಸರಾ ಕವಿಗೋಷ್ಠಿಗೆ ತೆರೆ

ಮೈಸೂರು,ಅ.3(ಪಿಎಂ)– ತಾಯಿ ಚಾಮುಂಡಿ ಸ್ಮರಣೆ ಜೊತೆಗೆ ಸಮಾಜದ ಪ್ರಸ್ತುತ ತಲ್ಲಣಗಳ ಬಗೆಗಿನ ಆತಂಕ, ಯುದ್ಧ ನಿಂತು ಬುದ್ಧನ ಶಾಂತಿ ಸಂದೇಶ ಸಮಾಜದಲ್ಲಿ ನೆಲೆಸಲಿ ಎಂಬ ಕಳಕಳಿ, ಒಂದಿಷ್ಟು ಹಾಸ್ಯಮಿಶ್ರಿತ ವ್ಯಂಗ್ಯದ ಕಾವ್ಯಾಭಿವ್ಯಕ್ತಿ, 'ದಸರಾ ಪ್ರಧಾನ ಕವಿಗೋಷ್ಠಿ'ಯಲ್ಲಿ ಅನಾವರಣಗೊಳ್ಳುವ ಮೂಲಕ 'ದಸರಾ ಕವಿಗೋಷ್ಠಿ'ಗೆ ತೆರೆ ಬಿದ್ದಿತು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಸೋಮವಾರ ನಡೆದ ಪ್ರಧಾನ ಕವಿಗೋಷ್ಠಿಯು ತಾಯಿ ಚಾಮುಂಡಿಯನ್ನು ಭಕ್ತಿಭಾವದಿಂದ ಸ್ಮರಿಸುವುದು ಸೇರಿದಂತೆ ಹಲವು ಅಂಶಗಳ ಮೇಲೆ ಬೆಳಕು ಚೆಲ್ಲಿತು. ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಅವರ 'ನೂರಾರು ಹೆಸರ ಹೆಣ್ಣೆ (ಸ್ತ್ರೀ)' ಶೀರ್ಷಿಕೆಯ ಕವಿತೆಯಲ್ಲಿ ಮಹಿಳೆಯನ್ನು ಗೌರವಪೂರ್ವಕವಾಗಿ ವರ್ಣಿಸಲಾಯಿತು. ಹೆಣ್ಣಿನ ವಾತ್ಸಲ್ಯ, ಕರುಣೆ, ಸಹನೆ ಸೇರಿದಂತೆ ಮಹತ್ತರ ಮನೋಭಾವದ ಚಿತ್ರಣವನ್ನು ಅವರು ತಮ್ಮ ನುಡಿಗಳಲ್ಲಿ ಕಟ್ಟಿಕೊಟ್ಟರು.

'ಮಳೆಯಾಗಿ ಸುರಿದ ಹೊಳೆಯಾಗಿ ಹರಿದ ಇಳೆಗಿಳಿದ ದೇವಕನ್ಯೆ... ಹೊಲಗದ್ದೆ ಹಸಿರ ನೆಲಗಂಧದುಸಿರ ಬಂಗಾರ ಭುವಿಯ ಮಣ್ಣೆ...' ಸಾಲುಗಳ ಮೂಲಕ ಇಡೀ ಪ್ರಕೃತಿಯನ್ನು ಮಾತೃ ಸ್ವರೂಪಿಯಾಗಿ ನೋಡುವ ಭಾರತೀಯ ಸಂಸ್ಕೃತಿಯನ್ನು ಅನಾವರಣಗೊಳಿಸಿದರು. ಇನ್ನು ಹಲವು ಸಾಲುಗಳಲ್ಲಿ ಮಹಿಳೆಯು ವಿವಿಧ ಪಾತ್ರಗಳಲ್ಲಿ ಪುರುಷನಿಗೆ ನೆರವಾಗುವ ಬಗ್ಗೆ ವಿವರಿಸಿದ ಅವರು, 'ನವರಾತ್ರಿ ಜ್ಞಾನಪ್ರಣತಿ ಸೊಬಗುಳ್ಳ ಸೋನೆ ಚಾಮುಂಡಿ ನೀನೆ ಚಿತ್ತಾರ ಚಿತ್ತದೊಡತಿ...' ಸಾಲುಗಳ ಮೂಲಕ ಜ್ಞಾನ ಸ್ವರೂಪಿಣಿಯಾಗಿ ನನ್ನ ಮನಸ್ಸಿನ ಗೊಂದಲ ಪರಿಹರಿಸಬೇಕೆಂದು ಚಾಮುಂಡಿಯಲ್ಲಿ ಪ್ರಾರ್ಥಿಸಿದರು.

ಕನಸಿಗೂ ಜಿಎಸ್‌ಟಿ ತೆರಬೇಕಾಗಿದೆ...': ಹೆಚ್.ಎನ್.ಆರತಿ ತಮ್ಮ 'ಗಿರಾಕಿ ನಾನು' ಕವಿತೆ ಮೂಲಕ ಇಂದಿನ ಕೊಳ್ಳುಬಾಕುತನದ ಮನಸ್ಥಿತಿ ಹಾಗೂ ಆಧುನಿಕ ಮಾರುಕಟ್ಟೆಯ ಭರಾಟೆಯಲ್ಲಿ ಗ್ರಾಹಕ ಪರಿತಪಿಸುವ ಬಗೆಯನ್ನೂ ಬಿಚ್ಚಿಟ್ಟರು. ಸಂತೆ ಮಾಳವೋ.. ರಸ್ತೆಯಂಚಿನ ಕಾಕಾ ಅಂಗಡಿಯೋ... ಜಗಮಗಿಸುವ ಬಜಾರಿನಲ್ಲಿ... ತಬ್ಬಿಬ್ಬಾಗಿ ನಿಂತಿರುವ... ಗಿರಾಕಿ ನಾನು... ಪ್ಲಾಸ್ಟಿಕ್ ದುನಿಯಾದ ಹವಾನಿಯಂತ್ರಿತ ತಂಪಲ್ಲಿ ಬೆವರುತ್ತಿದ್ದೇನೆ.. ನಿನ್ನಗೊಂದು ಜೊತೆ... ನಾಳೆಗೆ ಹೊಸತು ಬೇಕು... ಬಜಾರಾಗಿದೆ ಮನಸ್ಸು... ಕನಸಿಗೂ ಜಿಎಸ್‌ಟಿ ತೆರಬೇಕಾಗಿದೆ...' ಸೇರಿದಂತೆ ಇನ್ನೂ ಹಲವು ಸಾಲುಗಳಲ್ಲಿ ಇಂದಿನ ಗ್ರಾಹಕ ಮತ್ತು ಮಾರುಕಟ್ಟೆಯ ವ್ಯವಸ್ಥೆಯನ್ನು ಅಣಕಿಸಿದರು.

ಸಾಹಿತಿ ಡಾ.ಜಯಪ್ಪ ಹೊನ್ನಾಳಿ 'ಯುದ್ಧ ನಿಲ್ಲಲಿ ; ಬುದ್ಧ ಗೆಲ್ಲಲಿ' ಕವಿತೆ ಮೂಲಕ ವಿಶ್ವಶಾಂತಿ ಮಹತ್ವ ಸಾರಿದರು. 'ಯುದ್ಧ ನಿಲ್ಲಲಿ ; ಬುದ್ಧ ಗೆಲ್ಲಲಿ... ಈಗಾಗಲೇ ಹರಿದು ಹೆಪ್ಪುಗಟ್ಟಿರುವ... ಜಗದೆದೆಯ ರಕ್ತಸಿಕ್ತ ಕೆಸರಲ್ಲಿ... ಕೆಂಗುಲಾಬಿ ಅರಳಲಿ...' ಎಂಬುದೂ ಸೇರಿದಂತೆ ಇನ್ನಿತರ ಸಾಲುಗಳಲ್ಲಿ ರಷ್ಯ–ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಶಾಂತಿಯ ಸಂದೇಶ ಪಸರಿಸಲಿ ಎಂಬ ಆಶಯ ವ್ಯಕ್ತಪಡಿಸಿದರು. ಹೀಗೆ 30ಕ್ಕೂ ಹೆಚ್ಚು ಕವಿಗಳು ತಮ್ಮ ಕಾವ್ಯದ ಮೂಲಕ ನಾನಾ ಸಂದೇಶ ನೀಡಿದರು.

ಮೈಸೂರು ಮಿತ್ರ

ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ತಿ.ನರಸೀಪುರ ಅ.3– ಚುನಾವಣೆ ಸಂದರ್ಭ ಕ್ಷೇತ್ರದ ಜನತೆಗೆ ನೀಡಿದ ಭರವಸೆಯನ್ನು ಅಭಿವೃದ್ಧಿ ಕಾಮಗಾರಿ ಮಾಡುವ ಮೂಲಕ ಈಡೇರಿಸುತ್ತೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಶಂಭುದೇವನಪುರದಲ್ಲಿ 30 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಅನುದಾನ ಬಿಡುಗಡೆಗೆ ತಕ್ಕಂತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುತ್ತಿದ್ದು, ತಾಲೂಕಿನ ಎಲ್ಲಾ ಗ್ರಾಮಗಳಿಗೂ ಆದ್ಯತೆ ನೀಡಲಾಗುತ್ತಿದೆ. ಸಾರ್ವಜನಿಕರು ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭ ಗ್ರಾಮದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಿದ್ದನ್ನು, ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ಅಭಿವೃದ್ಧಿ ಕೆಲಸ ಮಾಡುತ್ತಿದ್ದೇನೆ ಎಂದರು.

> ನಾನು ಎಷ್ಟೇ ಅಭಿವೃದ್ಧಿ ಕಾರ್ಯ ಕೈಗೊಂಡರೂ ಮತದಾರರ ಋಣ ತೀರಿಸಲು ಸಾಧ್ಯವಿಲ್ಲ. ಪ್ರತಿನಿತ್ಯ ಒಂದಲ್ಲ ಒಂದು ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ನಾಗರಿಕರ ಕುಂದು ಕೊರತೆಗಳನ್ನು ಆಲಿಸಿ, ಸದಾ ಅವರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಬಂದಿದ್ದೇನೆ.
> - ಎಂ.ಅಶ್ವಿನ್ ಕುಮಾರ್, ಶಾಸಕ.

ಇತ್ತೀಚೆಗೆ ಸುರಿದ ಮಳೆಯಿಂದ ಹಾನಿಗೊಳಗಾದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಸದನದಲ್ಲಿ ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿದ್ದೇನೆ. ಈಗಾಗಲೇ ಎಸ್‌ಇಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆಗಳಾಗಿದ್ದು, ಜನರಲ್ ಬೀದಿಗಳಲ್ಲಿ ರಸ್ತೆಗಳು ಹಾಳಾಗಿವೆ. ಈಗ ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ವಹಿಸುತ್ತಿದ್ದೇನೆ ಎಂದರು.

ಪಕ್ಷಭೇದ ಮರೆತು ಗ್ರಾಮಗಳ ಅಭಿವೃದ್ಧಿಗೆ ಎಲ್ಲರೂ ಸಹಕರಿಸಬೇಕು. ರಾಜಕೀಯವನ್ನು ಚುನಾವಣೆಗೆ ಮಾತ್ರ ಸೀಮಿತಗೊಳಿಸಿ, ಜನತೆ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಸಲಹೆ ಸೂಚನೆ ನೀಡಿದರೂ ಸ್ವೀಕರಿಸುತ್ತೇನೆ. ಸದಾ ಜನರೊಂದಿಗೆ ಇದ್ದು, ಜನತೆ ನೀಡಿರುವ ಅಧಿಕಾರವನ್ನು ಅವರ ಅಭಿವೃದ್ಧಿಗೆ ಬಳಸಿ ಅವರ ಆಶೋತ್ತರಗಳಿಗೆ ಸ್ಪಂದಿಸುವುದಾಗಿ ತಿಳಿಸಿದರು.

ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಸದಸ್ಯ ಗುರುಪ್ರಸಾದ್, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಮುಖಂಡರಾದ ಮಹದೇವಸ್ವಾಮಿ, ಬಸವಲಿಂಗಪ್ಪ, ಸುಗಂಧರಾಜು, ರಾಜೇಶ್, ಶಿವಮೂರ್ತಿ, ರಾಜೇಶ್, ಹೆಮ್ಮಿಗೆ ಗ್ರಾಪಂ ಮಾಜಿ ಅಧ್ಯಕ್ಷ ರಾಜಶೇಖರ್, ಗ್ರಾಪಂ ಸದಸ್ಯರಾದ ಎಚ್.ಸಿ.ಶಿವಕುಮಾರ್, ಬಿ.ಮಹದೇವ್, ದೇವರಾಜ್, ಮಹದೇವಪ್ಪ, ವೆಂಕಟೇಶ್, ಸಿ.ಎಸ್. ರವಿಕುಮಾರ್, ಕೆಆರ್‌ಡಿಎಲ್‌ನ ದಿಲೀಪ್, ಜಿಪಂ ಎಇಇ ಲಕ್ಷ್ಮಣರಾವ್, ರಾಜು ನಾಯಕ್ ಮತ್ತಿತರರಿದ್ದರು.

ರಸ್ತೆ, ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ



ಮಲ್ಕುಂಡಿ, ಅ.3– ಗ್ರಾಮದಲ್ಲಿ ಸುಮಾರು 10 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ತಾಪಂ ಮಾಜಿ ಸದಸ್ಯ ಎಸ್.ಬಸವರಾಜು ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಶಾಸಕ ಬಿ.ಹರ್ಷವರ್ಧನ್ ಕ್ಷೇತ್ರದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದಾರೆ. ಚುನಾವಣೆ ಸಂದರ್ಭ ಗ್ರಾಮಸ್ಥರ ಕೋರಿಕೆಯಂತೆ ರಸ್ತೆಗಳನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಇದರಿಂದ ಗ್ರಾಮದ ಜನತೆ ಸರಾಗವಾಗಿ ಓಡಾಡಲು ಅನುಕೂಲವಾಗಲಿದೆ. ಗುತ್ತಿಗೆದಾರರು ಉತ್ತಮ ಗುಣಮಟ್ಟದ ಕಾಮಗಾರಿಗೆ ಮುಂದಾಗಬೇಕು ಎಂದರು.

ಈ ವೇಳೆ ಗ್ರಾಪಂ ಸದಸ್ಯರಾದ ಚಂದ್ರಶೇಖರ್ ಆರಾಧ್ಯ, ಸೋಮೇಶ್, ಗುತ್ತಿಗೆದಾರ ಎಂ.ಪುಟ್ಟಸ್ವಾಮಿ, ಮುಖಂಡರಾದ ಸಣ್ಣಮಾದಪ್ಪ, ಗುರುಸಿದ್ದಪ್ಪ, ಕೆಂಡಪ್ಪ, ವೀರಭದ್ರಪ್ಪ, ಎಂ.ಜಿ.ಮಹದೇವಸ್ವಾಮಿ, ಮಾದಪ್ಪ ಸೇರಿದಂತೆ ಪ್ರಮುಖರಿದ್ದರು.

30ಕ್ಕೂ ಹೆಚ್ಚು ಶಾಸಕರ ಹುಟ್ಟುಹಾಕಿದ ಅರಸರು



ಹುಣಸೂರು, ಅ.3– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಹುಣಸೂರು ಕ್ಷೇತ್ರದಿಂದ 8 ಬಾರಿ ಆಯ್ಕೆಯಾಗಿ 40 ವರ್ಷಗಳ ಸುದೀರ್ಘ ರಾಜಕಾರಣ ಮಾಡಿ ತನ್ನಂತಹ 30ಕ್ಕೂ ಹೆಚ್ಚು ಶಾಸಕರನ್ನು ಹುಟ್ಟು ಹಾಕಿದ ಕೀರ್ತಿ ಅವರದು. ಅದರಲ್ಲಿ ನಾನೂ ಒಬ್ಬ ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಡಿ. ದೇವರಾಜ ಅರಸರ 107ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿದ ಅವರು, ಅರಸರು ಸಣ್ಣಪುಟ್ಟ ಜಾತಿಗಳನ್ನು ಒಗ್ಗೂಡಿಸಿ ಶಕ್ತಿ ನೀಡಿದರು. ಹಿಂದಿನ ಚುನಾವಣೆಗಳು ವ್ಯಕ್ತಿ ಮೇಲೆ ನಡೆಯುತ್ತಿದ್ದವು. ಆದರೆ ಈಗ ಹಣ ಬಲದ ಮೇಲೆ ಚುನಾವಣೆ ನಡೆಯುತ್ತಿದೆ. ಮುಂದಿನ ಚುನಾವಣೆಯಲ್ಲಿ ಯಾರ ಮಾನ ಬೀದಿಗೆ ಬರುತ್ತದೆ ಕಾದು ನೋಡಬೇಕು ಎಂದರು.

ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಜನಸಾಮಾನ್ಯರು ತೀರ್ಮಾನಿಸಬೇಕು. ಆದರೆ ಈಗ ಮಠಮಾನ್ಯಗಳು ತೀರ್ಮಾನಿಸುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದ ಅವರು, ಅರಸರು ರಾಜ್ಯಕ್ಕೆ ನೀಡಿದ ಕೊಡುಗೆ ಜನರ ಮನದಲ್ಲಿ ಉಳಿದಿದೆ ಎಂದು. ರಾಜಪ್ರಭುತ್ವ ಹಾಗೂ ಪ್ರಜಾಪ್ರಭುತ್ವವನ್ನು ನಾವು ಕಂಡಿದ್ದೇವೆ. ಯಾವುದೇ ಶಾಸಕ ಕೃತಜ್ಞತೆ ಹಾಗೂ ಕ್ಷಮಾ ಗುಣ ಹೊಂದಿರಬೇಕು. ಇಲ್ಲವಾದಲ್ಲಿ ಆತ ರಾಜಕಾರಣಿಯಾಗಿ ಬೆಳೆಯಲು ಸಾಧ್ಯವಿಲ್ಲ ಎಂದರು. ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಅರಸರು ನಮ್ಮನ್ನು ಅಗಲಿ 40 ವರ್ಷ ಕಳೆದರೂ ಅವರು ಮಾಡಿದ ಉತ್ತಮ ಕೆಲಸಗಳು ನಮ್ಮೊಂದಿಗಿವೆ. ಅವರಿಗೆ ಅವರೇ ಸಾಟಿ. ಅರಸು ಬಿಟ್ಟರೆ ಮತ್ತೊಬ್ಬ ಅರಸು ಹುಟ್ಟಲಾರರು ಎಂದರು.

ಅರಸು ವೇದಿಕೆ ಅಧ್ಯಕ್ಷ ರಾಜು, ದೇವರಾಜ ಅರಸರ ಮೊಮ್ಮಗ ಮಂಜುನಾಥ್ ಅರಸ್, ಜೆಡಿಎಸ್ ಅಧ್ಯಕ್ಷ ಸೋಮಶೇಖರ್, ಉಪಾಧ್ಯಕ್ಷ ದೇವರಾಜ್ ಒಡೆಯರ್, ನಗರಸಭೆ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ರಾಜು ಶಿವರಾಜು, ಕುನ್ನೇಗೌಡ, ಆನಂದಸ್ವಾಮಿ, ಕೃಷ್ಣ ಗಣೇಶ್, ನಾರಾಯಣ್, ಬಸವರಾಜು, ನಿಂಗರಾಜ್ ಮಲ್ಲಾಡಿ, ನಗರಸಭೆ ಸದಸ್ಯ ಗಣೇಶ್ ಕುಮಾರಸ್ವಾಮಿ, ನಗರಸಭೆ ಮಾಜಿ ಸದಸ್ಯ ವರದರಾಜು, ಆದಿಜಾಂಬವ ಸಂಘದ ಅಧ್ಯಕ್ಷ ಜೆ.ಮಹದೇವ, ಎಂ.ಶಿವಕುಮಾರ್, ನಾಗರಾಜು, ಬಸವರಾಜು ಬಾಲಕೃಷ್ಣ, ವೆಂಕಟೇಶ್, ವಿ.ಪಿ. ಸಾಯಿನಾಥ್ ಸೇರಿದಂತೆ ಇತರರಿದ್ದರು.

ಅಂಗಡಿಗಳ ಬಾಗಿಲು ಮುರಿದು ಕಳ್ಳತನ

ತಿ.ನರಸೀಪುರ, ಅ.3– ಅಂಗಡಿಗಳ ಬಾಗಿಲು ಮುರಿದು ಕಳ್ಳತನ ನಡೆಸಿರುವ ಘಟನೆ ಪಟ್ಟಣದ ಲಿಂಕ್ ರಸ್ತೆಯಲ್ಲಿ ಭಾನುವಾರ ರಾತ್ರಿ ನಡೆದಿದೆ.



ಲಿಂಕ್ ರಸ್ತೆಯ ಸಂಜೀವಿನಿ ಮೆಡಿಕಲ್ ಪಕ್ಕದ ಆರ್.ಜಿ.ಫ್ಯಾನ್ಸಿ ಸ್ಟೋರ್ಸ್ ಬಾಗಿಲು ಮುರಿದಿರುವ ಕಳ್ಳರು 6 ಸಾವಿರ ರೂ. ಕದ್ದೊಯ್ದಿದ್ದಾರೆ. ಅಲ್ಲದೇ ಪಕ್ಕದ ವೀರಭದ್ರೇಶ್ವರ ಸ್ಟೋರ್ಸ್ ದಿನಸಿ ಅಂಗಡಿ ಹಾಗೂ ಪುರಸಭೆ ವಾಣಿಜ್ಯ ಮಳಿಗೆಯಲ್ಲಿರುವ ಭರತ್ ಫ್ಯಾಷನ್ ಅಂಗಡಿಗಳ ಬಾಗಿಲು ಮೀಟಿರುವ ಕಳ್ಳರು ಕಳ್ಳತನಕ್ಕೆ ವಿಫಲ ಯತ್ನ ನಡೆಸಿದ್ದು, ಅಂಡಿಗಳಲ್ಲಿದ್ದ ಬಟ್ಟೆಗಳು, ದಿನಸಿ ಪದಾರ್ಥಗಳನ್ನು ಮುಟ್ಟದೇ ವಾಪಸ್ ಹೋಗಿದ್ದಾರೆ. ಒಂದೇ ರಾತ್ರಿ 3 ಅಂಗಡಿ ಬಾಗಿಲು ಮುರಿದು ಕಳ್ಳತನಕ್ಕೆ ಯತ್ನಿಸಿರುವ ಘಟನೆಯಿಂದ ಅಂಗಡಿಗಳ ಮಾಲೀಕರು ಆತಂಕಕ್ಕೊಳಗಾಗಿದ್ದಾರೆ. ತಿಂಗಳ ಹಿಂದಷ್ಟೇ ಪಟ್ಟಣದ ಶ್ರೀನಿಧಿ ಡಿಸ್ಟ್ರಿಬ್ಯೂಟರ್ ಮಾಲೀಕರ ಮನೆಯಲ್ಲಿ ಕೆಜಿಗಟ್ಟಲೆ ಚಿನ್ನ ಮತ್ತು 35 ಲಕ್ಷ ರೂ.ಗೂ ಹೆಚ್ಚಿನ ಹಣ ಕಳ್ಳತನ ಪ್ರಕರಣ ಇನ್ನೂ ಹಸಿರಾಗಿರುವಾಗಲೇ ರಾತ್ರಿ ಅಂಗಡಿಗಳಲ್ಲಿ ಕಳ್ಳತನಕ್ಕೆ ಯತ್ನ ನಡೆದಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ಘಟನೆ ಸಂಬಂಧ ಅಂಗಡಿ ಮಾಲೀಕರು ಪೊಲೀಸರಿಗೆ ದೂರು ನೀಡಿದ್ದು, ಸ್ಥಳಕ್ಕಾಗಮಿಸಿದ ಎಸ್‌ಐ ಪಚ್ಚೇಗೌಡ, ಮುಖ್ಯ ಪೇದೆ ಕಾಂತರಾಜು ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.

ನರೇಗಾ ಯೋಜನೆ ಸದುಪಯೋಗಪಡಿಸಿಕೊಳ್ಳಿ



ಬನ್ನೂರು, ಅ.3– ನರೇಗಾ ಯೋಜನೆ ಸದುಪಯೋಗಪಡಿಸಿಕೊಳ್ಳುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಿ, ಉತ್ತಮ ವಾತಾವರಣ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಮಲಿಯೂರು ಗ್ರಾಪಂ ಅಧ್ಯಕ್ಷ ಡಿ.ಜಯರಾಮು ತಿಳಿಸಿದರು.

ಇಲ್ಲಿನ ಮಲಿಯೂರು ಗ್ರಾಪಂ ಆವರಣದಲ್ಲಿ ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಗ್ರಾಮಸಭೆಯಲ್ಲಿ ಮಾತನಾಡಿದ ಅವರು, ನೀರು ಅತ್ಯಮೂಲ್ಯವಾಗಿದ್ದು, ಅದನ್ನು ಹಿತಮಿತವಾಗಿ ಬಳಸಿಕೊಳ್ಳುವ ಪರಿಪಾಠವನ್ನು ಎಲ್ಲರೂ ರೂಢಿಸಿಕೊಳ್ಳಬೇಕು ಎಂದರು.

ಕಸವನ್ನು ಎಲ್ಲೆಂದರಲ್ಲಿ ಎಸೆಯದೆ ಒಣ ಮತ್ತು ಹಸಿಕಸ ಎಂದು ಬೇರ್ಪಡಿಸಿ ಅದನ್ನು ನಿಗದಿತ ಸಮಯಕ್ಕೆ ಬರುವ ಕಸದ ವಾಹನಕ್ಕೆ ನೀಡಬೇಕು. ಇದರಿಂದ ಉತ್ತಮ ವಾತಾವರಣ ನಿರ್ಮಾಣಕ್ಕೆ ಸಹಾಯವಾಗುತ್ತದೆ ಎಂದರು.

ಪಿಡಿಓ ಅಶೋಕ್ ಮಾತನಾಡಿ, ನರೇಗಾ ಯೋಜನೆಯಡಿ ಕೊಟ್ಟಿಗೆ, ಚರಂಡಿ, ರಸ್ತೆ ಕಾಮಗಾರಿ, ನಮ್ಮ ಗದ್ದೆ ನಮ್ಮ ರಸ್ತೆ, ಸ್ಮಶಾನ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು, ಸಾರ್ವಜನಿಕರು ವಾರದೊಳಗಾಗಿ ಪಂಚಾಯಿತಿಗೆ ಅರ್ಜಿ ಸಲ್ಲಿಸುವಂತೆ ತಿಳಿಸಿದರು.

ಈ ವೇಳೆ ಉಪಾಧ್ಯಕ್ಷೆ ರಾಣಿ, ಕಾರ್ಯದರ್ಶಿ ಸೌಮ್ಯ, ತೋಟಗಾರಿಕೆ ಅಧಿಕಾರಿ ಮಹೇಶ್, ಭಾಗ್ಯಲಕ್ಷ್ಮಿ, ಶಿಲ್ಪ, ಬಾಬು, ಮಹದೇವಮ್ಮ, ರತ್ನಮ್ಮ, ರಾಮಕೃಷ್ಣ, ಯಲ್ಲಪ್ಪ, ರಾಮೇಗೌಡ, ಮಮತಾ, ರಾಮಲಿಂಗ, ಮಮತ, ರೇಖಾ, ವಿ.ಸಿದ್ದೇಗೌಡ, ಶಿವಮ್ಮ, ಶಾಂತಮ್ಮ, ಕೆ.ಬಿ.ಜಯರಾಮು, ಪ್ರಕಾಶ್, ಸಹನಾ, ಮೋಹನ್‌ಕುಮಾರಿ, ನಾಗರಾಜು, ಶಿವಶಂಕರ್, ಕೆಂಪಣ್ಣ, ಶ್ರೀಧರ್, ದೊಳ್ಳಯ್ಯ, ಲೋಕೇಶ್ ಸೇರಿದಂತೆ ಹಲವರಿದ್ದರು.

ಗಾಂಧಿ ಜಯಂತಿಯಂದು ಮಾಂಸ ಮಾರಾಟ: ದೂರು ದಾಖಲು

ಭೇರ್ಯ, ಅ.3– ಗಾಂಧಿ ಜಯಂತಿಯಂದು ರಾಜ್ಯಾದ್ಯಂತ ಮಾಂಸ ಮತ್ತು ಮದ್ಯ ಮಾರಾಟ ನಿಷೇಧಿಸಿದ್ದರೂ, ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದಲ್ಲಿ ಮಾಂಸ ಮಾರಾಟಕ್ಕೆ ಸಹಕಾರ ನೀಡಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರೊಬ್ಬರು ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ದೂರು ದಾಖಲಿಸಿದ್ದಾರೆ.

ಮಿರ್ಲೆ ಪಿಡಿಓ ಚಂದ್ರಶೇಖರ್ ಗಾಂಧಿ ಜಯಂತಿ ದಿನದಂದು ಗ್ರಾಮದಲ್ಲಿ ಮಾಂಸ ಮಾರಾಟಕ್ಕೆ ಅವಕಾಶ ನೀಡಿದ್ದಲ್ಲದೆ ಪ್ರಶ್ನೆ ಮಾಡಿದ ಗ್ರಾಮಸ್ಥರ ಮೇಲೆ ಏರು ಧ್ವನಿಯಲ್ಲಿ ಮಾತನಾಡಿದ್ದಾರೆ ಎಂದು ಮಿರ್ಲೆ ಗ್ರಾಮದ ಸಂದೇಶ್ ಎಂಬುವರು ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ನೀಡಿ, ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.



ಮೂಗೂರಿನ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಚನ್ನಪಟ್ಟಣದ ರಾಂಪುರದ ಗುತ್ತಿಗೆದಾರ ವೇಣು ಕೊಡುಗೆ ನೀಡಿದ್ದ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಲಾಯಿತು. ಈ ವೇಳೆ ಅರ್ಚಕ ನಾಗರಾಜು, ಹರೀಶ್ ಇತರರಿದ್ದರು.



ಪ್ರಧಾನಿ ಮೋದಿ ಹುಟ್ಟುಹಬ್ಬದ ಅಂಗವಾಗಿ ಪಿರಿಯಾಪಟ್ಟಣ ತಾಲೂಕು ಬಿಜೆಪಿ ಮಹಿಳಾ ಮೋರ್ಚಾದಿಂದ ಆಯೋಜಿಸಿದ್ದ ಅಂಗನವಾಡಿ ಕಾರ್ಯಕರ್ತರ ಸನ್ಮಾನ ಕಾರ್ಯಕ್ರಮವನ್ನು ತಾಲೂಕು ಅಧ್ಯಕ್ಷೆ ಗೀತಾ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಳಿನಿಗೌಡ ಉದ್ಘಾಟಿಸಿದರು. ಈ ವೇಳೆ ಪ್ರಧಾನ ಕಾರ್ಯದರ್ಶಿ ನಿರ್ಮಲಾ, ಉಪಾಧ್ಯಕ್ಷೆ ಶುಭಗೌಡ, ಬಾನು, ಮುಖಂಡರಾದ ಸೋಮಶೇಖರ್, ವೀರಭದ್ರ, ಅನಿಲ್, ಯಾದವ ಚಾರಿ, ಜವರಪ್ಪ, ಅಂಗನವಾಡಿ ಶಿಕ್ಷಕಿ ಜಯಂತಿ ಹಾಗೂ ಸಹಾಯಕಿ ಭಾಗ್ಯ ಇದ್ದರು.

ಸೋಮನಾಥಪುರ ಪಿಎಸಿಎಸ್‌ಗೆ ಷಡಕ್ಷರಿ ನೂತನ ಅಧ್ಯಕ್ಷ



ತಿ.ನರಸೀಪುರ, ಅ.3– ತಾಲೂಕಿನ ಸೋಮನಾಥಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಡುಗೆ ಕಂಟ್ರಾಕ್ಟರ್ ಉಕ್ಕಲಗೆರೆ ಷಡಕ್ಷರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಎಂ.ಗಿರೀಶ್‌ಗೌಡ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಸೋಮವಾರ ನಡೆದ ಚುನಾವಣೆ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಉಕ್ಕಲಗೆರೆ ಗ್ರಾಮದ ಅಡುಗೆ ಕಂಟ್ರಾಕ್ಟರ್ ಷಡಕ್ಷರಿ ಅವರೊಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಗೊಂಡರು.

ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಸೇರಿದಂತೆ ಸಂಘದ 12 ಮಂದಿ ಚುನಾಯಿತ ನಿರ್ದೇಶಕರು ಚುನಾವಣಾ ಸಭೆಯಲ್ಲಿ ಭಾಗವಹಿಸಿದ್ದರು. ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಚುನಾವಣಾಧಿಕಾರಿಯಾಗಿ, ಸಂಘದ ಕಾರ್ಯ ನಿರ್ವಾಹಕ ಎನ್. ಪ್ರದೀಪ್ ಸಹಾಯಕ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷ ಷಡಕ್ಷರಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಒಂದೂವರೆ ದಶಕಗಳ ಕಾಲ ಸೇವೆ ಸಲ್ಲಿಸುತ್ತಿರುವ ನನಗೆ ಅಧ್ಯಕ್ಷರಾಗಲು ಸಂಘದ ನಿರ್ದೇಶಕರೆಲ್ಲರೂ ಸಂಪೂರ್ಣ ಬೆಂಬಲ ನೀಡಿರುವುದರಿಂದ ಅವರೆಲ್ಲರ ಮಾರ್ಗದರ್ಶನದಲ್ಲಿ ಸಂಘದ ಅಭಿವೃದ್ಧಿಗೆ, ರೈತರ ಕಲ್ಯಾಣಕ್ಕೆ ದುಡಿಯುತ್ತೇನೆ ಎಂದರು.

ಈ ವೇಳೆ ನೂತನ ಅಧ್ಯಕ್ಷರನ್ನು ಸ್ಫಟಿಕದ್ದೇಶ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಕುಮಾರ್ ಹಾಗೂ ಹುಲ್ಲಂಬಳ್ಳಿಯ ಪಂಡಿತ್ ರಾಜಶೇಖರ್ ಸನ್ಮಾನಿಸಿದರು. ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಎಂ.ರಾಜು, ನಿರ್ದೇಶಕರಾದ ಪ್ರಥಮ ದರ್ಜೆ ಗುತ್ತಿಗೆದಾರ ಶ್ರೀರಂಗರಾಜಪುರ ಎಂ.ಸಿದ್ದರಾಜು, ಎಸ್.ವಿ.ದಿನೇಶ್ ಕುಮಾರ್, ಎಂ.ಮಹದೇವ, ಬೋರೇಗೌಡ, ಎಂ.ಶೇಖರ್, ರಮೇಶ್, ನೀಲಮ್ಮ, ಸುಂದರಮ್ಮ, ಮರಮ್ಮ, ರಾಜಮ್ಮ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಎನ್.ಎಸ್.ಶೇಖರ್, ಗ್ರಾಪಂ ಸದಸ್ಯ ರವಿಶಂಕರ್, ಮಾಜಿ ಅಧ್ಯಕ್ಷರಾದ ಎಂ.ಮಹದೇವಯ್ಯ, ಅಶೋಕ, ಮುಖಂಡರಾದ ಸಿದ್ದರಾಮು, ಚೇರ್ಮನ್ ಮಂಜುನಾಥ್, ಶಿವು, ನಾಗೇಂದ್ರ, ಪ್ರಭುಸ್ವಾಮಿ, ಸಿ.ನಂಜುಂಡಯ್ಯ, ಗ್ರಾಪಂ ಸದಸ್ಯ ಮಹೇಶ್, ರಾಮಲಿಂಗಯ್ಯ, ರವಿ, ಅಶೋಕ್, ಗುರುಸ್ವಾಮಿ, ಮಂಜು, ಶಿವು, ಸಿದ್ದರಾಮು, ಮಹದೇವು, ಜಿತೇಂದ್ರ ಕುಮಾರ್, ಶಿವಣ್ಣ, ತಮ್ಮಯ್ಯ, ಯಜಮಾನರಾದ ಮಹದೇವಸ್ವಾಮಿ, ಕುಮಾರಸ್ವಾಮಿ, ಮಾದೇಗೌಡ, ಮಹದೇವಶೆಟ್ಟಿ, ಸಹಾಯಕ ಜಿ.ಜಗದೀಶ್ ಹಾಜರಿದ್ದರು.

ಕಿರನೆಲ್ಲಿ ಗೇಟ್‌ನಲ್ಲಿ ಡೇರಿ ಉದ್ಘಾಟನೆ



ಕಂಪಲಾಪುರ, ಅ.3– ರೈತರು ವ್ಯವಸಾಯದೊಂದಿಗೆ ಹೈನುಗಾರಿಕೆ ಕೈಗೊಂಡರೆ ಆರ್ಥಿಕವಾಗಿ ಸದೃಢರಾಗಲು ಸಾಧ್ಯ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು.

ಇಲ್ಲಿಗೆ ಸಮೀಪದ ಕಿರನೆಲ್ಲಿ ಗೇಟ್‌ನಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಈ ಭಾಗದ ಜನರು ಹಾಲು ಸರಬರಾಜು ಮಾಡಲು ಸುಮಾರು ಒಂದೂವರೆ ಕಿ.ಮೀ. ದೂರ ಸಾಗಬೇಕಿತ್ತು. ಇಲ್ಲಿ ಡೇರಿ ಆಗಬೇಕೆಂಬ ಬಹುದಿನಗಳ ಬೇಡಿಕೆ ಈಗ ಈಡೇರಿದೆ. 2015 ರಿಂದೀಚೆಗೆ ನಾನು ನಿರ್ದೇಶಕನಾಗಿ, ಅಧ್ಯಕ್ಷನಾದ ಮೇಲೆ 27 ರೂ. ಇದ್ದ ಹಾಲಿನ ದರವನ್ನು ಒಕ್ಕೂಟದ ಲಾಭಾಂಶ ಹೆಚ್ಚಳದ ಕಾರಣ ತಲಾ ಒಂದೊಂದು ರೂ.ನಂತೆ ಹೆಚ್ಚಿಸಿ ಈಗ ಪ್ರತಿ ಲೀ. ಹಾಲಿಗೆ 30 ರೂ. ನೀಡಲಾಗುತ್ತಿದೆ. ಈ ಹಿಂದೆ ಪಿ. ಪಟ್ಟಣ ತಾಲೂಕಿನಲ್ಲಿ ಈ ಹಿಂದೆ ಕೇವಲ 95 ಹಾಲಿನ ಡೇರಿಗಳಿದ್ದು, ಪ್ರತಿನಿತ್ಯ 50 ಸಾವಿರ ಲೀ. ಹಾಲು ಉತ್ಪಾದನೆಯಾಗುತ್ತಿತ್ತು. ಇದೀಗ 185 ಹಾಲಿನ ಡೇರಿಗಳಿದ್ದು, ನಿತ್ಯ 1.75 ಲಕ್ಷ ಲೀ ಹಾಲು ಉತ್ಪಾದನೆಯಾಗುತ್ತಿದೆ. ಕೆಲ ಸಂಘಗಳು ಸ್ವಂತದ್ದಾಗಿದ್ದರೆ, ಇನ್ನೂ ಕೆಲವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಒಟ್ಟಾರೆ ಮೈಸೂರು ಹಾಲು ಒಕ್ಕೂಟವನ್ನು ರಾಜ್ಯದಲ್ಲೇ ನಂ.1 ಸ್ಥಾನಕ್ಕೆ ಕೊಂಡೊಯ್ಯಲು ನಿಮ್ಮೆಲ್ಲರ ಸಹಕಾರ ಬಹಳ ಮುಖ್ಯ ಎಂದರು. ಸಂಘದ ಮುಖ್ಯ ಕಾರ್ಯನಿರ್ವಾಹಕಿ ಸಣ್ಣಮ್ಮ ಮಾತನಾಡಿದರು.

ಡೇರಿ ನೂತನ ಪದಾಧಿಕಾರಿಗಳು: ಮುತ್ತುರಾಜ್ (ಅಧ್ಯಕ್ಷ), ಸರೋಜಮ್ಮ (ಉಪಾಧ್ಯಕ್ಷೆ), ನಿರ್ದೇಶಕರಗಿ ಕೆ.ಉಮೇಶ್, ಹರೀಶ್, ಜಯರಾಮ್, ಕೆ.ಎ.ರಮೇಶ್, ಗೋವಿಂದ ಶೆಟ್ಟಿ, ಪುಟ್ಟಸ್ವಾಮಿ, ಕುಮಾರ, ಶಿವಣ್ಣ, ಯಶೋದಮ್ಮ ಆಯ್ಕೆಯಾಗಿದ್ದಾರೆ.

ಈ ವೇಳೆ ವಿಸ್ತರಣಾಧಿಕಾರಿ ಬಿ.ಎಸ್. ನಿಶ್ಚಿತ್, ತಾಲೂಕು ಜೆಡಿಎಸ್ ಉಪಾಧ್ಯಕ್ಷ ಕೆ.ಕುಮಾರ್, ಕಂಪಲಾಪುರ ಪಿಎಸಿಎಸ್ ಅಧ್ಯಕ್ಷ ಕೆ.ಎನ್.ಜಯಣ್ಣ, ನಿರ್ದೇಶಕ ರಾಜೇಗೌಡ, ಕಂಪಲಾಪುರ ಕೊಪ್ಪಲು ಡೇರಿ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಮಂಜು, ಮುಖಂಡರಾದ ಅಣ್ಣೇಗೌಡ, ದೇವದಾಸ್, ನಿಸಾರ್ ಅಹಮದ್, ಅಣ್ಣಯ್ಯ ಭೂಪಾಲ, ರವಿ ಸೇರಿದಂತೆ ಕಿರನೆಲ್ಲಿ ಗೇಟ್ ಗ್ರಾಮಸ್ಥರಿದ್ದರು.




ಮೂಗೂರಿನ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ಈ ವೇಳೆ ಶಾಲೆ ಉಪಾಧ್ಯಕ್ಷ ಎಂ.ಕೆ.ಸಿದ್ದರಾಜು, ಕಾಲೇಜಿನ ಪ್ರಾಂಶುಪಾಲರಾದ ರಾಜಶ್ರೀ, ಶಿಕ್ಷಕ ವೃಂದ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ನಂಜನಗೂಡಲ್ಲಿ ದಸರಾ ಆನೆ ಅದ್ಧೂರಿ ಮೆರವಣಿಗೆ

ನಂಜನಗೂಡು, ಅ.3– ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ದುಬಾರೆ ಶಿಬಿರದ ದಸರಾ ಆನೆ ಗೋಪಿಯನ್ನು ಕರೆತಂದು ಪೂಜೆ ಸಲ್ಲಿಸಿ ನಗರದಲ್ಲಿ ಅದ್ಧೂರಿಯಾಗಿ ಮೆರವಣಿಗೆ ಮಾಡುವ ಮೂಲಕ ದಸರಾ ಗಜಪಡೆಗೆ ಶಾಸಕ ಹರ್ಷವರ್ಧನ್ ಗೌರವ ಸಲ್ಲಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಶಾಸಕರು, ಮೈಸೂರು ದಸರಾ ಅಂಗವಾಗಿ ನಂಜನಗೂಡಿನಲ್ಲಿ ನಡೆಯುತ್ತಿರುವ ಗ್ರಾಮೀಣ ದಸರಾವನ್ನು ಅದ್ಧೂರಿಯಾಗಿಸಲು ಜನರ ಸದಭಿರುಚಿ ಮೇರೆಗೆ ದಸರಾ ಜಂಬೂಸವಾರಿಯಲ್ಲಿ ಭಾಗವಹಿಸುವ ಆನೆಯನ್ನು ಕರೆತಂದು ಮೆರವಣಿಗೆ ಮಾಡಲಾಗಿದೆ ಎಂದರು.

ಹಿಂದೆಂದಿಗಿಂತ ಮೈಸೂರು ದಸರಾ ಅದ್ಧೂರಿಯಾಗಿ ನಡೆಯುತ್ತಿದೆ. ಬಹಳ ಅಚ್ಚುಕಟ್ಟಾಗಿ ಸಕಲ ವ್ಯವಸ್ಥೆ ಮಾಡಲಾಗಿದೆ. ಗ್ರಾಮೀಣ ದಸರಾವನ್ನು ಅದ್ಧೂರಿಯಾಗಿಸುವ ಸಲುವಾಗಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಜೊತೆ ಮಾತನಾಡಿ ದಸರಾ ಆನೆಗಳನ್ನು ಕಳುಹಿಸಿಕೊಡುವಂತೆ ಮನವಿ ಮಾಡಲಾಗಿತ್ತು. ಅದರಂತೆ ಸಿಎಂ ಬಸವರಾಜ ಬೊಮ್ಮಾಯಿ ಒಪ್ಪಿ ದಸರಾ ಆನೆಯನ್ನು ನಂಜನಗೂಡಿಗೆ ಕಳುಹಿಸಿಕೊಟ್ಟಿದ್ದಾರೆ ಎಂದರು.



ದಸರಾ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ: ಮೈಸೂರಿನಲ್ಲಿ ನಡೆಯುವ ದಸರಾ ವಿಜಯದಶಮಿ ಹಾಗೂ ಪಂಜಿನ ಕವಾಯಿತು ನೇರ ಪ್ರಸಾರ ವೀಕ್ಷಣೆಗಾಗಿ ನಗರದ ಅರಮನೆ ಮಾಳದಲ್ಲಿ ಎಲ್‌ಇಡಿ ಪರದೆ ಹಾಕಿ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಇದಕ್ಕೂ ಮುನ್ನ ದಸರಾ ಆನೆ ಗೋಪಿಯನ್ನು ದೇವಾಲಯದ ಮುಂಭಾಗ ಕರೆತಂದು ಪೂಜೆ ಸಲ್ಲಿಸಿದ ಬಳಿಕ ಜಾನಪದ ಕಲಾ ತಂಡಗಳಾದ ಕಂಸಾಳೆ, ನಾದಸ್ವರ, ನೂರಾರು ಮಹಿಳೆಯರ ಪೂರ್ಣಕುಂಭದೊಂದಿಗೆ ನಗರದ ಆರ್.ಪಿ.ರಸ್ತೆ, ಬಜಾರ್ ರಸ್ತೆ, ಬ್ರಾಡ್ ವೇ ರಸ್ತೆ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಮೆರವಣಿಗೆ ಮಾಡಲಾಯಿತು. ರಸ್ತೆಯುದ್ದಕ್ಕೂ ಜನರು ಆನೆ ವೀಕ್ಷಣೆ ಮಾಡಿ ಸಂತಸಪಟ್ಟರು. ಮೆರವಣಿಗೆಯಲ್ಲಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಧರ್ಮಪತ್ನಿ ಭಾಗ್ಯಮ್ಮ ಮತ್ತು ಶಾಸಕ ಬಿ.ಹರ್ಷವರ್ಧನ್ ಅವರ ಪತ್ನಿ ಪೂರ್ಣಿಮಾ ಪ್ರಸಾದ್ ಹೆಜ್ಜೆ ಹಾಕಿ ಗಮನ ಸೆಳೆದರು.

> ದೇವಾಲಯದ ಆನೆ ಗೌರಿ ಸಂಪೂರ್ಣವಾಗಿ ಗುಣಮುಖವಾಗಿದ್ದು, ಶೀಘ್ರ ದೇವಾಲಯಕ್ಕೆ ಕರೆತರಲು ಕ್ರಮ ವಹಿಸಲಾಗಿದೆ. ಈ ಸಂಬಂಧ ಕಡತ ವಿಲೇವಾರಿ ಮಾಡಲಾಗಿದ್ದು, ಆನೆಯ ಆರೋಗ್ಯ ಪರೀಕ್ಷೆ ನಡೆಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಿದ ನಂತರ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಆನೆಯನ್ನು ದೇವಾಲಯಕ್ಕೆ ಕರೆತರಲಾಗುವುದು.
> - ಬಿ.ಹರ್ಷವರ್ಧನ್, ಶಾಸಕ.

ಈ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ಮಹಾದೇವ ಪ್ರಸಾದ್, ಕಪಿಲೇಶ್, ಬಸವಣ್ಣ, ಬಾಲರಾಜು, ಮುಖಂಡರಾದ ಬಾಲಚಂದ್ರ, ಶಂಕರಪ್ಪ, ನಂದಿನಿ, ಕೋಮಲ, ತಹಸೀಲ್ದಾರ್ ಎಂ.ಶಿವಮೂರ್ತಿ, ಇಓ ಎಚ್.ಜಿ.ಶ್ರೀನಿವಾಸ್, ಶಿಶು ಅಭಿವೃದ್ಧಿ ಅಧಿಕಾರಿ ಮಂಜುಳಾ ಹಾಗೂ ನೂರಾರು ಸಂಖ್ಯೆಯ ಅಂಗನವಾಡಿ ಕಾರ್ಯಕರ್ತರು ಇದ್ದರು.